ಶನಿವಾರ, ಫೆಬ್ರುವರಿ 8, 2025 | ಬೆಂಗಳೂರು | ₹ 7.00 | ಸಂಪುಟ 78| ಸಂಚಿಕೆ 39 | ಪುಟ 18
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಚರ್ಚೆ
ಹೈಕೋರ್ಟ್‌ಗಳ ನ್ಯಾಯಮೂರ್ತಿ ಹುದ್ದೆಗೆ ನಿವೃತ್ತ ನ್ಯಾಯಮೂರ್ತಿಗಳ ನೇಮಕ ನಿರ್ಣಯ ಸರಿಯೇ?

ಜಯಲಲಿತಾ ಉತ್ತರಾಧಿಕಾರಿಯಿಂದ 'ಸುಪ್ರೀಂ'ಗೆ ಮೊರೆ 6

'ಮತದಾರರ ಪಟ್ಟಿಯಲ್ಲಿ ಮಹಾ ಅಕ್ರಮ' 11

ಸೆನ್ಸೆಕ್ಸ್	ನಿಫ್ಟಿ	₹/$
77,860 ▼	23,559 ▼	87.50 ▲

ರೆಪೊ ದರ ಶೇ 0.25ರಷ್ಟು ಇಳಿಕೆ

ಮುಂಬೈ (ಪಿಟಿಐ): ಭಾರತೀಯ ರಿಸರ್ವ್ ಬ್ಯಾಂಕ್‌ನ ಹಣಕಾಸು ನೀತಿ ಸಮಿತಿ (ಎಂಪಿಸಿ) ಸಭೆಯು ಶುಕ್ರವಾರ, 5 ವರ್ಷಗಳ ಬಳಿಕ ರೆಪೊ ದರದಲ್ಲಿ ಶೇ0.25ರಷ್ಟು ಕಡಿತಗೊಳಿಸಿದೆ.

ಸದ್ಯ ರೆಪೊ ದರ ಶೇ 6.50ರಷ್ಟಿದ್ದು, ಶೇ 6.25ಕ್ಕೆ ಇಳಿಕೆಯಾಗಲಿದೆ. ಇದರಿಂದ ರೆಪೊ ದರ ಆಧರಿತ ಗೃಹ, ವಾಹನ ಹಾಗೂ ಇತರೆ ಸಾಲ ಪಡೆದವರಿಗೆ ಬಡ್ಡಿದರ ಕಡಿತವಾಗುವ ನಿರೀಕ್ಷೆಯಿದೆ.

2020ರ ಮೇನಲ್ಲಿ ಆರ್‌ಬಿಐ ಬಡ್ಡಿದರ ಪರಿಷ್ಕರಿಸಿತ್ತು. 2023ರ ಫೆಬ್ರುವರಿಯಿಂದ ಸತತ 11 ಸಭೆಗಳಲ್ಲಿ ಯಥಾಸ್ಥಿತಿ ಕಾಯ್ದುಕೊಂಡಿತ್ತು.

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಮೈಕ್ರೊ ಫೈನಾನ್ಸ್ ವ್ಯವಹಾರಗಳ ನಿಯಂತ್ರಣ: ವಾಪಸ್ ಕಳುಹಿಸಿದ ರಾಜ್ಯಪಾಲ

ಸುಗ್ರೀವಾಜ್ಞೆಗೆ ಅಂಕಿತ ಇಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಲ ವಸೂಲಿ ವೇಳೆ ಮೈಕ್ರೊ ಫೈನಾನ್ಸ್ ಕಂಪನಿಗಳು ಮತ್ತು ಲೇವಾದೇವಿದಾರರು ಅನುಸರಿಸುವ ಕಾನೂನುಬಾಹಿರ ಕ್ರಮಗಳು ಹಾಗೂ ಕಿರುಕುಳದಿಂದ ಸಾಲಗಾರರನ್ನು ರಕ್ಷಿಸುವ ಉದ್ದೇಶದಿಂದ ರಾಜ್ಯ ಸರ್ಕಾರವು ರೂಪಿಸಿರುವ, 'ಕರ್ನಾಟಕ ಮೈಕ್ರೊ ಫೈನಾನ್ಸ್ (ಬಲವಂತದ ಕ್ರಮಗಳ ತಡೆ) ಸುಗ್ರೀವಾಜ್ಞೆ–2025' ಅನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್ ವಾಪಸ್ ಕಳಿಸಿದ್ದಾರೆ.

ಈ ಸಂಬಂಧ ರಾಜಭವನದಿಂದ ರಾಜ್ಯ ಸರ್ಕಾರಕ್ಕೆ ಶುಕ್ರವಾರ ಪತ್ರ ಬರೆಯಲಾಗಿದೆ. ರಾಜ್ಯಪಾಲರು ಪತ್ರದಲ್ಲಿ ಎತ್ತಿರುವ ಆಕ್ಷೇಪಗಳಿಗೆ ಕಾನೂನು ಸಚಿವ ಎಚ್‌.ಕೆ.ಪಾಟೀಲ ಅವರು ಪ್ರತಿಕ್ರಿಯೆ ಬರೆದಿದ್ದು, ಆಕ್ಷೇಪಗಳನ್ನು ಅಲ್ಲಗೆಳೆದಿದ್ದಾರೆ.

6ನೇ ಪುಟ ನೋಡಿ

ರಾಜ್ಯಪಾಲರ ಆಕ್ಷೇಪ	ಕಾನೂನು ಸಚಿವರ ಉತ್ತರ
ನೋಂದಣಿ ಮತ್ತು ಪರವಾನಗಿ ಇಲ್ಲದ ಸಂಸ್ಥೆಗಳು ನೀಡಿರುವ ಸಾಲದ ಬಾಕಿ ಮತ್ತು ಬಡ್ಡಿ ಕೈಬಿಡಬೇಕು ಎನ್ನಲಾಗಿದೆ	ನೋಂದಣಿ ಮತ್ತು ಪರವಾನಗಿ ಇಲ್ಲದ ವ್ಯಕ್ತಿ/ಸಂಸ್ಥೆ ಸಾಲ ನೀಡುವುದು, ಬಡ್ಡಿ–ಚಕ್ರಬಡ್ಡಿ ವಸೂಲಿ ಮಾಡುವುದು ಕಾನೂನುಬಾಹಿರ
ಕಾನೂನಾತ್ಮಕವಾಗಿ ಸಾಲ ನೀಡಿದವರಿಗೆ ಇದರಿಂದ ತೊಂದರೆಯಾಗುತ್ತದೆ. ಅವರಿಗಾಗುವ ನಷ್ಟವನ್ನು ತುಂಬಿಕೊಳ್ಳಲು ಸಾಧ್ಯವಾಗುವುದಿಲ್ಲ	ಸಾಲ ವಸೂಲಾತಿಗೆ ಹಿಂಸೆ/ಒತ್ತಡ ತಂತ್ರ/ಕಿರುಕುಳ ನೀಡುವುದನ್ನು ಸುಗ್ರೀವಾಜ್ಞೆ ನಿಷೇಧಿಸುತ್ತದೆಯೇ ಹೊರತು, ಕಾನೂನಾತ್ಮಕವಾಗಿ ಸಾಲ ನೀಡಿದವರು ಸಾಲ ಮತ್ತು ಬಡ್ಡಿಯನ್ನು ವಸೂಲಿ ಮಾಡಬಾರದು ಎಂದು ಸುಗ್ರೀವಾಜ್ಞೆಯಲ್ಲಿ ಪ್ರಸ್ತಾಪಿಸಿಯೇ ಇಲ್ಲ
ಮೈಕ್ರೊ ಫೈನಾನ್ಸ್ ಅಡಿ ಗರಿಷ್ಠ ₹3 ಲಕ್ಷ ಸಾಲ ನೀಡಬಹುದಷ್ಟೇ. ಅಂಥದ್ದರಲ್ಲಿ 10 ವರ್ಷ ಜೈಲು ಶಿಕ್ಷೆ ಮತ್ತು ₹5 ಲಕ್ಷ ದಂಡ ವಿಧಿಸುವುದು ನೈಸರ್ಗಿಕ ನ್ಯಾಯ ತತ್ವಕ್ಕೆ ವಿರುದ್ಧ	ಸಾಲದ ಮೊತ್ತದ ಆಧಾರದಲ್ಲಿ ಶಿಕ್ಷೆ ಮತ್ತು ದಂಡ ವಿಧಿಸಿಲ್ಲ. ಬದಲಿಗೆ ವಸೂಲಿ ಸಂದರ್ಭದಲ್ಲಿ ಎಸಗಿದ ಹಿಂಸೆ/ಕಿರುಕುಳ/ಕಾನೂನುಬಾಹಿರ ಕೃತ್ಯಗಳನ್ನು ಆಧರಿಸಿ ಶಿಕ್ಷೆ ಮತ್ತು ದಂಡದ ಪ್ರಮಾಣ ನಿರ್ಧರಿಸಲಾಗಿದೆ

'ಅಧಿಕಾರಿಗಳ ಲಾಬಿ'

'ಸಾಲ ವಸೂಲಾತಿಯಲ್ಲಿ ಮೈಕ್ರೊ ಫೈನಾನ್ಸ್ ಕಂಪನಿಗಳ ಬಲವಂತದ ಕ್ರಮಗಳ ನಿಯಂತ್ರಣಕ್ಕೆ ಈ ಸುಗ್ರೀವಾಜ್ಞೆಯ ಅವಶ್ಯಕತೆಯೇ ಇಲ್ಲ' ಎಂದು ರಾಜ್ಯ ಸರ್ಕಾರದ ಕೆಲ ಉನ್ನತ ಅಧಿಕಾರಿಗಳು ರಾಜ್ಯಪಾಲರ ಬಳಿ ಚರ್ಚಿಸಿದ್ದಾರೆ. ಈ ಕಾರಣದಿಂದಲೇ ರಾಜ್ಯಪಾಲರು ಸುಗ್ರೀವಾಜ್ಞೆಯನ್ನು ವಾಪಸ್ ಕಳುಹಿಸಿದ್ದಾರೆ ಎಂದು ಗೊತ್ತಾಗಿದೆ.

ರಾಜ್ಯ ಸರ್ಕಾರದ ಉನ್ನತ ಹುದ್ದೆಗಳಲ್ಲಿ ಇರುವ ನಾಲ್ಕೈದು ಅಧಿಕಾರಿಗಳು ಈಚೆಗೆ ರಾಜ್ಯಪಾಲರನ್ನು ಭೇಟಿ ಮಾಡಿದ್ದಾರೆ. 'ಮೈಕ್ರೊ ಫೈನಾನ್ಸ್ ಕಂಪನಿಗಳ ನಿಯಂತ್ರಣಕ್ಕೆ ಈಗಾಗಲೇ ಕಾನೂನುಗಳಿವೆ. ಹೊಸ ಕಾನೂನಿನ ಅವಶ್ಯಕತೆ ಇಲ್ಲ' ಎಂದು ರಾಜ್ಯಪಾಲರಿಗೆ ಮನವರಿಕೆ ಮಾಡಿಕೊಡಲು ಯತ್ನಿಸಿದ್ದಾರೆ. ಸುಗ್ರೀವಾಜ್ಞೆಯ ಸಂಬಂಧ ಕಾನೂನು ಸಚಿವ ಎಚ್‌.ಕೆ.ಪಾಟೀಲ ನೇತೃತ್ವದಲ್ಲಿ ನಡೆದ ಸಭೆಯಲ್ಲೂ ಈ ಅಧಿಕಾರಿಗಳು ಇಂಥದ್ದೇ ಆಕ್ಷೇಪಗಳನ್ನು ಎತ್ತಿದ್ದರು ಎಂದು ಮೂಲಗಳು ಹೇಳಿವೆ.

'ಸಿಬಿಐ ತನಿಖೆ ಬೇಕಿಲ್ಲ'

ಮುಡಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆರೋಪಿಯಾಗಿರುವ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನಗಳ ಅಕ್ರಮ ಹಂಚಿಕೆ ಆರೋಪ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಬೇಕು' ಎಂಬ ಕೋರಿಕೆಯನ್ನು ಹೈಕೋರ್ಟ್ ಖಡಾಖಂಡಿತವಾಗಿ ನಿರಾಕರಿಸಿದೆ.

ಪ್ರಕರಣದ ದೂರುದಾರ, ಮೈಸೂರಿನ ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ತಿರಸ್ಕರಿಸಿರುವ, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಪೀಠದ (ಧಾರವಾಡ) ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಕಾಯ್ದಿರಿಸಿದ್ದ ಮಹತ್ವದ ತೀರ್ಪನ್ನು ಶುಕ್ರವಾರ ಪ್ರಕಟಿಸಿದರು. ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಪೀಠವು ಮೂರು ಪ್ರಶ್ನೆಗಳನ್ನು ನಿಗದಿ ಮಾಡಿಕೊಂಡಿತ್ತು.

- ಲೋಕಾಯುಕ್ತರು, ಲೋಕಾಯುಕ್ತ ಸಂಸ್ಥೆಯ ಸ್ವಾತಂತ್ರ್ಯವು ಪ್ರಶ್ನಾರ್ಹವೇ?
- ಸಾಂವಿಧಾನಿಕ ಕೋರ್ಟ್‌ಗಳು ಯಾವ ಸಂದರ್ಭದಲ್ಲಿ; ತನಿಖೆ, ಮುಂದುವರಿದ ತನಿಖೆ, ಮರು ತನಿಖೆಯನ್ನು ಸಿಬಿಐಗೆ ಹಸ್ತಾಂತರಿಸಬೇಕು ಮತ್ತು ಎಂತಹ ಸನ್ನಿವೇಶದಲ್ಲಿ ನಿರಾಕರಿಸಬೇಕು?

6ನೇ ಪುಟ ನೋಡಿ

ಪೋಕ್ಸೊ ಪ್ರಕರಣ: ಬಿಎಸ್‌ವೈ ಸದ್ಯಕ್ಕೆ ನಿರಾಳ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ–2012) ಕಾಯ್ದೆಯಡಿ ತಮ್ಮ ವಿರುದ್ಧ ದಾಖಲಾಗಿರುವ ಪ್ರಕರಣ ರದ್ದುಪಡಿಸುವಂತೆ ಕೋರಿ ಮಾಜಿ ಮುಖ್ಯಮಂತ್ರಿ ಬಿ.ಎಸ್‌.ಯಡಿಯೂರಪ್ಪ ಸಲ್ಲಿಸಿದ್ದ ಅರ್ಜಿಯನ್ನು ಭಾಗಶಃ ಪುರಸ್ಕರಿಸಿರುವ ಹೈಕೋರ್ಟ್, ಅಪರಾಧವನ್ನು ಪರಿಗಣಿಸಿದ್ದ ವಿಚಾರಣಾ ನ್ಯಾಯಾಲಯದ ಆದೇಶವನ್ನು ವಜಾಗೊಳಿಸಿದೆ.

ಅರ್ಜಿ ವಿಚಾರಣೆ ನಡೆಸಿದ್ದ, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಪೀಠದ (ಧಾರವಾಡ) ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರು ಕಾಯ್ದಿರಿಸಿದ್ದ ತೀರ್ಪನ್ನು ಶುಕ್ರವಾರ ಪ್ರಕಟಿಸಿದರು.

ಇದೇ ವೇಳೆ ನ್ಯಾಯಪೀಠವು ಯಡಿಯೂರಪ್ಪನವರಿಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದೆ.

5ನೇ ಪುಟ ನೋಡಿ

ಕೇಜ್ರಿವಾಲ್‌ಗೆ ಎಸಿಬಿ ನೋಟಿಸ್

ನವದೆಹಲಿ (ಪಿಟಿಐ): 'ನಮ್ಮ ಅಭ್ಯರ್ಥಿಗಳನ್ನು ಬಿಜೆಪಿಯತ್ತ ಸೆಳೆಯಲು ಆ ಪಕ್ಷದ ಕೆಲವರು ಹಣದ ಆಮಿಷ ಒಡ್ಡಿದ್ದಾರೆ' ಎಂಬ ಆರೋಪದ ಕುರಿತು ಸಾಕ್ಷ್ಯ ಒದಗಿಸುವಂತೆ ಕೋರಿ ದೆಹಲಿ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ), ಎಎಪಿ ಸಂಚಾಲಕ ಅರವಿಂದ ಕೇಜ್ರಿವಾಲ್ ಅವರಿಗೆ ಶುಕ್ರವಾರ ನೋಟಿಸ್ ಜಾರಿಗೊಳಿಸಿದೆ. 7

ಮೈಕ್ರೊ ಫೈನಾನ್ಸ್: 'ಸ್ತ್ರೀಶಕ್ತಿ'ಯೇ ಶಾಖೆ

ಬೆಂಗಳೂರು: ಎರಡೂವರೆ ದಶಕಗಳ ಹಿಂದೆ ಅಸ್ತಿತ್ವಕ್ಕೆ ಬಂದ 'ಸ್ತ್ರೀಶಕ್ತಿ' ಯೋಜನೆ ಬಡ ಮತ್ತು ತಳವರ್ಗದ ಮಹಿಳೆಯರಿಗೆ ಆರ್ಥಿಕ ಶಕ್ತಿ ತುಂಬಿ, ಸಬಲೀಕರಣದತ್ತ ಮಹತ್ವದ ಹೆಜ್ಜೆ ಇಟ್ಟಿದ್ದರೂ, ಯೋಜನೆಯಡಿ ರಚಿಸಿದ ಸ್ವಸಹಾಯ ಗುಂಪುಗಳೇ ಇಂದು 'ಮೈಕ್ರೊ ಫೈನಾನ್ಸ್'ಗಳ ವಹಿವಾಟು ವಿಸ್ತರಣೆಯ ಶಾಖೆಗಳಾಗಿವೆ. 6

ಪೌರತ್ವ: ಟ್ರಂಪ್ ಆದೇಶಕ್ಕೆ ತಡೆ

ಬೂಸ್ಟನ್ (ಎಪಿ): ಅಮೆರಿಕದಲ್ಲಿ ನೆಲಸಿರುವ ಅಕ್ರಮ ವಲಸಿಗರ ಮಕ್ಕಳಿಗೆ ಜನ್ಮದತ್ತವಾಗಿ ಪೌರತ್ವ ಸಿಗುವುದನ್ನು ನಿರ್ಬಂಧಿಸುವ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಕಾರ್ಯಕಾರಿ ಆದೇಶಕ್ಕೆ ಸಿಯಾಟಲ್‌ನ ಫೆಡರಲ್ ನ್ಯಾಯಾಲಯವು ರಾಷ್ಟ್ರದಾದ್ಯಂತ ಅನಿರ್ದಿಷ್ಟಾವಧಿವರೆಗೆ ಗುರುವಾರ ತಡೆ ನೀಡಿದೆ. 10

12ರಿಂದ ಮೋದಿ ಅಮೆರಿಕ ಪ್ರವಾಸ

ನವದೆಹಲಿ (ಪಿಟಿಐ): 'ಪ್ರಧಾನಿ ನರೇಂದ್ರ ಮೋದಿ ಅವರು ಫೆಬ್ರುವರಿ 12ರಿಂದ ಎರಡು ದಿನ ಅಮೆರಿಕ ಪ್ರವಾಸ ಕೈಗೊಳ್ಳಲಿದ್ದು, ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಜತೆ ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆ. ಇದಕ್ಕೂ ಮುನ್ನ ಫೆ. 10 ರಿಂದ ಫ್ರಾನ್ಸ್ ಪ್ರವಾಸ ಕೈಗೊಳ್ಳಲಿದ್ದಾರೆ ಎಂದು ವಿದೇಶಾಂಗ ಸಚಿವಾಲಯ ಪ್ರಕಟಿಸಿದೆ. 11

ಮಯೂರ ಓದಿರಿ

ರೌಡಿ ಬಾಂಬೆ ಸಲೀಂ ಬಂಧನ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ಕೊಲೆ, ದರೋಡೆ, ಕಳ್ಳತನ, ಸುಲಿಗೆ ಸೇರಿದಂತೆ ವಿವಿಧ ಅಪರಾಧ ಕೃತ್ಯಗಳ ಮೂಲಕ ಕುಖ್ಯಾತನಾಗಿರುವ ಬಾಂಬೆ ಸಲೀಂನನ್ನು ಚಿಕ್ಕಬಳ್ಳಾಪುರ ಪೊಲೀಸರು ಬಂಧಿಸಿದ್ದಾರೆ.

ಬಾಂಬೆ ಸಲೀಂ ವಿರುದ್ಧ ರಾಜ್ಯದ ವಿವಿಧ ಠಾಣೆಗಳಲ್ಲಿ 30ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ. ಈ ಹಿಂದೆ ಹಲವು ಪ್ರಕರಣಗಳಲ್ಲಿ ಈತನನ್ನು ಪೊಲೀಸರು ವಶಕ್ಕೆ ಪಡೆದು ಜೈಲಿಗೂ ಕಳುಹಿಸಿದ್ದರು. ಜೈಲಿನಲ್ಲಿ ಇದ್ದುಕೊಂಡೇ ಸಹಚರರ ಮೂಲಕ ಕಳ್ಳತನ, ದರೋಡೆ ನಡೆಸುತ್ತಿದ್ದ.

ಬೆಂಗಳೂರಿನ ಆವಲಹಳ್ಳಿ ಬಾಂಬೆ ಸಲೀಂ, 10ನೇ ವಯಸ್ಸಿನಲ್ಲಿಯೇ ಮುಂಬೈನಲ್ಲಿ ನಡೆದ ಕೊಲೆ ಪ್ರಕರಣವೊಂದರಲ್ಲಿ ಭಾಗಿಯಾಗಿದ್ದ. ಈ ಮೂಲಕ ಅಪರಾಧ ಜಗತ್ತಿಗೆ ಕಾಲಿಟ್ಟ ಎಂದು ಮೂಲಗಳು ತಿಳಿಸಿವೆ.

ಅರ್ಕಾವತಿ ಬಡಾವಣೆ ಭೂಸ್ವಾಧೀನ ● ಹೈಕೋರ್ಟ್ ತೀರ್ಪಿಗೆ ಆಕ್ಷೇಪ

ಸಹಜ ನ್ಯಾಯ ತತ್ವ ಉಲ್ಲಂಘನೆ: 'ಸುಪ್ರೀಂ'

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಆಕ್ಷೇಪಣೆ ಸಲ್ಲಿಸಲು ಮೇಲ್ಮನವಿದಾರರಿಗೆ ಅವಕಾಶ ನೀಡದಕ್ಕೆ ಆಕ್ಷೇಪ
- ವಿಭಾಗೀಯ ಪೀಠದ 2019ರ ಸೆಪ್ಟೆಂಬರ್ 27ರ ಆದೇಶ ರದ್ದು
- ಪ್ರಕರಣವನ್ನು ಹೊಸದಾಗಿ ಪರಿಗಣಿಸಲು ಸೂಚನೆ

ನವದೆಹಲಿ: ಸಂತ್ರಸ್ತ ಭೂಮಾಲೀಕರಿಗೆ ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡದೆ ಅವರ ಭೂಮಿಯನ್ನು ಅರ್ಕಾವತಿ ಬಡಾವಣೆಗಾಗಿ ಸ್ವಾಧೀನಪಡಿಸಿಕೊಳ್ಳಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ (ಬಿಡಿಎ) ಅನುಮತಿ ನೀಡಿದ ಕರ್ನಾಟಕ ಹೈಕೋರ್ಟ್ ವಿಭಾಗೀಯ ಪೀಠದ ತೀರ್ಪಿಗೆ ಸುಪ್ರೀಂ ಕೋರ್ಟ್ ಆಕ್ಷೇಪ ವ್ಯಕ್ತಪಡಿಸಿದೆ.

ಈ ಪ್ರಕರಣದಲ್ಲಿ ಸಹಜ ನ್ಯಾಯದ ತತ್ವದ ಉಲ್ಲಂಘನೆಯಾಗಿದೆ ಎಂದು ಅಭಿಪ್ರಾಯಪಟ್ಟಿರುವ ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಮತ್ತು ಕೆ. ವಿನೋದ್ ಚಂದ್ರನ್ ಅವರ ಪೀಠವು, ಜಮೀನು ಸ್ವಾಧೀನ ಪಡಿಸಿಕೊಳ್ಳಲು ಪ್ರಾಧಿಕಾರಕ್ಕೆ ಅವಕಾಶ ನೀಡಿದ ವಿಭಾಗೀಯ ಪೀಠದ 2019ರ ಸೆಪ್ಟೆಂಬರ್ 27ರ ಆದೇಶವನ್ನು ರದ್ದುಗೊಳಿಸಿತು.

ಮೇಲ್ಮನವಿದಾರರ ಜಮೀನು ಹೊರಗಿಟ್ಟಿರುವುದರಿಂದ ಹಾಗೂ 2003ರ ಪ್ರಾಥಮಿಕ ಅಧಿಸೂಚನೆಗೆ ಮೊದಲೇ ಆ ಜಾಗದಲ್ಲಿ ಕಟ್ಟಡಗಳು ಇದ್ದುದರಿಂದ, ಮೇಲ್ಮನವಿದಾರರ ಜಮೀನನ್ನು ಸ್ವಾಧೀನ ಪ್ರಕ್ರಿಯೆಯಿಂದ ಹೊರಗಿಡಬಹುದು ಎಂದು ಏಕ ಸದಸ್ಯ ಪೀಠದ ನ್ಯಾಯಮೂರ್ತಿ ತೀರ್ಪು ನೀಡಿದ್ದಾರೆ ಎಂಬುದನ್ನು ನ್ಯಾಯಪೀಠ ಗಮನಿಸಿತು.



ಸಂತ್ರಸ್ತ ಭೂಮಾಲೀಕ ಡಿ.ಎಂ. ಜಗದೀಶ್ ಸಲ್ಲಿಸಿರುವ ಮೇಲ್ಮನವಿಯ ವಿಚಾರಣೆ ನಡೆಸಿದ ನ್ಯಾಯಪೀಠ, 'ಪ್ರಾಧಿಕಾರ ಸಲ್ಲಿಸಿದ ಪ್ರಮಾಣಪತ್ರವನ್ನಷ್ಟೇ ಪರಿಗಣಿಸಿ ಅದೇ ದಿನ ತೀರ್ಪು ನೀಡಿದ ವಿಭಾಗೀಯ ಪೀಠದ ನಡೆ ಸರಿಯಿಲ್ಲ. ಪ್ರಾಧಿಕಾರದ ಪ್ರಮಾಣಪತ್ರಕ್ಕೆ ಆಕ್ಷೇಪಣೆ ಸಲ್ಲಿಸಲು ಮೇಲ್ಮನವಿದಾರರಿಗೆ ಅವಕಾಶ ನೀಡದಿರುವುದು ಸಹಜ ನ್ಯಾಯದ ತತ್ವಗಳ ಉಲ್ಲಂಘನೆ' ಎಂದು ಹೇಳಿದೆ. ಏಕ ಸದಸ್ಯ ಪೀಠ ನೀಡಿರುವ ಸಮಂಜಸ ತೀರ್ಪನ್ನು ವಿಭಾಗೀಯ ಪೀಠವು ಪ್ರಾಧಿಕಾರದ ಪ್ರಮಾಣಪತ್ರದ ಆಧಾರದಲ್ಲಿ ರದ್ದುಗೊಳಿಸಿದೆ ಎಂದು ಪೀಠ ಅಸಮಾಧಾನ ವ್ಯಕ್ತಪಡಿಸಿದೆ. ಕಾನೂನಿನ ಪ್ರಕಾರ ಈ ಪ್ರಕರಣವನ್ನು ಹೊಸದಾಗಿ ಪರಿಗಣಿಸಬೇಕು ಎಂದು ವಿಭಾಗೀಯ ಪೀಠಕ್ಕೆ ಸೂಚಿಸಿದೆ.

ಪ್ರಕರಣವೇನು: ಅರ್ಕಾವತಿ ಬಡಾವಣೆ ನಿರ್ಮಾಣಕ್ಕಾಗಿ 380 ಎಕರೆ 4 ಗುಂಟೆ ಸ್ವಾಧೀನಕ್ಕೆ 2003ರ ಫೆಬ್ರುವರಿ 3ರಂದು ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿತ್ತು. 2004ರ ಫೆಬ್ರುವರಿ 23ರಂದು ಅಂತಿಮ ಅಧಿಸೂಚನೆ ಹೊರಡಿಸಿ, 380 ಎಕರೆಯಲ್ಲಿ 154 ಎಕರೆ 26 ಗುಂಟೆಯನ್ನು ಭೂಸ್ವಾಧೀನದಿಂದ ಕೈಬಿಡಲಾಗಿತ್ತು. 2014ರ ಜೂನ್ 18ರಂದು ಪರಿಷ್ಕೃತ ಅಧಿಸೂಚನೆ ಹೊರಡಿಸಿ, 66 ಎಕರೆ 3 ಗುಂಟೆಯನ್ನು ಸ್ವಾಧೀನದಿಂದ ಹೊರಗಿಡಲಾಗಿತ್ತು.

ಮೇಲ್ಮನವಿದಾರರ ತಂದೆಯವರು ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದರು. ಭೂಸ್ವಾಧೀನವನ್ನು ಏಕಸದಸ್ಯ ಪೀಠ ರದ್ದುಗೊಳಿಸಿತ್ತು. ಪ್ರಾಧಿಕಾರವು ವಿಭಾಗೀಯ ಪೀಠದ ಮೊರೆ ಹೋಗಿತ್ತು. ಭೂಸ್ವಾಧೀನ ಪ್ರಕ್ರಿಯೆಯನ್ನು ವಿಭಾಗೀಯ ಪೀಠ ಎತ್ತಿ ಹಿಡಿದಿತ್ತು. ಆದರೆ, ಭೂಮಾಲೀಕರು ತಮ್ಮ ಭೂಮಿಯನ್ನು ಭೂಸ್ವಾಧೀನದಿಂದ ಹೊರಗಿಡಬೇಕೆಂದು ಬಯಸಿದರೆ 30 ದಿನಗಳಲ್ಲಿ ಅರ್ಜಿಗಳನ್ನು ಸಲ್ಲಿಸಲು ಅವಕಾಶ ನೀಡುವುದು ಸೇರಿದಂತೆ ಹಲವಾರು ನಿರ್ದೇಶನಗಳನ್ನು ನೀಡಿತ್ತು.

ತನ್ನ ಜಮೀನಿಗೆ ಹೊಂದಿಕೊಂಡಿರುವ ಜಮೀನನ್ನು ಭೂಸ್ವಾಧೀನದಿಂದ ಕೈಬಿಡಲಾಗಿದೆ. ಹೀಗಾಗಿ, ತಾವೂ ಅದರ ಪ್ರಯೋಜನ ಪಡೆಯಲು ಅರ್ಹರು ಎಂದು ಮೇಲ್ಮನವಿದಾರರು ಮನವಿ ಸಲ್ಲಿಸಿದ್ದರು. ಪ್ರಾಥಮಿಕ ಅಧಿಸೂಚನೆಗೂ ಮೊದಲು ಪ್ರಶ್ನಾರ್ಹ ಭೂಮಿಯಲ್ಲಿ ಕೆಲವು ರಚನೆಗಳು ಇದ್ದವು ಎಂದು ಅವರು ಪ್ರತಿಪಾದಿಸಿದ್ದರು.

ಈ ಮನವಿಯನ್ನು ಪ್ರಾಧಿಕಾರ ತಿರಸ್ಕರಿಸಿತ್ತು. ಇದರಿಂದಾಗಿ, ಅವರು ಮತ್ತೆ ಹೈಕೋರ್ಟ್ ಮೆಟ್ಟಿಲೇರಿದ್ದರು. ಈ ಅರ್ಜಿಯನ್ನು ಹೈಕೋರ್ಟ್ ಅಂಗೀಕರಿಸಿ, ಭೂಸ್ವಾಧೀನ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ ಅವರ ಮನವಿಯನ್ನು ಪರಿಗಣಿಸುವಂತೆ ನಿರ್ದೇಶನ ನೀಡಿತ್ತು. ಅಧಿಕಾರಿಯವರು ಸ್ಥಳ ಪರಿಶೀಲನೆ ನಡೆಸಿದ ಬಳಿಕವೂ ಯಾವುದೇ ಆದೇಶ ನೀಡದ ಕಾರಣ, ಮೇಲ್ಮನವಿದಾರರು ಮತ್ತೆ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ಮೇಲ್ಮನವಿದಾರರು ಪರಿಹಾರ ಪಡೆಯಲು ಅರ್ಹರು ಎಂದು ಹೈಕೋರ್ಟ್‌ನ ಏಕಸದಸ್ಯ ಪೀಠ ತೀರ್ಪು ನೀಡಿತ್ತು. ಆದಾಗ್ಯೂ, ವಿಭಾಗೀಯ ಪೀಠವು ಬಿಡಿಎ ಸಲ್ಲಿಸಿದ ಮೇಲ್ಮನವಿಯನ್ನು ಅಂಗೀಕರಿಸಿತ್ತು. ಬಳಿಕ ಸಂತ್ರಸ್ತ ಭೂಮಾಲೀಕರು ಸುಪ್ರೀಂ ಕೋರ್ಟ್‌ಗೆ ವಿಶೇಷ ಮೇಲ್ಮನವಿ ಅರ್ಜಿ ಸಲ್ಲಿಸಿದ್ದರು.

ಫೆ. 10ಕ್ಕೆ ಪ್ರತಿಭಟನೆ

ಬೆಂಗಳೂರು: ಖಾಲಿ ಇರುವ 80 ಸಾವಿರ ಶಿಕ್ಷಕರ ಹುದ್ದೆಗಳ ಭರ್ತಿ ಮಾಡುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಫೆಬ್ರುವರಿ 10ರಂದು ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಅಖಿಲ ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಸಂಘ ತಿಳಿಸಿದೆ.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ರಾಜ್ಯ ಘಟಕದ ಅಧ್ಯಕ್ಷ ಲಕ್ಷ್ಮೀಕಾಂತ, 'ಸಮಗ್ರ ಕರ್ನಾಟಕಕ್ಕೆ ಅನ್ವಯವಾಗುವಂತೆ ಶಿಕ್ಷಕರ ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಬೇಕು' ಎಂದು ಆಗ್ರಹಿಸಿದರು.



ಸಮನ್ವಯ ಸಾಹಿತಿ ಡಾ. ದೊಡ್ಡರಂಗೇಗೌಡರ ಅಭಿಮಾನಿಗಳ ಬಳಗ, ಆತ್ಮಶ್ರೀ ಕನ್ನಡ ಸಾಂಸ್ಕೃತಿಕ ಪ್ರತಿಷ್ಠಾನ ಶುಕ್ರವಾರ ಬಿ.ಎಂ.ಶ್ರೀ ಪ್ರತಿಷ್ಠಾನದಲ್ಲಿ ಆಯೋಜಿಸಿದ್ದ ದೊಡ್ಡರಂಗೇಗೌಡರ ಜನ್ಮದಿನಾಚರಣೆ, 'ನಿಲುವು' ಕಿರುಚಿತ್ರ ಪ್ರಕಟಣಾ ಪ್ರತಿ ಬಿಡುಗಡೆ ಕಾರ್ಯಕ್ರಮದಲ್ಲಿ ದೊಡ್ಡರಂಗೇಗೌಡ ಅವರನ್ನು ಸನ್ಮಾನಿಸಲಾಯಿತು. ಗುಣವಂತ ಮಂಜು, ಜೆ.ವೈ. ಪದ್ಮಾ ನಾಗರಾಜ್, ಎಂ.ಆರ್. ಉಪೇಂದ್ರ ಕುಮಾರ್, ಚಲನಚಿತ್ರ ನಿರ್ದೇಶಕ ಟಿ.ಎಸ್. ನಾಗಾಭರಣ, ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಮನು ಬಳಿಗಾರ್, ಕರ್ನಾಟಕ ವಿಕಾಸ ರಂಗದ ಅಧ್ಯಕ್ಷ ವ.ಚ. ಚನ್ನೇಗೌಡ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ



ರಂಗ ಸಂಸ್ಥಾನ, ಬಸವ ವೇದಿಕೆ, ರಮಣಶ್ರೀ ಸಮೂಹ ಸಂಸ್ಥೆಗಳು, ಅಕ್ಕಮಹಾದೇವಿ ಸಮಿತಿ, ಸುಮಂಗಲಿ ಸೇವಾಶ್ರಮ ಸಹಯೋಗದಲ್ಲಿ ಶುಕ್ರವಾರ ರವೀಂದ್ರ ಕಲಾಕ್ಷೇತ್ರದ ಸಂಸ ಬಯಲು ರಂಗಮಂದಿರದಲ್ಲಿ ಆಯೋಜಿಸಿದ್ದ ವಚನ ಗಾನ ವೈಭವ ಕಾರ್ಯಕ್ರಮದಲ್ಲಿ 1,122 ಗಾಯಕರು ವಚನಗಳನ್ನು ಹಾಡಿದರು ಪ್ರಜಾವಾಣಿ ಚಿತ್ರ

‘ಅನರ್ಹರ ಪೀಠಗಳಾದ ಅಧ್ಯಯನ ಪೀಠಗಳು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿಶ್ವವಿದ್ಯಾಲಯಗಳ ಅಧ್ಯಯನ ಪೀಠಗಳು ಮೂಲ ಆಶಯವನ್ನು ಮರೆತು ಅನರ್ಹರ ಪೀಠಗಳಾಗಿ ಮಾರ್ಪಟ್ಟಿವೆ’ ಎಂದು ಸಾಹಿತಿ ಎಸ್.ಜಿ.ಸಿದ್ಧರಾಮಯ್ಯ ಬೇಸರ ವ್ಯಕ್ತಪಡಿಸಿದರು.

ಡಾ.ಜಿಎಸ್ಎಸ್ ವಿಶ್ವಸ್ಥ ಮಂಡಳಿ ನಗರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಹಿಳಾ ಪರ ಹೋರಾಟಗಾರ್ತಿ ಮೀನಾಕ್ಷಿ ಬಾಳಿ ಅವರ ಜತೆಗೆ ‘ಡಾ.ಜಿ.ಎಸ್. ಶಿವರುದ್ರಪ್ಪ ಪ್ರಶಸ್ತಿ’ ಸ್ವೀಕರಿಸಿ, ಮಾತನಾಡಿದರು.

‘ಜಿ.ಎಸ್. ಶಿವರುದ್ರಪ್ಪ ಅವರು ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿ ಪ್ರಾಧ್ಯಾಪಕರಾಗಿ, ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದರು. ಅವರ ಅವಧಿಯಲ್ಲಿ ಕನ್ನಡ ವಿಭಾಗವು ಇಡೀ ರಾಜ್ಯಕ್ಕೆ ಮಾದರಿಯಾಗಿತ್ತು. ಬದಲಾದ ಕಾಲಘಟ್ಟದಲ್ಲಿ ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳ ಕನ್ನಡವಿಭಾಗವನ್ನು ಗಮನಿಸಿದರೆ ದುಃಖವಾಗುತ್ತದೆ. ಜಿಎಸ್ಎಸ್ ಅವರ ಆಶಯಕ್ಕೆ ವಿರುದ್ಧವಾಗಿ ಅವರ ಶಿಷ್ಯರೇ ಹೆಜ್ಜೆ ಇಟ್ಟಿದ್ದಾರೆ. ಇದರಿಂದಾಗಿ ಎಲ್ಲ ವಿಭಾಗಗಳು ಜಾತಿಯ ಕೊಂಪೆಗಳು, ಅನರ್ಹರ ಪೀಠಗಳಾಗಿವೆ’ ಎಂದರು.



ಕಾರ್ಯಕ್ರಮದಲ್ಲಿ (ಕುಳಿತವರು ಎಡದಿಂದ) ಎಸ್.ಜಿ.ಸಿದ್ಧರಾಮಯ್ಯ ಮತ್ತು ಮೀನಾಕ್ಷಿ ಬಾಳಿ ಅವರಿಗೆ ‘ಡಾ.ಜಿ.ಎಸ್.ಶಿವರುದ್ರಪ್ಪ ಪ್ರಶಸ್ತಿ’ ನೀಡಿ ಗೌರವಿಸಲಾಯಿತು. ಕೆ.ವೈ.ನಾರಾಯಣಸ್ವಾಮಿ, ಸಾಹಿತಿ ಕೆ.ಮರುಳಸಿದ್ದಪ್ಪ, ಬಸವರಾಜ ಕಲ್ಗುಡಿ, ದಂಡಪ್ಪ, ಕೆ.ಎಸ್.ವಿಮಲಾ ಮತ್ತು ವಿಮರ್ಶಕಿ ಎಂ.ಎಸ್.ಆಶಾದೇವಿ ಉಪಸ್ಥಿತರಿದ್ದರು

ಮೀನಾಕ್ಷಿ ಬಾಳಿ, ‘ಇವತ್ತಿನ ಕಾಲದಲ್ಲಿ ಪ್ರಶಸ್ತಿ ಪಡೆಯುವವರಿಗಿಂತ ಪ್ರಶಸ್ತಿ ಕೊಡುವವರೇ ಅಧಿಕ ಸಂಖ್ಯೆಯಲ್ಲಿದ್ದಾರೆ. ಕೆಲವು ಪ್ರಶಸ್ತಿಗಳು ಮಾತ್ರ ನೈತಿಕತೆ ಮತ್ತು ಮಹತ್ವ ಉಳಿಸಿಕೊಂಡಿವೆ. ಸ್ತ್ರೀಯರಿಗೆ ಗೌರವ ನೀಡಿದ್ದ ಜಿ.ಎಸ್. ಶಿವರುದ್ರಪ್ಪ ಅವರ ಹೆಸರಿನ ಪ್ರಶಸ್ತಿ ಪಡೆದಿರುವುದು ಸಂತೋಷವನ್ನುಂಟು ಮಾಡಿದೆ’ ಎಂದು ಹೇಳಿದ ಅವರು, ಪ್ರಶಸ್ತಿಯ ನಗದು ₹ 15 ಸಾವಿರವನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಗೆ ನೀಡಿದರು.

ವಿಮರ್ಶಕ ದಂಡಪ್ಪ ಅವರು ಜಿ.ಎಸ್. ಶಿವರುದ್ರಪ್ಪ ಅವರ ಬಗ್ಗೆ ಮಾತನಾಡಿದರು

ವೈಮಾನಿಕ ಪ್ರದರ್ಶನ, ಇನ್ವೆಸ್ಟ್ ಕರ್ನಾಟಕಕ್ಕಾಗಿ ಸಜ್ಜಾದ ನಗರ

ವೃತ್ತ, ಜಂಕ್ಷನ್‌ಗಳ ಸೌಂದರ್ಯೀಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ನಡೆಯಲಿರುವ ಏರೋ ಇಂಡಿಯಾ ವೈಮಾನಿಕ ಪ್ರದರ್ಶನ ಹಾಗೂ ಇನ್ವೆಸ್ಟ್ ಕರ್ನಾಟಕಕ್ಕಾಗಿ ಬಿಬಿಎಂಪಿ ಸಿದ್ಧತೆ ನಡೆಸಿದ್ದು, ಪ್ರಮುಖ ವೃತ್ತ ಹಾಗೂ ಜಂಕ್ಷನ್‌ಗಳ ಸೌಂದರ್ಯೀಕರಣ ಕಾರ್ಯ ಮಾಡುತ್ತಿದೆ.

ಆಕರ್ಷಕವಾಗಿ ಕಾಣುವ ಜೊತೆಗೆ ವಾಹನಗಳ ಸಂಚಾರದ ಸಂದರ್ಭದಲ್ಲಿ ಸುರಕ್ಷತೆಯ ದೃಷ್ಟಿಯಿಂದ ನಗರದಲ್ಲಿ ಪ್ರಥಮ ಬಾರಿಗೆ ‘ಎಲ್‌ಇಡಿ ಕರ್ಬ್ಸ್’ ಅಳವಡಿಸಲಾಗುತ್ತಿದೆ. ಪೊಲೀಸ್ ವೃತ್ತ (ಹಡ್ಸನ್ ವೃತ್ತ), ವಿಧಾನಸೌಧದ ಶಾಸಕರ ಭವನದ ವೃತ್ತ ಹಾಗೂ ಮೌಂಟ್ ಕಾರ್ಮೆಲ್ ಕಾಲೇಜು ಬಳಿಯ ವೃತ್ತದಲ್ಲಿ ಎಲ್‌ಇಡಿ ಕರ್ಬ್ಸ್ ಅಳವಡಿಕೆ ಕಾರ್ಯ ನಡೆಯುತ್ತಿದೆ.

ಫೆಬ್ರುವರಿ 10ರಿಂದ ‘ವೈಮಾನಿಕ ಪ್ರದರ್ಶನ’, ಫೆ. 11ರಿಂದ ‘ಇನ್ವೆಸ್ಟ್ ಕರ್ನಾಟಕ’ ನಡೆಯಲಿದ್ದು, ವಿವಿಧ ದೇಶ ಹಾಗೂ ರಾಜ್ಯಗಳಿಂದ ಗಣ್ಯರು, ಹೂಡಿಕೆದಾರರು ಭಾಗವಹಿಸುತ್ತಾರೆ. ಈ ಸಂದರ್ಭದಲ್ಲಿ ನಗರವನ್ನು ಆಕರ್ಷಣೀಯವಾಗಿ ಮಾಡಲು ಪಾಲಿಕೆ ಕೈಗೊಂಡಿರುವ ಸಿದ್ಧತೆಗಳನ್ನು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಶುಕ್ರವಾರ ಪರಿಶೀಲಿಸಿದರು.

ಪ್ರಮುಖ ಜಂಕ್ಷನ್‌ಗಳ ಸೌಂದರ್ಯೀಕರಣ, ಥರ್ಮೋಪ್ಲಾಸ್ಟಿಕ್ ಲೇನ್ ಮಾರ್ಕಿಂಗ್, ‘ಝೀರೊ ಟಾಲರೆನ್ಸ್ ವಲಯ’ಗಳು, ‘ಕ್ಯಾಟ್ ಐಸ್’ ಅಳವಡಿಕೆ, ಅಪಾಯ ಸೂಚನಾ ಫಲಕ ಅಳವಡಿಕೆ, ರಸ್ತೆ ವಿಭಜಕಗಳ ಎತ್ತರ ಹೆಚ್ಚಳ, ಕಬ್ಬಿಣದ ಗ್ರಿಲ್‌ಗಳ ಅಳವಡಿಕೆ, ಅತ್ಯಾಧುನಿಕ ಕೋಲ್ಡ್ ಮಿಕ್ಸ್ ವಿನ್ಯಾಸಗಳ ಪೇಂಟಿಂಗ್, ಪಾದಚಾರಿ ದಾಟುವಿಕೆಯ ಪಟ್ಟಿಗಳ ರಚನೆ ಸೇರಿದಂತೆ ವಿವಿಧ ಕಾರ್ಯಗಳನ್ನು ಕೈಗೊಳ್ಳಲಾಗಿದೆ.



ಅಲಂಕೃತಗೊಂಡಿರುವ ಹಡ್ಸನ್ ವೃತ್ತ

ಅಭಿವೃದ್ಧಿಗೊಳಿಸುತ್ತಿರುವ ಸ್ಥಳಗಳು

ಪೊಲೀಸ್ ವೃತ್ತ(ಹಡ್ಸನ್ ವೃತ್ತ), ಮೇಕ್ ಇನ್ ಇಂಡಿಯಾ ವೃತ್ತ(ವಿಂಡ್ಸರ್ ಮ್ಯಾನರ್ ಹೋಟೆಲ್ ಜಂಕ್ಷನ್), ಮೇಖ್ರಿ ವೃತ್ತ, ಹೈಗ್ರೌಂಡ್ಸ್ ವೃತ್ತ, ವಿಧಾನಸೌಧ ಜಂಕ್ಷನ್(ಶಾಸಕರ ಭವನದ ಬಳಿ), ಸದಾಶಿವ ನಗರ ಪೊಲೀಸ್ ಠಾಣೆ ಜಂಕ್ಷನ್, ಶಾಂಗ್ರಿ-ಲಾ ಹೋಟೆಲ್ ಬಳಿಯ ಕಲ್ಪನಾ ಜಂಕ್ಷನ್, ಮೌಂಟ್ ಕಾರ್ಮೆಲ್ ಕಾಲೇಜಿನ ಬಳಿಯ ಜಂಕ್ಷನ್, ರಾಜಭವನ ವೃತ್ತ, ಕಾಫಿ ಬೋರ್ಡ್ ಜಂಕ್ಷನ್, ಕಿಮ್ಸ್ ಬಳಿ, ಟಿಎಂಸಿ ವೃತ್ತ, ಕೆ.ಆರ್ ವೃತ್ತ.

ಹಡ್ಸನ್ ವೃತ್ತ, ಶಾಸಕರ ಭವನ ವೃತ್ತ, ಕಲ್ಪನಾ ಜಂಕ್ಷನ್, ಮೌಂಟ್ ಕಾರ್ಮೆಲ್ ಕಾಲೇಜು ಬಳಿಯ ವೃತ್ತ, ಗುಟ್ಟಹಳ್ಳಿ ಬಸ್ ನಿಲ್ದಾಣ, ಮೇಖ್ರಿ ವೃತ್ತ, ಮೇಖ್ರಿ ಬಸ್ ನಿಲ್ದಾಣ, ಜಿಕೆವಿಕೆ ಪಾರ್ಕಿಂಗ್ ಸ್ಥಳ ಹಾಗೂ ನಿಟ್ಟೆ ಮೀನಾಕ್ಷಿ ಕಾಲೇಜು ರಸ್ತೆಗೆ ತುಷಾರ್ ಗಿರಿನಾಥ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಹಡ್ಸನ್ ವೃತ್ತದ ಬಳಿ ಎಲ್‌ಇಡಿ ಕರ್ಬ್ ಕಾಮಗಾರಿ, ಲ್ಯಾಂಡ್ ಸ್ಕೇಪ್, ಕಾರಂಜಿ, ದೀಪಾಲಂಕಾರ ಹಾಗೂ ಜಂಕ್ಷನ್ ಅಭಿವೃದ್ಧಿ ಕಾಮಗಾರಿಗಳನ್ನು ಶೀಘ್ರ ಪೂರ್ಣಗೊಳಿಸಲು ಸೂಚಿಸಿದರು. ರಾಜಭವನದ ಬಳಿ ‘ಗೋಸ್ಟ್ ಐಲ್ಯಾಂಡ್’ ಹಾಗೂ ‘ಝೀರೊ ಟಾಲರೆನ್ಸ್’, ಕಲ್ಪನಾ ಜಂಕ್ಷನ್ ಬಳಿ ‘ಝೀರೊ ಟಾಲರೆನ್ಸ್’ ಹಾಗೂ ಪಾದಚಾರಿಗಳು ರಸ್ತೆ ದಾಟುವ ಪಟ್ಟಿ ಅಳವಡಿಕೆಯನ್ನು ಪರಿಶೀಲಿಸಿದರು.

ಗುಟ್ಟಹಳ್ಳಿ ಬಸ್ ನಿಲ್ದಾಣದ ಬಳಿ ಜಟಕಾ ಸ್ಟಾಂಡ್ ಇರುವ ರಸ್ತೆಗೆ ಡಾಂಬರೀಕರಣ ಮಾಡಲು, ಮೇಖ್ರಿ ಬಸ್ ನಿಲ್ದಾಣ ಬಳಿ ಸ್ವಚ್ಛತೆ ಕಾಪಾಡಲು ನಿರ್ದೇಶನ ನೀಡಿದರು.

ಜಿಕೆವಿಕೆಯಲ್ಲಿ ಪಾರ್ಕಿಂಗ್ ಸ್ಥಳ ಪರಿಶೀಲಿಸಿ, ‘ಯಾವುದೇ ರೀತಿಯ ಸಮಸ್ಯೆ ಆಗದಂತೆ ನೋಡಿಕೊಳ್ಳಬೇಕು. ವಾಹನ ಚಾಲಕರಿಗಾಗಿ ಸಂಚಾರಿ ಇಂದಿರಾ ಕ್ಯಾಂಟೀನ್ ವ್ಯವಸ್ಥೆ, ಇ-ಶೌಚಾಲಯದ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ ಮಾಡಿರಬೇಕು. ಬಿಎಂಟಿಸಿ ವತಿಯಿಂದ ಬಸ್ ವ್ಯವಸ್ಥೆ ಹಾಗೂ ದೂಳು ಬಾರದಂತೆ ನೀರು ಸಿಂಪಡಣೆ ಮಾಡಬೇಕು’ ಎಂದು ಅಧಿಕಾರಿಗಳಿಗೆ ತುಷಾರ್ ಸೂಚನೆ ನೀಡಿದರು.

ಯೋಜನೆ ವಿಭಾಗದ ವಿಶೇಷ ಆಯುಕ್ತ ಅವಿನಾಶ್ ಮೆನನ್ ರಾಜೇಂದ್ರನ್, ಯಲಹಂಕ ವಲಯ ಆಯುಕ್ತ ಕರೀಗೌಡ, ಪ್ರಧಾನ ಎಂಜಿನಿಯರ್ ಪ್ರಹ್ಲಾದ್, ಬಿಎಸ್‌ಡಬ್ಲ್ಯುಎಂಎಲ್‌ನ ಮುಖ್ಯ ಪ್ರಧಾನ ವ್ಯವಸ್ಥಾಪಕ ಬಸವರಾಜ್ ಕಬಾಡೆ ಉಪಸ್ಥಿತರಿದ್ದರು.

ವಿವಿಧೆಡೆ ವಿದ್ಯುತ್ ವ್ಯತ್ಯಯ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಂದಿನಿ ಲೇಔಟ್‌ನ 66/11ಕೆ.ವಿ. ವಿತರಣಾ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಕೈಗೊಳ್ಳುವುದರಿಂದ ಫೆಬ್ರುವರಿ 9ರಂದು ಬೆಳಿಗ್ಗೆ 10ರಿಂದ ಮಧ್ಯಾಹ್ನ 1ರವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ.

ವಿದ್ಯುತ್ ವ್ಯತ್ಯಯವಾಗುವ ಸ್ಥಳಗಳು: ಕೃಷ್ಣಾನಂದ ನಗರ, ಆರ್‌ಎಂಸಿ ಯಾರ್ಡ್, ಮಾರಪ್ಪನ ಪಾಳ್ಯ, ಯಶವಂತಪುರ ಕೈಗಾರಿಕಾ ಪ್ರದೇಶ, ಶಂಕರ್ ನಗರ, ಶ್ರೀಕಂಠೇಶ್ವರ ನಗರ, ಸೋಮೇಶ್ವರ ನಗರ, ಮಹಾಲಕ್ಷ್ಮಿ ಲೇಔಟ್, ಸರಸ್ವತಿ ಪುರ, ದಾಸನಾಯಕ ಲೇಔಟ್, ದಾಸನಾಯಕ ಲೇಔಟ್ ಕೈಗಾರಿಕಾ ಪ್ರದೇಶ, ಜೆ.ಎಸ್. ನಗರ, ಜೆ.ಸಿ.ನಗರ, ಕುರುಬರಹಳ್ಳಿ, ರಾಜ್‌ಕುಮಾರ್ ಸಮಾಧಿ ಮುಖ್ಯರಸ್ತೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

‘ಸಿ’ ವಿತರಣಾ ಕೇಂದ್ರದ ವ್ಯಾಪ್ತಿ: ಬ್ರಾಡ್ ವೇ ರಸ್ತೆ, ಕ್ವೀನ್ಸ್ ರಸ್ತೆ, ತಿಮ್ಮಯ್ಯ ರಸ್ತೆ, ಮಿಲ್ಲರ್ಸ್ ರಸ್ತೆ, ಕನ್ನಿಂಗ್ ಹ್ಯಾಮ್ ರಸ್ತೆ, ಆಲಿ ಅಸ್ಗರ್ ರಸ್ತೆ, ಚಿಕ್ಕ ಬಜಾರ್ ರಸ್ತೆ, ವೆಂಕಟಪ್ಪ ರಸ್ತೆ, ಸಿಮೆಟ್ರಿ ರಸ್ತೆ, ಚಾಂದನಿ ಚೌಕ್, ಜಸ್ಮಾ ಭವನ ರಸ್ತೆ, ಬಂಬೂ ಬಜಾರ್, ಧನಕೋಟಿ ಲೇನ್, ಮಕಾನ್ ಕಾಂಪೌಂಡ್ ರಸ್ತೆ, ಪ್ಯಾಲೇಸ್ ಟಾಕೀಸ್, ಈವ್ನಿಂಗ್ ಬಜಾರ್, ಹೊಸ ಮಾರುಕಟ್ಟೆ ರಸ್ತೆ, ಜೈನ್ ದೇವಸ್ಥಾನದ ರಸ್ತೆ, ಬೌರಿಂಗ್ ಆಸ್ಪತ್ರೆ, ಇನ್ಫೆಂಟ್ರಿ ರಸ್ತೆ, ಇಂಡಿಯನ್ ಎಕ್ಸ್‌ಪ್ರೆಸ್, ವಿಶ್ವೇಶ್ವರಯ್ಯ ಟವರ್, ಪೊಲೀಸ್ ಕಮೀಷನರ್ ಕಚೇರಿ, ಹಳೇ ಬಾಗಲೂರು ಲೇಔಟ್, ಬಿದರಹಳ್ಳಿ, ಪಾಟರಿಟೌನ್, ಕಾಕ್ಸ್‌ಟೌನ್, ಹೊಯ್ಸಳ ಅಪಾರ್ಟ್‌ಮೆಂಟ್, ಆರ್.ಬಿ.ಐ. ಕ್ವಾರ್ಟರ್ಸ್, ಕಾಂಗ್ರೆಸ್ ಕಚೇರಿ, ವಸಂತನಗರ, ಕಲ್ಲಹಳ್ಳಿ ಎಲ್ಲಾ ಬಿ.ಡಿ.ಎ ಕ್ವಾರ್ಟರ್ಸ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ಸ್ಟೋನಾ ಮೇಳ ಫೆ. 12ರಿಂದ

ಬೆಂಗಳೂರು: ಫೆಡರೇಷನ್ ಆಫ್ ಇಂಡಿಯನ್ ಗ್ರಾನೈಟ್ ಆ್ಯಂಡ್ ಸ್ಟೋನ್ ಇಂಡಸ್ಟ್ರಿ (ಎಫ್‌ಐಜಿಎಸ್‌ಐ) ವತಿಯಿಂದ ಫೆಬ್ರುವರಿ 12ರಿಂದ 15 ರವರೆಗೆ ತುಮಕೂರು ರಸ್ತೆಯಲ್ಲಿರುವ ಬೆಂಗಳೂರು ಅಂತರರಾಷ್ಟ್ರೀಯ ಪ್ರದರ್ಶನ ಕೇಂದ್ರದಲ್ಲಿ (ಬಿಐಇಸಿ) ಸ್ಟೋನಾ ಮೇಳ ಆಯೋಜಿಸಲಾಗಿದೆ.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಫ್‌ಐಜಿಎಸ್‌ಐ ಅಧ್ಯಕ್ಷ ಕೃಷ್ಣ ಪ್ರಸಾದ್, ಫೆ. 12ರಂದು ಗಣಿ ಮತ್ತು ಭೂವಿಜ್ಞಾನ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಮೇಳ ಉದ್ಘಾಟಿಸಲಿದ್ದಾರೆ ಎಂದರು.

ಒಂಬತ್ತು ಮಂದಿಗೆ ಬಂಜಾರ ಅಕಾಡೆಮಿ ಪುಸ್ತಕ ಬಹುಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿಯು 2022, 2023 ಹಾಗೂ 2024ನೇ ಸಾಲುಗಳ ಪುಸ್ತಕ ಬಹುಮಾನ ಪ್ರಕಟಿಸಿದ್ದು, ಒಂಬತ್ತು ಮಂದಿ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.



ಡಿ.ರಾಮಾ ನಾಯಕ್

ಅಕಾಡೆಮಿ ಅಧ್ಯಕ್ಷ ಎ.ಆರ್. ಗೋವಿಂದಸ್ವಾಮಿ ನೇತೃತ್ವದ ಆಯ್ಕೆ ಸಮಿತಿ ಪುರಸ್ಕೃತರನ್ನು ಆಯ್ಕೆ ಮಾಡಿದೆ.


2022ನೇ ಸಾಲಿಗೆ ‘ಕಲಬುರಗಿ ಜಿಲ್ಲೆಯ ಬಂಜಾರ ಮಹಿಳೆಯರ ಸ್ಥಿತಿ ಗತಿ’ ಸಂಶೋಧನಾ ಕೃತಿಗೆ ಶ್ರೀದೇವಿ ಎಲ್., ‘ಜಾಗೋ ಬಂಜಾರ’ ಕವನ-ಸಂಕಲನಕ್ಕೆ ರಾಮು ಎನ್.ರಾಠೋಡ್ ಮಸ್ಕಿ, ‘ಶ್ರೀ ಪ್ರೇಮಾಸಾಧ’ ಜೀವನ ಚರಿತ್ರೆಗೆ ಕಾಂತ ರಾಮಪ್ಪ ಜಾಧವ ಆಯ್ಕೆಯಾಗಿದ್ದಾರೆ.

2023ನೇ ಸಾಲಿಗೆ ‘ಮಹಾ ಚಲನೆ’ ಕೃತಿಗೆ ಡಿ. ರಾಮಾನಾಯಕ್, ‘ಮತ’ ಕಾದಂಬರಿಗೆ ಇಂದುಮತಿ ಲಮಾಣಿ, ‘ಗೋರ್ಬೋಲಿಯ ವೊಜಾಳೊ’ ವಿಮರ್ಶಾ ಕೃತಿಗೆ ಉಮೇಶ್ ನಾಯ್ಕ್ ಎನ್. ಹುಳಿಯಾರ್ ಅವರನ್ನು ಆಯ್ಕೆ ಮಾಡಲಾಗಿದೆ.

2024ನೇ ಸಾಲಿಗೆ ‘ವಲಸೆ ಹಕ್ಕಿಯ ಹಾಡು’ ಆತ್ಮಕತೆಗೆ ಪ್ರೊ. ಕೃಷ್ಣನಾಯಕ್, ‘ಸೋಶಿಯೊ ಎಕನಾಮಿಕ್ಸ್ ಕಲ್ಚರಲ್ ಆ್ಯಂಡ್ ಪೊಲಿಟಿಕಲ್’ ಸಂಶೋಧನಾ ಕೃತಿಗೆ ಪರಮೇಶ್ ನಾಯಕ್, ‘ಫಣ್ ಊಪರ್’ ಕೃತಿಗೆ ಸಥೀಶಾ ಗಟ್ಟಿ ಮಂಡೆಲಾ ಭಾಜನರಾಗಿದ್ದಾರೆ.



ಪ್ರೊ.ಕೃಷ್ಣ ನಾಯಕ್



ಪರಮೇಶ್ ನಾಯಕ್



ಶ್ರೀದೇವಿ ಎಲ್.



ಉಮೇಶ್ ನಾಯ್ಕ್



ಸಥೀಶಾ ಗಟ್ಟಿ ಮಂಡೆಲಾ



ಇಂದುಮತಿ ಲಮಾಣಿ



ರಾಮು ಎನ್. ರಾಠೋಡ್



ಕಾಂತ ರಾಮಪ್ಪ ಜಾಧವ

ಪ್ರಶಸ್ತಿಯು ತಲಾ ₹ 25 ಸಾವಿರ ನಗದು ಒಳಗೊಂಡಿದೆ. ಮಾರ್ಚ್ ತಿಂಗಳಲ್ಲಿ ಬಹುಮಾನ ವಿತರಣಾ ಸಮಾರಂಭವನ್ನು ಏರ್ಪಡಿಸಲಾಗುವುದು ಎಂದು ಎ.ಆರ್. ಗೋವಿಂದಸ್ವಾಮಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆಯುಕ್ತರ ಕಛೇರಿ, ನ.ರಾ.ಚೌಕ, ಬೆಂಗಳೂರು-560 002

ಸಾರ್ವಜನಿಕ ಪ್ರಕಟಣೆ

ನಂ.ಮುಆ/ಬೃಬೆಂಮಪಾ/ಪಿಆರ್/396/2025 **ದಿನಾಂಕ : 07.02.2025**

ಗ್ರೇಟರ್ ಬೆಂಗಳೂರು ಪ್ರದೇಶದ ಅಭಿವೃದ್ಧಿಯ ಯೋಜನೆ, ಸಮನ್ವಯ ಮತ್ತು ಮೇಲ್ವಿಚಾರಣೆಗಾಗಿ, ಪರಿಣಾಮಕಾರಿಯಾದ, ಸಹಭಾಗಿತ್ವದ ಮತ್ತು ಸ್ಪಂದನಶೀಲ ಆಡಳಿತಕ್ಕಾಗಿ, ನಗರಾಡಳಿತದ ಮೂಲ ಘಟಕಗಳನ್ನಾಗಿಸುವುದಕ್ಕೆ ಮತ್ತು ಸಮುದಾಯ ಪಾಲ್ಗೊಳ್ಳುವಿಕೆಯನ್ನು ಸುಗಮಗೊಳಿಸುವುದಕ್ಕೆ ಹಾಗೂ ಸಹಭಾಗಿ, ದಕ್ಷ ಮತ್ತು ನ್ಯಾಯೋಚಿತ ಆಡಳಿತದ ಚೌಕಟ್ಟನ್ನು ಸ್ಥಾಪಿಸುವ ಸಲುವಾಗಿ ಗ್ರೇಟರ್ ಬೆಂಗಳೂರು ಆಡಳಿತ ವಿಧೇಯಕ-2024 ಕುರಿತು ಪರಿಶೀಲಿಸುವ ಸಲುವಾಗಿ ಕರ್ನಾಟಕ ವಿಧಾನ ಮಂಡಲದ ಜಂಟಿ ಪರಿಶೀಲನಾ ಸಮಿತಿ ರಚಿಸಲಾಗಿದ್ದು, ಸದರಿ ಸಮಿತಿಯು ಗ್ರೇಟರ್ ಬೆಂಗಳೂರು ಪ್ರಾಧಿಕಾರ-2024ರ ರಚನೆ ಕುರಿತು ಸಾರ್ವಜನಿಕರು, ಸಂಘ / ಸಂಸ್ಥೆಗಳಿಂದ ಸಲಹೆಗಳನ್ನು ಸ್ವೀಕರಿಸಲಿದ್ದು, ಬಿಬಿಎಂಪಿಯ ವಲಯವಾರು ಕಾರ್ಯಕ್ರಮದ ವಿವರಗಳು ಈ ಕೆಳಕಂಡಂತಿದೆ.

ಅದರಂತೆ, ಸಾರ್ವಜನಿಕರು, ಸಂಘ/ಸಂಸ್ಥೆಗಳು ತಮ್ಮ ಸಲಹೆಗಳನ್ನು ವಲಯವಾರು ನಿಗದಿತ ದಿನಾಂಕ ಮತ್ತು ಸಮಯದಂತೆ ನೀಡಲು ಕೋರಿದೆ.

(ವಿಧೇಯಕದ ಆಂಗ್ಲ ಮತ್ತು ಕನ್ನಡ ಪ್ರತಿಗಳು ಅಂತರ್ಜಾಲ **https://kla.kar.nic.in/assembly/bills/bill1640_34.pdf** ದಲ್ಲಿ ಲಭ್ಯವಿರುತ್ತದೆ.)

ಕ್ರ.ಸಂ	ವಲಯ	ಸ್ಥಳ	ದಿನಾಂಕ ಮತ್ತು ವಾರ	ಸಮಯ
1.	**ಪೂರ್ವ ವಲಯ**	**ಬಂಜಾರ ಭವನ,** ತಿಮ್ಮಯ್ಯ ರಸ್ತೆ, ಕಾವೇರಪ್ಪ ಲೇಔಟ್, ವಸಂತನಗರ, ಬೆಂಗಳೂರು-560052.	10.02.2025 (ಸೋಮವಾರ)	ಬೆಳಿಗ್ಗೆ 11.00 ರಿಂದ 1.00 ಗಂಟೆಯವರೆಗೆ
2.	**ಮಹದೇವಪುರ ವಲಯ**	**ನ್ಯೂ ಹೊರೈಝುನ್ ಕಾಲೇಜ್ ಆಫ್ ಇಂಜಿನಿಯರಿಂಗ್,** ಹೊರ ವರ್ತುಲ ರಸ್ತೆ, ಕಾಡುಬೀಸನಹಳ್ಳಿ, ಬೆಂಗಳೂರು-560103	10.02.2025 (ಸೋಮವಾರ)	ಮಧ್ಯಾಹ್ನ 3.00 ರಿಂದ 5.00 ಗಂಟೆಯವರೆಗೆ
3.	**ದಕ್ಷಿಣ ವಲಯ** ಮತ್ತು **ಬೊಮ್ಮನಹಳ್ಳಿ ವಲಯ**	**ಆರ್.ವಿ.ಡೆಂಟಲ್ ಕಾಲೇಜು,** CA-37, 24ನೇ ಮುಖ್ಯ ರಸ್ತೆ, ಐ.ಟಿ.ಐ. ಲೇಔಟ್, 1ನೇ ಹಂತ, ಜೆ.ಪಿ.ನಗರ, ಬೆಂಗಳೂರು-560078.	11.02.2025 (ಮಂಗಳವಾರ)	ಬೆಳಿಗ್ಗೆ 11.00 ರಿಂದ 1.00 ಗಂಟೆಯವರೆಗೆ
4.	**ರಾಜರಾಜೇಶ್ವರಿ ನಗರ ವಲಯ** ಮತ್ತು **ಪಶ್ಚಿಮ ವಲಯ**	**ಡಾ.ಹೆಚ್.ನರಸಿಂಹಯ್ಯ ಸಭಾಂಗಣ,** ಜ್ಞಾನ ಭಾರತಿ ಕ್ಯಾಂಪಸ್, ಬೆಂಗಳೂರು ವಿಶ್ವ ವಿದ್ಯಾನಿಲಯ, ಬೆಂಗಳೂರು-560056.	11.02.2025 (ಮಂಗಳವಾರ)	ಮಧ್ಯಾಹ್ನ 3.00 ರಿಂದ 5.00 ಗಂಟೆಯವರೆಗೆ
5.	**ಯಲಹಂಕ ವಲಯ** ಮತ್ತು **ದಾಸರಹಳ್ಳಿ ವಲಯ**	**ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನ,** ನಂ.9 'ಸಿ', 2ನೇ 'ಎ' ಕ್ರಾಸ್, ಯಲಹಂಕ ನ್ಯೂ ಟೌನ್, ಬೆಂಗಳೂರು-560064.	12.02.2025 (ಬುಧವಾರ)	ಬೆಳಿಗ್ಗೆ 11.00 ರಿಂದ 1.00 ಗಂಟೆಯವರೆಗೆ

ಆಡಳಿತಗಾರರು, ಬಿಬಿಎಂಪಿ

ಮುಖ್ಯ ಆಯುಕ್ತರು, ಬಿಬಿಎಂಪಿ

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331



सत्यमेव जयते
GOVERNMENT OF GUJARAT




Future-ready, today

Invest in Gujarat's Thriving Emerging Sector Ecosystem

Gujarat is at the forefront of breakthroughs in emerging sectors, driven by progressive, business-friendly policies-from the Aatmanirbhar Gujarat Scheme and Renewable Energy Policy to the Semiconductor Policy and Waste Land Policy for Renewable Energy Projects. With world-class infrastructure and a visionary approach, the state ensures seamless growth and exceptional business performance.

Evolving Sectors in Gujarat



Gujarat: Shaping the Future of Rising Sectors

- **India's first** semiconductor fabrication facility foundation laid in Dholera.
- **Semiconductor ATMP and OSAT plants** coming up in Sanand.
- **C295 aircraft manufacturing** for the Indian Air Force under "Make in India" in Vadodara.
- **India's first Lithium-Ion Cell Giga-Factory** (20 GW) coming up in Ahmedabad.
- **India's first Solar Giga-Factory** coming up in Jamnagar.

Invest in Gujarat, Invest in the Future



ಆನ್‌ಲೈನ್ ಅನುರಾಗ ಅರಳಲಿ ಸರಾಗ

ಪವಿತ್ರಾ ಭಟ್


ಕೆಲವು ವರ್ಷಗಳಿಂದೀಚೆಗೆ ಕಿರುತೆರೆಯ ನಟರೊಬ್ಬರು ಆನ್‌ಲೈನ್‌ನಲ್ಲಿ ಹಲವು ಹುಡುಗಿಯರೊಂದಿಗೆ ಪ್ರೀತಿ ಸಂಬಂಧ ಬೆಳೆಸಿದ್ದ ಪ್ರಕರಣ ಸುದ್ದಿ ಮಾಡಿತ್ತು. ಈ ಸಂಬಂಧ ಹಲವು ಠಾಣೆಗಳಲ್ಲಿ ವಂಚನೆ ಪ್ರಕರಣದಡಿ ದೂರು ದಾಖಲಾಯಿತು. ಕೊನೆಗೆ ಖುದ್ದು ಆ ನಟರೇ ಮರು ದೂರು ನೀಡಿದರು. ಪೊಲೀಸರ ತನಿಖೆಯಿಂದ ಬಯಲಾದ ಅಚ್ಚರಿ ಸಂಗತಿಯೆಂದರೆ ಕಿರುತೆರೆಯ ನಟನ ಆಪ್ತನೇ ನಟನ ಹೆಸರಿನಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಖಾತೆ ತೆರೆದು ಹಲವು ಹೆಣ್ಣುಮಕ್ಕಳೊಂದಿಗೆ ಪ್ರೀತಿಯ ನಾಟಕವಾಡಿ, ಸಲುಗೆ ಬೆಳೆಸಿದ್ದ.

ಇದೊಂದು ಪ್ರಕರಣವಷ್ಟೆ. ಇದಾದ ಮೇಲೂ ಇಂಥದ್ದೇ ಹತ್ತು ಹಲವು ಪ್ರಕರಣಗಳು ದಾಖಲಾಗಿವೆ. ಅನಾಮಿಕ ಹಾಗೂ ಅಪರಿಚಿತ ಎನಿಸುವ ಆನ್‌ಲೈನ್ ಜಗತ್ತು ಹೇಗೆ ಸ್ನೇಹ, ಸಲುಗೆ, ಪ್ರೀತಿಯ ಸೆಳೆತವನ್ನು ಬಗಲಿನಲ್ಲಿ ಇಟ್ಟುಕೊಂಡಿದೆಯೋ ಅಷ್ಟೇ ಸುಲಭದಲ್ಲಿ ವಂಚನೆ, ಆಮಿಷಗಳ ಕೆಂಡವನ್ನು ಕಟ್ಟಿಕೊಂಡಿದೆ. ಎಲ್ಲೇ ಆಗಲಿ, ಆನ್‌ಲೈನ್ ಅಥವಾ ಆಫ್‌ಲೈನ್‌ಗಳಲ್ಲಿ ಆಪ್ತವಾಗಿ ಮಾತಿಗಿಳಿದವರ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಬೇಕೆಂಬ ಹಂಬಲ ಮನುಷ್ಯನ ಸಹಜ ಗುಣ. ಒಂದು ಸಣ್ಣ ಆಕರ್ಷಣೆಯೂ ಕುತೂಹಲಗಳಿಗೆ ದಾರಿ ಮಾಡಿಕೊಡಬಲ್ಲದು. ಅದಕ್ಕೆ ಆನ್‌ಲೈನ್ ಜಗತ್ತು ಹಲವು ಒಳ ದಾರಿಗಳನ್ನೇ ಸೃಷ್ಟಿ ಮಾಡಿಟ್ಟಿದೆ.

> ಪ್ರೀತಿಗೆ ಸಮಯ ನೀಡಿದಷ್ಟೂ ಸದೃಢವಾಗುತ್ತದೆ. ಆನ್‌ಲೈನ್‌ನಲ್ಲಿ ತೋರುವುದಕ್ಕಿಂತಲೂ ಆಫ್‌ಲೈನ್‌ನಲ್ಲಿ ಕಾಣುವುದಕ್ಕಿಂತಲೂ ಒಲವು ಬಲವಾಗುವುದು ವಿಶ್ವಾಸದಿಂದ. ವಿಶ್ವಾಸ ಹುಟ್ಟಲು ಎಚ್ಚರದಿಂದಿರುವುದು ಹೇಗೆ?

ಕ್ಷಣಾರ್ಧದಲ್ಲಿ ನೀವು ಇಷ್ಟಪಡುವ ವ್ಯಕ್ತಿಗೆ ಸ್ನೇಹದ ಹಸ್ತ ಚಾಚಬಹುದು. ಅವರೂ ಇಷ್ಟಪಟ್ಟು ಮುಂದುವರಿಯಬಹುದು. ಅಷ್ಟೇ ಸುಲಭದಲ್ಲಿ ಸ್ನೇಹ ಕಡಿದೂ ಹೋಗಬಹುದು. ವರ್ಚುವಲ್ ಜಗತ್ತಿನಲ್ಲಿ ಕ್ಷಣಾರ್ಧದಲ್ಲಿ ಪ್ರೀತಿ ಹುಟ್ಟಬಹುದು. ಸ್ನೇಹಿತರಾಗಲು ಹೇಗೆ ಸಮಯ ಹಿಡಿಯುವುದಿಲ್ಲವೋ, ಪ್ರೇಮಕ್ಕೂ ಆಕರ್ಷಣೆಗೂ ಅಷ್ಟೇ; ಸಮಯದ ಹಂಗಿಲ್ಲ. ದಿನಗಟ್ಟಲೇ ಮೊಬೈಲ್ ಪರದೆಯ ಮೇಲೆ ತನ್ನಿಷ್ಟದ ಹೆಸರನ್ನು ಎರಡು ದಿನಗಳವರೆಗೆ ಜಪಿಸಿದರೂ ಸಾಕು, ಮೂರನೇ ದಿನಕ್ಕೆ ಪ್ರೀತಿ ಹುಟ್ಟಬಹುದು.

ಪ್ರೀತಿ ಹಾಗೇ ಅಲ್ಲವೇ. ಎಲ್ಲಿಯಾದರೂ, ಯಾರನ್ನೂ ಬೇಕಾದರೂ ತನ್ನೆಡೆಗೆ ಸೆಳೆದುಕೊಳ್ಳುವಷ್ಟು ಶಕ್ತಿಯಿದೆ. ಪ್ರೀತಿ ಎನ್ನುವುದು ಭಾವನೆಗಳ ಸಮ್ಮಿಲನ, 'ನೀನು ನನ್ನೊಂದಿಗಿದ್ದರೆ ಜಗತ್ತನ್ನೇ ಗೆಲ್ಲುವೆ' ಎಂಬ ನವಿರಾದ ಭಾವ. ಇದಕ್ಕೆ ವಯಸ್ಸಿನ ಮಿತಿಯಿಲ್ಲ. ಜಾತಿ, ಬಣ್ಣ, ಸಂಪತ್ತಿನ ಚೌಕಟ್ಟಿಲ್ಲ. ಯಾವ ಚೌಕಟ್ಟಿಗೂ ಅಷ್ಟು ಸುಲಭವಾಗಿ ಒದಗದ ಆನ್‌ಲೈನ್ ಪ್ಲಾಟ್‌ಫಾರಂಗಳಲ್ಲಿ ಹಾಗೂ ತರಹೇವಾರಿ ಆ್ಯಪ್‌ಗಳಲ್ಲಿ ಎಲ್ಲ ಚೌಕಟ್ಟನ್ನು ಮೀರಿ ಪ್ರೀತಿಯೊಂದು ಕುಡಿಯೊಡೆಯಬಹುದು. ಹರೆಯಕ್ಕೆ ಬಂದವರಷ್ಟೆ ಅಲ್ಲ ಮಧ್ಯವಯಸ್ಕರೂ ಆನ್‌ಲೈನ್‌ನಲ್ಲಿ ಸಿಕ್ಕ ಹೊಸ ಸಂಗಾತಿಯ ಬಗ್ಗೆಯೂ ಧೇನಿಸಬಹುದು.



ಹಾಗೆಂದು ಆನ್‌ಲೈನ್‌ನಲ್ಲಿಯೇ ಸ್ನೇಹಿತರಾಗಿ, ಪ್ರೇಮಿಗಳಾದವರೆಲ್ಲ ಮೋಸ ಹೋದವರು ಎಂದು ಹೇಳಲಿಕ್ಕೆ ಆಗದು. ಸಮಾನ ಆಸಕ್ತರನ್ನು ಆನ್‌ಲೈನ್ ಪ್ಲಾಟ್‌ಫಾರಂಗಳು ಒಂದುಗೂಡಿಸಿದಷ್ಟು ಬೇರೆ ಯಾವ ಪ್ಲಾಟ್‌ಫಾರಂಗಳು ಒಂದುಗೂಡಿಸಿಲ್ಲ. ಹಾಗಾಗಿ ಕಲೆ, ಸಾಹಿತ್ಯ, ಸಂಗೀತ, ಪ್ರವಾಸ ಹೀಗೆ ನಾನಾ ಆಸಕ್ತಿ ಇಟ್ಟುಕೊಂಡಿರುವ ಸಮಾನ ಆಸಕ್ತರು ಸೇರಲು, ಅಲ್ಲಿಯೇ ತಮಗಿಷ್ಟವಾದವರನ್ನು ಆಯ್ಕೆ ಮಾಡಿಕೊಳ್ಳಲು ಹಲವು ರೀತಿಯಲ್ಲಿ ಆನ್‌ಲೈನ್ ಪ್ಲಾಟ್‌ಫಾರಂಗಳು ಸಹಾಯ ಮಾಡಿವೆ.

ಜೀವನಾಸಕ್ತಿಗೆ ಹೊಂದಿಕೊಳ್ಳುವ ವ್ಯಕ್ತಿ ಸಿಕ್ಕರೆ ಒಪ್ಪದಿರಲು ಹೇಗೆ ಸಾಧ್ಯ? ಸಾಮಾಜಿಕ ಜಾಲತಾಣಗಳಲ್ಲಿ ಪರಿಚಯವಾಗಿ, ಪ್ರೀತಿಯಾಗಿ ಮನೆಯವರ ಒಪ್ಪಿಗೆ ಪಡೆದು ಮದುವೆಯಾದವರೂ ಇದ್ದಾರೆ. ಅಷ್ಟೇ ಯಾಕೆ, ಸಂಸಾರವಿರುವ ಹೆಣ್ಣೊಬ್ಬಳು ಪ್ರೀತಿಯಲ್ಲಿ ಬಿದ್ದು, ಪ್ರೀತಿಸಿದವನಿಗಾಗಿ ತನ್ನವರನ್ನು ಮಾತ್ರವಲ್ಲದೆ ದೇಶವನ್ನೇ ಬಿಟ್ಟು ಬಂದ ವರದಿಗಳನ್ನೂ ನೋಡಿದ್ದೇವೆ.

ಇಂಟರ್‌ನೆಟ್‌ನಲ್ಲಿ ಹುಡುಕಿದರೆ 'ದೇವರೂ' ಸಿಗುತ್ತಾನೆ ಎಂಬ ವ್ಯಾಖ್ಯಾನವಿದೆ. ಪ್ರೀತಿ ನೀಡಲು ಹೇರಳವಾದ ಹಸ್ತಗಳು ಚಾಚಿಕೊಂಡಿರುತ್ತವೆ. ಅದನ್ನು ವಿವೇಚನೆಯಿಂದ ಆಯ್ಕೆ ಮಾಡುವ ಜವಾಬ್ದಾರಿ ಮಾತ್ರ ನಮ್ಮದಾಗಿರುತ್ತದೆ. ಇದಕ್ಕೆ ಪುಷ್ಟಿ ನೀಡುವಂತೆ ಡೇಟಿಂಗ್ ಆ್ಯಪ್, ಮ್ಯಾಟ್ರಿಮೊನಿಯಲ್ ಅಪ್ಲಿಕೇಷನ್‌ಗಳು ಜೀವನ ಸಂಗಾತಿಯನ್ನು ಹುಡುಕಿಕೊಡುವಲ್ಲಿ ತಕ್ಕಮಟ್ಟಿಗೆ ಯಶಸ್ವಿಯೂ ಆಗಿವೆ.

ನಮ್ಮನ್ನು ಪ್ರೀತಿಸುವವರು, ನಾವಿದ್ದ ಹಾಗೇ ನಮ್ಮನ್ನು ಒಪ್ಪಿಕೊಳ್ಳುವವರು ಸಿಗಬೇಕು ಎನ್ನುವುದು ಎಲ್ಲರ ಆಸೆ. ಸಾಮಾಜಿಕ ಜಾಲತಾಣ ಅಥವಾ ಇಂತಹ ಆ್ಯಪ್‌ಗಳಲ್ಲಿ ಮುಖ ಪರಿಚಯ ಇಲ್ಲದೇ ಇರುವವರು ಮನಸ್ಸಿನ ಭಾವನೆಗೆ ಸ್ಪಂದಿಸಿದಾಗ, ಇಷ್ಟ-ಕಷ್ಟ, ನೋವು, ನಲಿವು ಎಲ್ಲವನ್ನೂ ಹಂಚಿಕೊಂಡಾಗ ಆಗುವ ಆನಂದವೇ ಬೇರೆ. ಅಪರಿಚಿತ ಮುಖಗಳು ನಿಧಾನಕ್ಕೆ ಪರಿಚಿತ ವ್ಯಕ್ತಿಯಾಗಿ, ಅವರನ್ನೇ ಅರ್ಥ ಮಾಡಿಕೊಂಡು, ಪ್ರೀತಿಸಿ, ಜೀವನ ಕಟ್ಟಿಕೊಳ್ಳುವುದರಲ್ಲಿ ತಪ್ಪಿಲ್ಲ. ಆದರೆ, ಯಶಸ್ವಿಯಾಗುವವರು ಬೆರಳೆಣಿಕೆಯಷ್ಟು ಜನರು ಮಾತ್ರ.

ವಿವೇಚನೆ ಇರಲಿ: ಆನ್‌ಲೈನ್ ಪ್ಲಾಟ್‌ಫಾರಂಗಳಲ್ಲಿ ನೂರಕ್ಕೆ ನೂರರಷ್ಟು ಎಚ್ಚರಿಕೆಯಿಂದಿರುವುದು ಅಗತ್ಯ. ಪ್ರೀತಿಯಲ್ಲಿರುವಾಗ ಭಾವನೆಗಳು ಜಿದ್ದಾಜಿದ್ದಿಯನ್ನೇ ನಡೆಸಿಬಿಡಬಲ್ಲವು. ಎಲ್ಲೋ ಕುಳಿತು ಮೆಸೇಜ್ ಮಾಡುತ್ತಿರುವ ವ್ಯಕ್ತಿಯೆಡೆಗಿನ ಆಕರ್ಷಣೆಯ ಹುಮ್ಮಸ್ಸಿನಲ್ಲಿ ಸಂಭಾಷಣೆ ನಡೆಸುವಾಗ ಬದುಕಿನಲ್ಲಿ ಇರುವುದು, ಇಲ್ಲದಿರುವುದು ಎಲ್ಲವನ್ನೂ ಸಂವಾದಿಸಿ ಕನಸಿನ ಆಶಾ ಗೋಪುರವನ್ನೇ ಕಟ್ಟಬಲ್ಲದು. ಅಷ್ಟೇ ವೇಗವಾಗಿ ವಾಸ್ತವಕ್ಕೆ ಬರುವುದರೊಳಗೆ ಅನಾಹುತವನ್ನೂ ಮಾಡಿಬಿಡಬಹುದು. ಪ್ರೀತಿಯಲ್ಲಿ ಇದ್ದಾಗ ಪ್ರತೀ ಕ್ಷಣವೂ ಸುಂದರ ಎನಿಸುತ್ತದೆ. ಆದರೆ, ಅದೇ ಪ್ರೀತಿ ಮುಗ್ಗರಿಸಿ ಬಿದ್ದಾಗ ಅದನ್ನು ಸಹಿಸುವ ಶಕ್ತಿ ಇಲ್ಲವಾಗುತ್ತದೆ. ಇದೇ ಆನ್‌ಲೈನ್‌ನಲ್ಲಿ ಉಂಟಾದ ಪ್ರೀತಿಯು ಹಣ, ಆಸ್ತಿಗೆ ಕನ್ನಹಾಕಿ ವ್ಯಕ್ತಿತ್ವಕ್ಕೇ ಧಕ್ಕೆ ತರಬಹುದು. ಮಾನಸಿಕ ಆರೋಗ್ಯಕ್ಕೆ ಕುತ್ತು ತರಬಹುದು. ಇಂಥವುಗಳ ಬಗ್ಗೆ ಅರಿವು ಇರಲಿ. ಹಿಡಿ ಪ್ರೀತಿಯ ಬಳ್ಳಿಗೆ ವಿವೇಚನೆಯ ಮಣ್ಣು ಸಶಕ್ತವಾಗಿ ಸಿಕ್ಕರೆ, ಅದು ಸಮೃದ್ಧವಾಗಿ ಹಬ್ಬಬಹುದು.

ಪ್ರೀತಿಯಲ್ಲಿ ಮುಗ್ಗರಿಸಿದಾಗ ಅದನ್ನು ಎದುರಿಸುವಷ್ಟು ಮನೋಸ್ಥೈರ್ಯವನ್ನೂ ಬೆಳೆಸಿಕೊಳ್ಳಬೇಕು. ಪ್ರೀತಿಗೆ ಮನಸ್ಸು ಮಾಗುವ ಮುನ್ನ ಭವಿಷ್ಯದ ಸಣ್ಣ ಯೋಚನೆ, ಯೋಜನೆಯತ್ತಲೂ ಚಿತ್ತವಿರಲಿ.

ಕಾಲಕಾಲಕ್ಕೂ ಪ್ರೀತಿಯ ವ್ಯಾಖ್ಯಾನ-ಆಖ್ಯಾನಗಳು ಬದಲಾಗುತ್ತಲೇ ಇರುತ್ತವೆ. ಜಾತ್ರೆಯಲ್ಲಿ ಮಿನುಗಿದ ಕಣ್ಣುಗಳ ಸೆಳೆತವೂ ಅದೆಷ್ಟು ಮುದ ನೀಡಬಲ್ಲದೋ, ಅನಾಮಿಕತೆಯ ಚೌಕಟ್ಟಿನಲ್ಲಿ ಆನ್‌ಲೈನ್ ಪ್ಲಾಟ್‌ಫಾರಂಗಳಲ್ಲಿ ಉಂಟಾದ ಆಕರ್ಷಣೆಯೂ ಅಷ್ಟೆ ಸಹಜವಾಗಿರುತ್ತದೆ. ಸಣ್ಣ ಆಕರ್ಷಣೆಯೇ ಗೆಳೆತನವಾಗಿ, ಪ್ರೀತಿಯಾಗಿ, ಬದುಕೇ ಆಗುವ ಹೊತ್ತಿನಲ್ಲಿ ಕ್ಷಣ ಕಾಲ ವಿವೇಕಕ್ಕೂ ಕೆಲಸ ಸಿಗಲಿ. ಮನುಷ್ಯ ಲೋಕದ ಎಲ್ಲ ವಿಕಾರಗಳಿಗೂ ಮದ್ದೆರೆಯಬಲ್ಲ 'ಪ್ರೀತಿ'ಯನ್ನು ಆತುಕೊಳ್ಳುವಾಗ ಪರಸ್ಪರ ವ್ಯಕ್ತಿತ್ವದ ಸಾಮರ್ಥ್ಯ ಹಾಗೂ ದೌರ್ಬಲ್ಯಗಳ ಅರಿವಿದ್ದರೆ, ಬದುಕಿನ ಬಂಡಿ ಹಳಿ ತಪ್ಪದು.

❖

ಡಾ.ವಿದ್ಯಾ ವಿ ಭಟ್



ಗರ್ಭಾವಸ್ಥೆಯಲ್ಲಿ ಲಸಿಕೆಗಳು ಏಕೆ ಮುಖ್ಯ?

ಕಾಳಜಿ

ಗರ್ಭದಲ್ಲಿ ಭ್ರೂಣ ಬೆಳೆಯುತ್ತಿರುವಾಗ ಸಾಮಾನ್ಯವಾಗಿ ರೋಗನಿರೋಧಕ ಶಕ್ತಿ ತುಸು ದುರ್ಬಲವಾದಂತೆ ಕಂಡುಬರುತ್ತದೆ. ಇಂಥ ಸಂದರ್ಭದಲ್ಲಿ ಸೋಂಕು ಉಂಟಾದರೆ ತಾಯಿ ಮತ್ತು ಮಗುವಿಗೆ ಅಪಾಯವಿರುತ್ತದೆ. ಹಾಗಾಗಿ ಗರ್ಭಾವಸ್ಥೆಯಲ್ಲಿದ್ದಾಗ ಕೆಲವು ಲಸಿಕೆಗಳನ್ನು ಹಾಕಿಸಿಕೊಳ್ಳುವುದು ಅಗತ್ಯ.

ವಿಶ್ವ ಆರೋಗ್ಯ ಸಂಸ್ಥೆ ಮತ್ತು ಸೆಂಟರ್ ಫಾರ್ ಡಿಸೀಸ್ ಕಂಟ್ರೋಲ್ ಆ್ಯಂಡ್ ಪ್ರಿವೆನ್ಷನ್(ಸಿಡಿಎಸ್) ಸೇರಿದಂತೆ ಆರೋಗ್ಯ ಮತ್ತು ಆರೈಕೆ ತಜ್ಞರು ಪ್ರಸವಪೂರ್ವ ಆರೈಕೆಗೆ ಕೆಲವೊಂದು ಲಸಿಕೆಗಳನ್ನು ಶಿಫಾರಸು ಮಾಡುತ್ತಾರೆ.

- **ಇನ್‌ಫ್ಲುಯೆನ್ಸಾ (ಫ್ಲೂ) ವ್ಯಾಕ್ಸಿನ್:** ಗರ್ಭಿಣಿಯರಿಗೂ ಕೆಲವು ಜ್ವರಗಳು ಬರಬಹುದು. ಆಗ ಆಸ್ಪತ್ರೆಗೂ ದಾಖಲಾಗಬೇಕಾದ ಸ್ಥಿತಿ ಬರುತ್ತದೆ. ಇದಕ್ಕಾಗಿ ಮೂರು ತಿಂಗಳಿಗೊಮ್ಮೆ ಫ್ಲೂ ವ್ಯಾಕ್ಸಿನ್ ಹಾಕಿಸಿಕೊಳ್ಳಬೇಕು. ಇದು ಸುರಕ್ಷಿತವಾಗಿದ್ದು, ಮಗುವಿನ ಜನನದ ನಂತರವೂ ಹಲವು ತಿಂಗಳವರೆಗೆ ತಾಯಿ ಮತ್ತು ಮಗುವನ್ನು ರಕ್ಷಿಸಲು ಸಹಾಯ ಮಾಡುತ್ತದೆ.
- **ಟೆಟನಸ್, ಡಿಫ್ತಿರಿಯಾ ಮತ್ತು ಪರ್ಟುಸಿಸ್ (Tdap) ವ್ಯಾಕ್ಸಿನ್:** ಗರ್ಭಾವಸ್ಥೆಯ 27 ಮತ್ತು 36ನೇ ವಾರಗಳ ಅವಧಿಯಲ್ಲಿ ಈ Tdap ವ್ಯಾಕ್ಸಿನ್ ನೀಡಲಾಗುತ್ತದೆ. ಇದು ಶಿಶುಗಳ ಸಂಭಾವ್ಯ ಮಾರಣಾಂತಿಕ ಕಾಯಿಲೆಯಾದ ಪೆರ್ಟುಸಿಸ್ (whooping cough- ನಾಯಿ ಕೆಮ್ಮು) ಅನ್ನು ತಡೆಗಟ್ಟುತ್ತದೆ.
- **ಕೋವಿಡ್-19 ವ್ಯಾಕ್ಸಿನ್:** ಗರ್ಭಿಣಿಯರಲ್ಲಿ ಗಂಭೀರ ಸ್ವರೂಪದ ಕಾಯಿಲೆಯ ಅಪಾಯವನ್ನು ಈ ಕೋವಿಡ್-19 ಲಸಿಕೆ ಕಡಿಮೆ ಮಾಡುತ್ತದೆ. ಅಲ್ಲದೇ ನವಜಾತ ಶಿಶುಗಳಿಗೆ ಸ್ವಲ್ಪಮಟ್ಟಿನ ರೋಗನಿರೋಧಕ ಶಕ್ತಿಯನ್ನು ಒದಗಿಸುತ್ತದೆ. ಕೆಲವೊಮ್ಮೆ ಹೆಚ್ಚುವರಿ ಲಸಿಕೆಗೆ ಶಿಫಾರಸು ಮಾಡಲಾಗುತ್ತದೆ. ಸೋಂಕಿನ ಅಪಾಯ ಅಧಿಕವಾಗಿದ್ದರೆ ಗರ್ಭಿಣಿಗೆ ಹೆಪಟೈಟಿಸ್ ಬಿ ಲಸಿಕೆಯನ್ನು ನೀಡಲಾಗುತ್ತದೆ.

ಈ ಲಸಿಕೆಗಳು ಸುರಕ್ಷಿತವೇ?

ಈ ಲಸಿಕೆಗಳನ್ನು ತುಂಬಾ ಎಚ್ಚರಿಕೆಯಿಂದ ಪರೀಕ್ಷೆಗೆ ಒಳಪಡಿಸಲಾಗಿದೆ. ಹಾಗಾಗಿ ಗರ್ಭಾವಸ್ಥೆಯಲ್ಲಿ ನೀಡುವ ಲಸಿಕೆಗಳು ಸುರಕ್ಷಿತ ಎಂಬುದನ್ನು ಹಲವು ಸಂಶೋಧನೆಗಳು ದೃಢಪಡಿಸಿವೆ. ಗರ್ಭದಲ್ಲಿ ಬೆಳೆಯುತ್ತಿರುವ ಮಗುವಿಗೆ ಯಾವುದೇ ರೀತಿಯಲ್ಲಿಯೂ ತೊಂದರೆಯಾಗುವುದಿಲ್ಲ. ಆದರೆ, ಲೈವ್ ವ್ಯಾಕ್ಸಿನ್‌ಗಳು ಅಂದರೆ, MMR (measles, mumps, rubella) ಗಳನ್ನು ಸಾಮಾನ್ಯವಾಗಿ ಗರ್ಭಾವಸ್ಥೆಯಲ್ಲಿ ನಿರ್ಬಂಧಿಸಲಾಗುತ್ತದೆ. ಹೆರಿಗೆಯ ನಂತರ ನೀಡಲಾಗುತ್ತದೆ.

ಮಿಥ್ಯೆಗಳಿಂದ ದೂರವಿರಿ

ಲಸಿಕೆಯ ಬಗ್ಗೆ ಕೆಲವು ಮಿಥ್ಯೆಗಳಿವೆ. ಲಸಿಕೆಗಳನ್ನು ಪಡೆಯುವುದರಿಂದ ಗರ್ಭಪಾತ ಆಗುತ್ತದೆ. ಬೆಳೆಯುತ್ತಿರುವ ಭ್ರೂಣದ ಮಿದುಳಿನ ಮೇಲೆ ಪರಿಣಾಮ ಬೀರುತ್ತದೆ ಎಂಬ ಹಲವು ಮಿಥ್ಯೆಗಳಿವೆ. ಇದು ವೈಜ್ಞಾನಿಕವಾಗಿ ಸರಿಯಲ್ಲ. ಇಂಥ ಸಂದೇಹಗಳಿಂದ ತಜ್ಞವೈದ್ಯರಿಂದ ಮಾಹಿತಿ ಪಡೆಯುವುದು ಉತ್ತಮ.

ಲಸಿಕೆಯ ಪ್ರಯೋಜನಗಳೇನು?

- ರೋಗಹರಡುವಿಕೆಯ ಪ್ರಮಾಣವನ್ನು ಕಡಿಮೆ ಮಾಡುವುದಲ್ಲದೇ ಆರೋಗ್ಯ ರಕ್ಷಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.
- Tdap ಲಸಿಕೆಯನ್ನು ಹಾಕಿಸಿಕೊಳ್ಳುವುದರಿಂದ ನವಜಾತ ಶಿಶುಗಳಲ್ಲಿ ಕಾಣಿಸಿಕೊಳ್ಳುವ ನಾಯಿ ಕೆಮ್ಮಿನಂತಹ ರೋಗಗಳು ಕ್ರಮೇಣ ಕಡಿಮೆಯಾಗುತ್ತದೆ.
- ಭವಿಷ್ಯದಲ್ಲಿಯೂ ತಾಯಿ ಮಗುವಿನ ಆರೋಗ್ಯಕ್ಕೆ ಲಸಿಕೆಗಳು ಪೂರಕವಾಗಿವೆ.

ಶೇಂಗಾ ರಾಜ್ಮಾ ರೆಸಿಪಿ

ರಸಾಸ್ವಾದ

ಕೆ.ವಿ.ರಾಜಲಕ್ಷ್ಮಿ

ಶೇಂಗಾ ಡ್ರಿಂಕ್



ಬೇಕಾಗುವ ಸಾಮಗ್ರಿ: ಹುರಿದು, ಸಿಪ್ಪೆ ತೆಗೆದ ಶೇಂಗಾ ಬೀಜ 1 ಕಪ್, ಗೋಡಂಬಿ 6, ಬಾದಾಮಿ 6, ಕೆಂಪು ಕಲ್ಲುಸಕ್ಕರೆ ಪುಡಿ 1/4 ಕಪ್.

ಮಾಡುವ ವಿಧಾನ: ಗೋಡಂಬಿ, ಬಾದಾಮಿಗಳನ್ನು ಸ್ವಲ್ಪ ಬೆಚ್ಚಗೆ ಮಾಡಿಕೊಂಡು, ಶೇಂಗಾದೊಂದಿಗೆ ತರಿತರಿಯಾಗಿ ಅರೆದು ನಂತರ ಕಲ್ಲುಸಕ್ಕರೆ ಪುಡಿ ಸೇರಿಸಿ ಒಂದೆರಡು ಸುತ್ತು ಅರೆದರೆ ಸ್ವಾದಿಷ್ಟಭರಿತ ಶೇಂಗಾ ಡ್ರಿಂಕ್ ಪೌಡರ್ ಸಿದ್ಧ. ಇದನ್ನು ಒಂದು ಲೋಟ ಹಾಲಿಗೆ ಒಂದು ಚಮಚ ಸೇರಿಸಿ, ಸೇವಿಸಬಹುದು.

ಉಂಡೆ

ಬೇಕಾಗುವ ಸಾಮಗ್ರಿ: ಹುರಿದು ಸಿಪ್ಪೆ ಬಿಡಿಸಿದ ಶೇಂಗಾ ಬೀಜ 1 ಕಪ್ , ಕಂದುಸಕ್ಕರೆ 1/2 ಕಪ್.

ಮಾಡುವ ವಿಧಾನ: ಬಾಣಲೆಯಲ್ಲಿ ಸಕ್ಕರೆ ಹಾಕಿ ಸ್ವಲ್ಪ ನೀರು ಹಾಕಿ ಸಣ್ಣ ಉರಿಯಲ್ಲಿಡಿ. ಸಕ್ಕರೆ, ಉಂಡೆ ಪಾಕದ ಹದಕ್ಕೆ ಬಂದ ಕೂಡಲೇ ಉರಿ ಆರಿಸಿ, ಶೇಂಗಾ ಬೀಜಗಳನ್ನು ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ, ಅಗಲವಾದ ತಟ್ಟೆಗೆ ವರ್ಗಾಯಿಸಿ. ನಂತರ ಅಂಗೈಯಲ್ಲಿ ತುಪ್ಪ ಸವರಿಕೊಂಡು ಸಣ್ಣ ಸಣ್ಣ ಉಂಡೆಗಳನ್ನು ಕಟ್ಟಿ.



ಕ್ಯೂಬ್ಸ್



ಬೇಕಾಗುವ ಸಾಮಗ್ರಿ: ಹುರಿದು ಸಿಪ್ಪೆ ಬಿಡಿಸಿದ ಶೇಂಗಾ ಬೀಜ 1 ಕಪ್ ಮೈದಾಹಿಟ್ಟು 1/2 ಕಪ್, ಸಕ್ಕರೆ ಪುಡಿ 2 ಕಪ್, ತುಪ್ಪ 2 ಕಪ್.

ಮಾಡುವ ವಿಧಾನ: ಶೇಂಗಾ ಬೀಜವನ್ನು ಪುಡಿಮಾಡಿಕೊಂಡು, ಅದರ ಜೊತೆ ಮೈದಾ, ಸಕ್ಕರೆ ಪುಡಿ ಸೇರಿಸಿ ಒಂದು ಸುತ್ತು ಅರೆಯಿರಿ. ಈ ಮಿಶ್ರಣವನ್ನು ಜರಡಿ ಹಿಡಿದುಕೊಳ್ಳಿ. ದಪ್ಪ ತಳದ ಬಾಣಲೆಯಲ್ಲಿ, ಸಣ್ಣ ಉರಿಯಲ್ಲಿ ತುಪ್ಪ ಕರಗಿಸಿ ಅರೆದ ಮಿಶ್ರಣವನ್ನು ಸೇರಿಸಿ ಕೈಯಾಡುತ್ತಿರಿ. ಆಗಾಗ ಮೇಲ್ತುಪ್ಪ ಹಾಕಿ ಗೊಟಾಯಿಸಿ. ಮಿಶ್ರಣ ಬಾಣಲೆ ಬಿಟ್ಟು ಬರುವಾಗ ಜಿಡ್ಡು ಹಾಕಿದ ತಟ್ಟೆಗೆ ಸುರಿವಿ ಕ್ಯೂಬ್ ಆಕಾರಕ್ಕೆ ಕತ್ತರಿಸಿ.

ಸಲಾಡ್



ಬೇಕಾಗುವ ಸಾಮಗ್ರಿ: ಬೇಯಿಸಿದ ರಾಜ್ಮಾ ಕಾಳು 1/2 ಕಪ್, ಸಣ್ಣಗೆ ಹೆಚ್ಚಿದ ಈರುಳ್ಳಿ 1/2 ಕಪ್, ತಿರುಳು ತೆಗೆದು ಹೆಚ್ಚಿದ ಸೌತೆಕಾಯಿ 1/2ಕಪ್, ನಿಂಬೆರಸ 1/4 ಚಮಚ, ಕೊತ್ತಂಬರಿ ಸೊಪ್ಪು ಸ್ವಲ್ಪ, ಚಾಟ್ ಮಸಾಲಾ 1 ಚಮಚ. ಮಿಕ್ಸಿಂಗ್ ಬೌಲ್ ಗೆ ರಾಜ್ಮಾ ಕಾಳು, ಈರುಳ್ಳಿ, ಸೌತೆಕಾಯಿ, ಉಪ್ಪು ಹಾಕಿ ಮಿಶ್ರಣ ಮಾಡಿ, ನಿಂಬೆರಸ ಸೇರಿಸಿ, ಕೊತ್ತಂಬರಿ ಸೊಪ್ಪು ಉದುರಿಸಿ.

ರಾಜ್ಮಾ ಗುಗ್ಗರಿ

ಬೇಕಾಗುವ ಸಾಮಗ್ರಿ: ರಾಜ್ಮಾ ಕಾಳು 1 ಕಪ್, ಸಣ್ಣಗೆ ಹೆಚ್ಚಿದ ಈರುಳ್ಳಿ 1/4 ಕಪ್, ನಿಂಬೆ ರಸ 1/2 ಚಮಚ, ರುಚಿಗೆ ತಕ್ಕಷ್ಟು ಉಪ್ಪು. ಒಗ್ಗರಣೆಗೆ ಸಾಸಿವೆ, ಉದ್ದಿನಬೇಳೆ, ಒಣಮೆಣಸಿನಕಾಯಿ 2, ಚಿಟಿಕೆ ಇಂಗು.

ಮಾಡುವ ವಿಧಾನ: ರಾಜ್ಮಾ ಕಾಳನ್ನು 7-8 ಗಂಟೆಗಳ ಕಾಲ ನೆನೆಸಿ. 1 ಕಪ್ ನೀರು, 1 ಚಮಚ ಎಣ್ಣೆ ಸೇರಿಸಿ ಕುಕ್ಕರಿನಲ್ಲಿ, ಮೂರು ಸೀಟಿ ಕೂಗಿಸಿ. ಬೆಂದ ಕಾಳನ್ನು ಬಸಿದಿಟ್ಟುಕೊಳ್ಳಿ. ಬಾಣಲೆಯಲ್ಲಿ ಒಗ್ಗರಣೆಗೆ ಸಾಸಿವೆ ಸಿಡಿಸಿ ಉದ್ದಿನಬೇಳೆ,ಇಂಗು,ಹುರಿದು, ಈರುಳ್ಳಿ, ಉಪ್ಪು ಹಾಕಿ ಚೆನ್ನಾಗಿ ಬಾಡಿಸಿ ನಂತರ ಬೆಂದ ರಾಜ್ಮಾ ಕಾಳು, ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ ಉರಿ ಆರಿಸಿ, ನಿಂಬೆ ರಸ ಬೆರೆಸಿ.



ಶೇಂಗಾ ಕ್ಯಾರೆಟ್ ಚಟ್ನಿ



ಬೇಕಾಗುವ ಸಾಮಗ್ರಿ: ಕ್ಯಾರೆಟ್ ತುರಿ 1 ಕಪ್, ಶೇಂಗಾ ಬೀಜ 1/2 ಕಪ್, ಹುರಿಗಡಲೆ 1 ಚಮಚ, ಒಣಮೆಣಸಿನಕಾಯಿ 4-5,ಸ್ವಲ್ಪ ಹುಣಸೆಹಣ್ಣು, ರುಚಿಗೆ ತಕ್ಕಷ್ಟು ಉಪ್ಪು.

ಮಾಡುವ ವಿಧಾನ: ಬಾಣಲೆಯಲ್ಲಿ ಶೇಂಗಾ, ಒಣಮೆಣಸಿನಕಾಯಿ, ಹುಣಸೆಹಣ್ಣು ಎಲ್ಲವನ್ನು ಒಟ್ಟಿಗೆ ಹಾಕಿ ಹುರಿದುಕೊಳ್ಳಿ. ಈ ಮಿಶ್ರಣಕ್ಕೆ ಕ್ಯಾರೆಟ್ ತುರಿ, ಹುರಿಗಡಲೆ, ಮತ್ತು ಉಪ್ಪು ಸೇರಿಸಿ ಮಿಶ್ರಣ ಮಾಡಿ ನುಣ್ಣಗೆ ರುಬ್ಬಿ ಸಾಸಿವೆ ಇಂಗಿನ ಒಗ್ಗರಣೆ ಕೊಡಿ.

ಗರ್ಭಿಣಿಯರು ಹಲ್ಲು ಕೀಳಿಸಬಹುದೇ?

ಸ್ಪಂದನ



ಡಾ. ವೀಣಾ ಎಸ್. ಭಟ್

- **ವಯಸ್ಸು 39, ಮದುವೆಯಾಗಿ 11 ವರ್ಷ ಆಗಿದೆ. ನನ್ನ ಗಂಡನ ವಯಸ್ಸು 45. ಅನಿಯಮಿತ ಮುಟ್ಟಿನ ಸಮಸ್ಯೆ ಇದೆ. ಪಿಸಿಓಡಿ ಸಮಸ್ಯೆ ಇರುವುದರಿಂದ ಇನ್ನು ಮಕ್ಕಳು ಆಗಿಲ್ಲ. ಐಯುಐ, ಐವಿಫ್ ಮಾಡಿಸಿಕೊಂಡೆ. ಚಿಕಿತ್ಸೆ ವಿಫಲವಾಯಿತು. ರಕ್ತಪರೀಕ್ಷೆ ಮಾಡಿದಾಗ ಕ್ಷಯ ಇರುವುದು ಪತ್ತೆಯಾಯಿತು. ಆರು ತಿಂಗಳು ಮಾತ್ರೆ ತೆಗೆದುಕೊಳ್ಳಬೇಕು ಎಂದು ವೈದ್ಯರು ಹೇಳಿದ್ದಾರೆ. ಏನು ಮಾಡಬೇಕು ತೋಚುತ್ತಿಲ್ಲ.**

39 ವರ್ಷಗಳು ಆಗಿವೆ. ಜತೆಗೆ ಪಿಸಿಓಡಿ ಸಮಸ್ಯೆ ಇದೆ ಎಂದು ಹೇಳಿದ್ದೀರಿ. ಹಾಗಾಗಿ ಅಂಡಾಶಯದ ಮೀಸಲು ಸಾಮರ್ಥ್ಯ ಕಡಿಮೆ ಆಗುತ್ತದೆ. ಐವಿಎಫ್ ಚಿಕಿತ್ಸೆಯಲ್ಲಿ ನೂರಕ್ಕೆ ನೂರು ಫಲಿತಾಂಶ ಬಯಸಲು ಸಾಧ್ಯವಿಲ್ಲ. ಅದಕ್ಕೂ ಪ್ರಯತ್ನಿಸಬೇಕಾಗುತ್ತದೆ. ರಕ್ತ ಪರೀಕ್ಷೆಯಲ್ಲಿ ಕ್ಷಯ ರೋಗ ಇದೆ ಎಂದ ಮೇಲೆ ಕನಿಷ್ಠ ಆರು ತಿಂಗಳು ಕ್ಷಯ ಹರಡುವ ಬ್ಯಾಕ್ಟೀರಿಯಾ ನಿಯಂತ್ರಣಕ್ಕೆ ಮಾತ್ರೆಗಳನ್ನು ತೆಗೆದುಕೊಳ್ಳಬೇಕಾಗುತ್ತದೆ.

ಕ್ಷಯವು ಕರುಳು, ಶ್ವಾಸಕೋಶ ಸೇರಿ ಜನನಾಂಗದ ಭಾಗಗಳಿಗೂ ಹಬ್ಬಿರಬಹುದು. ಕ್ಷಯರೋಗ ಬಂದಾಗ ತೆಳ್ಳಗಾಗಿ, ಪೀಚಲಾಗಿ, ನಿಃಶ್ಯಕ್ತಿ ಕಾಣಿಸದೆಯೂ ಕ್ಷಯ ನಂಜು ಜನನಾಂಗಕ್ಕೆ ತಗುಲಬಹುದು.

ಕ್ಷಯದ ಸೋಂಕು ಗರ್ಭನಾಳಕ್ಕೆ ಅಂಟಿಕೊಂಡರೆ ನಾಳ ಗಟ್ಟಿಯಾಗಿ ಸಂತಾನೋತ್ಪತ್ತಿಗೆ ತೊಂದರೆಯಾಗಬಹುದು. ಈ ಸೋಂಕು ಅಂಡಾಶಯಕ್ಕೆ ಹರಡಿದಾಗ ಅಂಡೋತ್ಪತ್ತಿ ಪ್ರಕ್ರಿಯೆಗೂ ತೊಡಕಾಗಬಹುದು. ಗರ್ಭಕೋಶದ ಒಳಾವರಣಕ್ಕೆ ಹರಡಿದರೆ ಅದು ನಾಶವಾಗಿ ಮುಟ್ಟೇ ನಿಂತುಹೋಗುವ ಪರಿಸ್ಥಿತಿ ಬರಬಹುದು. ಗರ್ಭ ಕೊರಳಿನಿಂದ ಯೋನಿಗೂ ಹರಡಬಹುದು. ಹಾಗಾಗಿ ತಡ ಮಾಡದೇ ಕ್ಷಯ ನಿವಾರಕ ಮಾತ್ರೆಗಳನ್ನು ಆರು ತಿಂಗಳು ತಪ್ಪದೇ ತೆಗೆದುಕೊಳ್ಳಿ. ನಂತರವಷ್ಟೆ ಸಹಜ ಅಥವಾ ಐ.ವಿ.ಎಫ್ ಮೂಲಕ ಮಗುವಿಗೆ ಪ್ರಯತ್ನಿಸಿ.

- **ನನಗೆ 26 ವರ್ಷಗಳು. ಮೂರು ತಿಂಗಳ ಗರ್ಭಿಣಿ. ಡಾಕ್ಟರ್ ನನಗೆ ಕೆಳಗೆ ಬಲಬದಿಯ ಕೊನೆಯ ಹಲ್ಲನ್ನು ಕೀಳಿಸಲು ಹೇಳಿದ್ದಾರೆ. ಇದನ್ನು ಏಕೆ ತೆಗೆಸಬೇಕು? ಇದರ ಬಗ್ಗೆ ಹೆಚ್ಚಿನ ಮಾಹಿತಿ ನೀಡಿ.**

ನಿಮಗಾಗಿರುವುದು ಜ್ಞಾನದ ಹಲ್ಲಿನ ಸಮಸ್ಯೆ. ನೀವು ಗರ್ಭಿಣಿಯಾಗಿದ್ದಾಗ ಮೊದಲ ಮೂರು ತಿಂಗಳು ಹಲ್ಲು ಕೀಳಿಸುವುದು ಸುರಕ್ಷಿತವಲ್ಲ. ಯಾಕೆಂದರೆ ಹಲ್ಲು ಕಿತ್ತಾಗ ಹೆಚ್ಚುವರಿ ಆಂಟಿ ಬಯೋಟಿಕ್ ಮತ್ತು ನೋವು ನಿವಾರಕ ಮಾತ್ರಗಳನ್ನೆಲ್ಲ ಸೇವಿಸುವ ಅವಶ್ಯಕತೆ ಬರುತ್ತದೆ ಈ ಸಂದರ್ಭದಲ್ಲಿ ಭ್ರೂಣ ಬೆಳೆದು ಅಂಗಾಂಗಗಳ ಬೆಳವಣಿಗೆ ಆಗುವುದರಿಂದ ಭ್ರೂಣದ ಮೇಲೆ ದುಷ್ಪರಿಣಾಮ ಉಂಟಾಗಬಹುದು.

ಇನ್ನು ಕೊನೆಯ ತ್ರೈಮಾಸಿಕದಲ್ಲಿ ಹಲ್ಲು ಕೀಳ ಹೊರಟರೂ ಅಕಾಲಿಕ ಹೆರಿಗೆ ನೋವು ಸೋಂಕು ಸೆಪ್ಟಿಸೀಮಿಯಾ ಉಂಟಾಗಬಹುದು. ಆ ಹಲ್ಲು ತೆಗೆಯುವುದು ಅನಿವಾರ್ಯವಾದರೆ ತಜ್ಞವೈದ್ಯರನ್ನು ಸಂಪರ್ಕಿಸಿ. ಗರ್ಭಿಣಿಯರು ದಂತ ಆರೋಗ್ಯವನ್ನು ನಿರ್ಲಕ್ಷಿಸುವುದು ಬೇಡ.

ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗತಜ್ಞೆ ಡಾ.ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು

ದಾವಣಗೆರೆಯಲ್ಲಿ 'ರಾಷ್ಟ್ರೀಯ ಅಕ್ಷರ ಹಬ್ಬ'ಕ್ಕೆ ಚಾಲನೆ ನೀಡಿದ ಸಾಹಿತಿ ಎಲ್‌. ಹನುಮಂತಯ್ಯ

'ವೈವಿಧ್ಯ ಒಪ್ಪಿಕೊಳ್ಳುವುದೇ ನೈಜ ಕುಂಭಮೇಳ'

ಪ್ರಜಾವಾಣಿ ವಾರ್ತೆ

ದಾವಣಗೆರೆ: 'ಭಾರತವು ಹಲವು ವೈವಿಧ್ಯಗಳ ಸಂಗಮವಾಗಿದೆ. ಇದನ್ನು ಒಪ್ಪಿಕೊಳ್ಳುವುದೇ ನಿಜವಾದ ಕುಂಭಮೇಳವಾಗಿದೆ. ಹರಿಯುವ ನೀರಿನಲ್ಲಿ ಮುಳುಗುವುದು ಮಾತ್ರ ಕುಂಭಮೇಳವಲ್ಲ. ಈ ತಿಳಿವಳಿಕೆ ಎಲ್ಲರಲ್ಲೂ ಬೆಳೆಯಬೇಕು' ಎಂದು ಸಾಹಿತಿ, ರಾಜ್ಯಸಭೆಯ ಮಾಜಿ ಸದಸ್ಯ ಎಲ್‌.ಹನುಮಂತಯ್ಯ ಹೇಳಿದರು.

ನಗರದ ಬಾಪೂಜಿ ಎಂಬಿಎ ಕಾಲೇಜು ಸಭಾಂಗಣದಲ್ಲಿ ಶುಕ್ರವಾರ ದಾವಣಗೆರೆ ಲಿಟರರಿ ಫೋರಂ ಹಾಗೂ ಅರಸೀಕೆರೆಯ ಅರಸೀ ಸಾಂಸ್ಕೃತಿಕ ವೇದಿಕೆ ಸಹಯೋಗದಲ್ಲಿ ಆರಂಭವಾದ 3 ದಿನಗಳ 'ರಾಷ್ಟ್ರೀಯ ಅಕ್ಷರ ಹಬ್ಬ: 2025' ಉದ್ಘಾಟಿಸಿ ಅವರು ಮಾತನಾಡಿದರು.

'ಯಂತ್ರ ನಾಗರಿಕತೆಯೇ ಸರ್ವಸ್ವವಲ್ಲ. ಯಂತ್ರೋತ್ಪಾದನೆಯಿಂದ ಕುಂಬಾರಿಕೆ, ಶಿಲ್ಪಕಲೆ, ಕಮ್ಮಾರಿಕೆ, ಚಮ್ಮಾರಿಕೆ ಸೇರಿದಂತೆ ಹಲವು ಕಸುಬುಗಳು ಕಣ್ಮರೆಯಾಗುತ್ತಿವೆ. ಇದು ಸಮಾಜದ ಸಮಕಾಲೀನ ಸಮಸ್ಯೆಯೂ ಹೌದು' ಎಂದರು.

'ಮದುವೆಯ ಆಡಂಬರವಿಲ್ಲದೇ ಹೆಣ್ಣು– ಗಂಡು ಜೊತೆಯಾಗಿ ಬದುಕುವುದು (ಲಿವಿಂಗ್ ಟುಗೆದರ್) ಮಹಾ ಕ್ರಾಂತಿಯಾಗಿದೆ. ಆಧುನಿಕ ಕಾಲದಲ್ಲಿ ಅಂತರ್ಜಾತಿ ವಿವಾಹಗಳು ಸಹಜವಾಗುತ್ತಿರುವುದು ಮೌನ ಕ್ರಾಂತಿಯಾಗಿದೆ. ಇದನ್ನು ಯುವ ಲೇಖಕರು ಗಮನಿಸಬೇಕು' ಎಂದು ಸಲಹೆ ನೀಡಿದರು.

'ಆಧುನಿಕತೆಯ ಹೆಸರಲ್ಲಿ ದೇಶದ ರೈತರ ಭೂಮಿಯನ್ನು ಕಿತ್ತುಕೊಂಡು ಅವರನ್ನು ನಿರ್ಗತಿಕರನ್ನಾಗಿಸಲಾಗುತ್ತಿದೆ. ಸಂಕಷ್ಟಕ್ಕೆ ಒಳಗಾದ ರೈತ ತನ್ನ ಊರು, ಜಮೀನು, ಕುಟುಂಬದವರನ್ನು ತೊರೆದು ದುಡ್ಡು ಹಿಡಿದು ಓಡಾಡುವ ಸ್ಥಿತಿ ಇದೆ. ಈ ಮನೋಕ್ಷೋಭೆಗೆ ಸಾಹಿತ್ಯ ಯಾವ ರೀತಿ ಪ್ರತಿಕ್ರಿಯಿಸಿದೆ ಎಂಬುದು ಇಂದಿನ ಬಹುದೊಡ್ಡ ಪ್ರಶ್ನೆಯಾಗಿದೆ. ಇಂತಹ ಸಮಕಾಲೀನ ಸಮಸ್ಯೆಗಳ ಚರ್ಚೆಗೆ ಈ ಅಕ್ಷರ ಹಬ್ಬ ವೇದಿಕೆಯಾಗಲಿ' ಎಂದು ಆಶಿಸಿದರು.



ದಾವಣಗೆರೆಯ ಬಾಪೂಜಿ ಎಂಬಿಎ ಕಾಲೇಜು ಸಭಾಂಗಣದಲ್ಲಿ ದಾವಣಗೆರೆ ಲಿಟರರಿ ಫೋರಂ ಹಾಗೂ ಅರಸೀ ಸಾಂಸ್ಕೃತಿಕ ವೇದಿಕೆ ಸಹಯೋಗದಲ್ಲಿ ನಡೆಯುತ್ತಿರುವ 'ರಾಷ್ಟ್ರೀಯ ಅಕ್ಷರ ಹಬ್ಬ'ವನ್ನು ಸಾಹಿತಿ ಎಲ್‌.ಹನುಮಂತಯ್ಯ ಹಾಗೂ ಇನ್ನಿತರ ಗಣ್ಯರು ಉದ್ಘಾಟಿಸಿದರು ಪ್ರಜಾವಾಣಿ ಚಿತ್ರ

'ಮಗುವನ್ನು ಹೆತ್ತಾಗ ತಾಯಿಯ ರಕ್ತ ತೊಳೆಯಲು ಹಾಕುವ ನೀರು ಕುಂಭಮೇಳದ ನೀರಿಗಿಂತ ಶ್ರೇಷ್ಠವಲ್ಲವೇ? ಎಲ್ಲರೂ ಅಲ್ಲಿಗೇ (ಕುಂಭಮೇಳ) ಹೋಗಿ ಹೆರಬೇಕೇ? ಎಂದು ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕ ಪ್ರೊ.ಎಚ್‌.ಟಿ. ಪೋತೆ ಪ್ರಶ್ನಿಸಿದರು.

'ಮಕ್ಕಳನ್ನು ಯಾವ ಶಾಲೆಗೆ ಸೇರಿಸಬೇಕು?, ಯಾವ ಮಾಧ್ಯಮದಲ್ಲಿ ಓದಿಸಬೇಕು? ಎಂಬ ಸ್ವಾತಂತ್ರ್ಯ ಪಾಲಕರಿಗೆ ಇದೆ. ಇದು ಸರ್ಕಾರ ನಿರ್ಧರಿಸಬೇಕಾದ ವಿಷಯವಲ್ಲ ಎಂದು ಸುಪ್ರೀಂ ಕೋರ್ಟ್ ಆದೇಶ ನೀಡಿದೆ. ಇದಕ್ಕೆ ನನ್ನ ಸಹಮತ ಇದೆ. ಸುಪ್ರೀಂಕೋರ್ಟ್ ನೀಡಿದ ಸ್ವಾತಂತ್ರ್ಯವನ್ನು ಪಾಲಕರು ಉಪಯೋಗಿಸಿಕೊಂಡು ಮಕ್ಕಳನ್ನು ಸರ್ಕಾರಿ ಶಾಲೆಗೇ ಸೇರಿಸಬೇಕು' ಎಂದು ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್‌.ಎನ್‌. ಮುಕುಂದರಾಜ್ ಹೇಳಿದರು.

ದೂರದರ್ಶನದ ಚಂದನ ವಾಹಿನಿಯ ಕಾರ್ಯಕ್ರಮ ಮುಖ್ಯಸ್ಥೆ ಆರತಿ ಎಚ್‌.ಎನ್‌., ಕತೆಗಾರ್ತಿ ಚಾಂದಿನಿ, ಪತ್ರಕರ್ತ ಬಿ.ಎನ್‌. ಮಲ್ಲೇಶ್ ಮಾತನಾಡಿದರು. ಕಾರ್ಯಕ್ರಮ ಸಂಯೋಜಕ ಶ್ರೀಹರ್ಷ ಸಾಲಿಮಠ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಾಹಿತಿಗಳು, ಬರಹಗಾರರು, ಚಿಂತಕರು ಉಪಸ್ಥಿತರಿದ್ದರು.

'ಭಾಷೆ ಉಳಿವು: ಲೇಖಕರಿಗೆ ಸವಾಲು'

'ಒಂದೆರೆಡು ಭಾಷೆ ಬಿಟ್ಟರೆ ಬಹುತೇಕ ಭಾರತೀಯ ಭಾಷೆಗಳು ಪತನಮುಖಿ ಆಗುತ್ತಿರುವುದನ್ನು ಅಂಕಿ–ಅಂಶಗಳು ಸ್ಪಷ್ಟಪಡಿಸುತ್ತಿವೆ. ಕಣ್ಮರೆಯಾಗುತ್ತಿರುವ ಭಾರತೀಯ ಭಾಷೆಗಳನ್ನು ಉಳಿಸಿಕೊಳ್ಳುವುದು ಹೇಗೆ ಎಂಬುದು ಲೇಖಕರಿಗೆ ಬಹುದೊಡ್ಡ ಸವಾಲಾಗಿದೆ' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಹೇಳಿದರು.

'ಜಾಗತೀಕರಣದ ನಂತರದ ಬೆಳವಣಿಗೆಯಿಂದ ಭಾರತದ ಹಲವು ಸಣ್ಣ ಸಮುದಾಯಗಳು ನಶಿಸುತ್ತಿವೆ. 1886ರಲ್ಲಿ 55,000 ಜನರು ಕೊರಗ ಭಾಷೆಯನ್ನು ಮಾತನಾಡುತ್ತಿದ್ದರು. ಆ ಸಂಖ್ಯೆ 2011ರ ಜನಗಣತಿಯಲ್ಲಿ 2,000ಕ್ಕೆ ಇಳಿದಿದೆ. ಮುಂದಿನ 20–30 ವರ್ಷಗಳಲ್ಲಿ ಈ ಭಾಷೆಯೇ ಕಣ್ಮರೆಯಾಗುವ ಅಪಾಯವಿದೆ' ಎಂದರು.

ಬಾಲಕನ ರಕ್ತಕ್ಯಾನ್ಸರ್ ಚಿಕಿತ್ಸೆಗೆ ₹95.7 ಲಕ್ಷ ಸಂಗ್ರಹ

ಪ್ರಜಾವಾಣಿ ವಾರ್ತೆ

ಬೆಳ್ತಂಗಡಿ/ಮಂಗಳೂರು: ರಕ್ತದ ಕ್ಯಾನ್ಸರ್ ನ್ಯೂರೋಬ್ಲಾಸ್ಟೋಮದಿಂದ ಬಳಲುತ್ತಿರುವ ಬಾಲಕನೊಬ್ಬನ ಚಿಕಿತ್ಸೆಗಾಗಿ ಸಾಮಾಜಿಕ ಮಾಧ್ಯಮಗಳ ಮೂಲಕ ಮನವಿ ಮಾಡಿ, ದಾನಿಗಳಿಂದ ₹95.7 ಲಕ್ಷ ಸಂಗ್ರಹಿಸಲಾಗಿದೆ.

ಮಂಗಳೂರು ಸಮೀಪದ ಕೋಟೆಕಾರು ಮೂಡೂರು ನಿವಾಸಿ ಫಯಾಜ್‌ಗೆ ಈ ರೀತಿ ಹಣ ಸಂಗ್ರಹಿಸುವ ಅನುಭವ ಇದೇ ಮೊದಲಲ್ಲ. 'ಫಯಾಜ್ ಗ್ರೂಪ್' ಹೆಸರಿನಲ್ಲಿ ಈಗಾಗಲೇ ಅನೇಕ ಮಂದಿಯ ಚಿಕಿತ್ಸೆಗೆ ಹಣ ಸಂಗ್ರಹಿಸಿದ್ದಾರೆ. ಅಸ್ಥಿಮಜ್ಜೆ ಕಸಿಗೆ ಅನೇಕ ಮಕ್ಕಳಿಗೆ ನೆರವಾಗಿದ್ದಾರೆ. ಈಗ ಬೆಳ್ತಂಗಡಿ ತಾಲ್ಲೂಕಿನ ಉಜಿರೆಯ ಕಕ್ಕೆಜಾಲಿನ ಬಾಲಕನ ಚಿಕಿತ್ಸೆಗೆ ಹಣ ಸಂಗ್ರಹಿಸಿದ್ದಾರೆ.

ಕಕ್ಕೆಜಾಲು ನಿವಾಸಿ ಮುಸ್ತಫಾ ಮತ್ತು ನಫೀಸಾ ಬಾನು ಅವರ ಮಗ ನಾಲ್ಕು ವರ್ಷದ ಮೊಹಮ್ಮದ್ ಮುಹದ್ ಸಮಸ್ಯೆಯಿಂದ ಬಳಲುತ್ತಿದ್ದು ಈವರೆಗೆ ₹30 ಲಕ್ಷ ಖರ್ಚು ಮಾಡಿದರೂ ಪ್ರಯೋಜನವಾಗಲಿಲ್ಲ. ಕಣ್ಣೀರು ಹಾಕುತ್ತಲೇ ಕಳೆಯುತ್ತಿದ್ದ ಇವರ ಬಗ್ಗೆ ತಿಳಿದ ಫಯಾಜ್ ಅವರು ತಮ್ಮ ವಾಟ್ಸ್ ಆ್ಯಪ್ ಗ್ರೂಪ್ ಸೇರಿ ಸಾಮಾಜಿಕ ತಾಣಗಳಲ್ಲಿ ವಿಡಿಯೊ ಸಮೇತ ಸಂದೇಶ ಹಾಕಿದರು. ಹಣ ಬರಲು ಆರಂಭವಾಯಿತು. ಇದೇ ವೇಳೆ ಮಣಿಪಾಲದ ಕಸ್ತೂರ್‌ಬಾ ಆಸ್ಪತ್ರೆಯ ಮಕ್ಕಳ ಕ್ಯಾನ್ಸರ್ ತಜ್ಞ ಡಾ.ವಾಸುದೇವ ಭಟ್ ಅವರನ್ನು ಸಂಪರ್ಕಿಸಿದಾಗ, ಅವರು ಚಿಕಿತ್ಸೆಗೆ ₹90 ಲಕ್ಷದಷ್ಟು ಖರ್ಚಾಗಬಹುದು ಎಂದಿದ್ದಾರೆ. 'ಆಸ್ಟ್ರೇಲಿಯಾದಿಂದ ಔಷಧಿ ಬಂದ ಕೂಡಲೇ ಚಿಕಿತ್ಸೆ ಆರಂಭವಾಗಲಿದೆ' ಎಂದು ಫಯಾಜ್ 'ಪ್ರಜಾವಾಣಿ'ಗೆ ತಿಳಿಸಿದರು.



ನಮ್ಮದು 20 ಮಂದಿಯ ತಂಡ. 'ಚಾಲೆಂಜ್' ಎಂದು ಸಂದೇಶ ಹಾಕಿದರೆ ಬಹಳಷ್ಟು ಮಂದಿ ಅದನ್ನು ಸವಾಲಾಗಿ ಸ್ವೀಕರಿಸುತ್ತಾರೆ. ಹಣ ಕೊಡುವವರಲ್ಲಿ ಬಹುತೇಕರು ದ.ಕ ಜಿಲ್ಲೆಯವರು

ಫಯಾಜ್, ಸಾಮಾಜಿಕ ಕಾರ್ಯಕರ್ತ

ಪೋಕ್ಸೊ: ಬಿಎಸ್‌ವೈ ಸದ್ಯಕ್ಕೆ ನಿರಾಳ

ಒಂದನೇ ಪುಟದಿಂದ...

ಸಂಜ್ಞೇಯ ಅಪರಾಧವನ್ನು ಪರಿಗಣಿಸಿ ಸಕ್ಷಮ ನ್ಯಾಯಾಲಯ ನೀಡಿರುವ ಆದೇಶವನ್ನು ಯಡಿಯೂರಪ್ಪ ಅವರಿಗೆ ಸೀಮಿತಗೊಳಿಸಿ ವಜಾ ಮಾಡಲಾಗಿದೆ. ಅಪರಾಧ, ತನಿಖೆ, ಅಂತಿಮ ವರದಿ ಎಲ್ಲವೂ ಹಾಗೆಯೇ ಉಳಿಯಲಿವೆ. ಯಡಿಯೂರಪ್ಪ ಅವರಿಗೆ ಸದ್ಯಕ್ಕೆ ಬಂಧನದ ಭೀತಿ ಇಲ್ಲವಾದರೂ ನ್ಯಾಯಾಲಯದಲ್ಲಿ ಕಾನೂನು ಹೋರಾಟ ಮುಂದುವರಿಯಲಿದೆ.

ಪ್ರಕರಣವೇನು?: 'ನನ್ನ ಮಗಳ ಮೇಲಿನ ಲೈಂಗಿಕ ದೌರ್ಜನ್ಯಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಸಹಾಯ ಮಾಡಬೇಕು' ಎಂದು ಬೇಡಿ ಬಂದಿದ್ದ ಸಂತ್ರಸ್ತ ಬಾಲಕಿಯ ತಾಯಿ ನೀಡಿದ್ದ ದೂರಿನ ಅನುಸಾರ ಸದಾಶಿವನಗರದ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ.

ಆರ್‌ಎಂವಿ ಎರಡನೇ ಹಂತದಲ್ಲಿನ ಡಾಲರ್ಸ್ ಕಾಲೊನಿಯಲ್ಲಿರುವ ಯಡಿಯೂರಪ್ಪ ಅವರ 'ಧವಳಗಿರಿ' ನಿವಾಸದಲ್ಲಿ 2024ರ ಫೆ. 2ರಂದು ಬೆಳಿಗ್ಗೆ 11ರಿಂದ 11.30ರ ನಡುವೆ 'ಬಾಲಕಿಗೆ ಲೈಂಗಿಕ ಕಿರುಕುಳ ನೀಡಲಾಗಿದೆ' ಎಂದು ಆರೋಪಿಸಲಾಗಿದೆ.

ಯಡಿಯೂರಪ್ಪ ವಿರುದ್ಧ ಪೋಕ್ಸೊ ಕಾಯ್ದೆ ಕಲಂ 8ರ ಅಡಿ ಲೈಂಗಿಕ ದೌರ್ಜನ್ಯ, ಭಾರತೀಯ ದಂಡ ಸಂಹಿತೆ–1860ರ (ಐಪಿಸಿ) ಕಲಂ 354 (ಎ)ರ ಅಡಿಯಲ್ಲಿ ಲೈಂಗಿಕ ಕಿರುಕುಳದ ಆರೋಪ ಹೊರಿಸಲಾಗಿದೆ. ಇತರ ಮೂವರ ವಿರುದ್ಧ ಐಪಿಸಿ ಕಲಂ 204 ಮತ್ತು 214ರ ಅಡಿ ಸಾಕ್ಷ್ಯ ನಾಶ ಮತ್ತು ಉಡುಗೊರೆ ನೀಡಲು ಮುಂದಾದ ಅಪರಾಧಗಳಡಿ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿದೆ.

ಶಾಸಕ ಕೃಷ್ಣಮೂರ್ತಿಗೆ ಮಾತೃ ವಿಯೋಗ

ಮೈಸೂರು: ಕೇರಳದ ರಾಜ್ಯಪಾಲರಾಗಿದ್ದ ದಿವಂಗತ ಬಿ.ರಾಚಯ್ಯ ಅವರ ಪತ್ನಿ ಗೌರಮ್ಮ (88) ಶುಕ್ರವಾರ ನಗರದ ಅಪೋಲೊ ಆಸ್ಪತ್ರೆಯಲ್ಲಿ ವಯೋಸಹಜ ಅಸೌಖ್ಯದಿಂದ ನಿಧನರಾದರು.

ಮೃತರಿಗೆ ಕೊಳ್ಳೇಗಾಲ ಶಾಸಕ ಎ.ಆರ್‌.ಕೃಷ್ಣಮೂರ್ತಿ, ಚಾಮರಾಜನಗರ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಎ.ಆರ್‌.ಬಾಲರಾಜು ಹಾಗೂ ಐವರು ಪುತ್ರಿಯರು ಇದ್ದಾರೆ.

ಸರಸ್ವತಿಪುರಂ 9ನೇ ಮುಖ್ಯರಸ್ತೆಯಲ್ಲಿರುವ ಅವರ ನಿವಾಸದಲ್ಲಿ ಸಂಜೆವರೆಗೂ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಫೆ. 8ರಂದು ಬೆಳಿಗ್ಗೆ 11 ಗಂಟೆಗೆ ಸ್ವಗ್ರಾಮ ಚಾಮರಾಜನಗರ ತಾಲ್ಲೂಕಿನ ಆಲೂರು ಗ್ರಾಮದಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.



ಗೌರಮ್ಮ

ಯುವ ಕಾಂಗ್ರೆಸ್ ಚುನಾವಣೆ; ಡಿಕೆಶಿ ಬೆಂಬಲಿಗ ಮೇಲುಗೈ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುವ ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬೆಂಬಲಿತ ಅಭ್ಯರ್ಥಿ ಎಚ್‌.ಎಸ್‌. ಮಂಜುನಾಥ್ ಹೆಚ್ಚಿನ ಮತ ಪಡೆದಿದ್ದಾರೆ.

ಸಹಕಾರ ಸಚಿವ ಕೆ.ಎನ್‌. ರಾಜಣ್ಣ, ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಬೆಂಬಲಿತ ಅಭ್ಯರ್ಥಿ ದೀಪಿಕಾ ರೆಡ್ಡಿ ಎರಡನೇ ಸ್ಥಾನ ತಲುಪಿದ್ದಾರೆ. ಮಂಜುನಾಥ್ 5,67,343 ಮತ ಪಡೆದರೆ, ದೀಪಿಕಾ ರೆಡ್ಡಿ 2,95,705 ಮತ, ಅಬ್ದುಲ್ ರಹಿಮಾನ್ 45,968 ಮತ ಗಳಿಸಿದ್ದಾರೆ.

ಎಐಸಿಸಿ ಚುನಾವಣೆ ಸಮಿತಿ ಯುವ ಕಾಂಗ್ರೆಸ್‌ನ ಎಲ್ಲ ಹಂತದ ಘಟಕಗಳಿಗೆ ನೋಂದಣಿ ಮಾಡಿಕೊಂಡಿತ್ತು. ರಾಜ್ಯ ಘಟಕ, ಜಿಲ್ಲಾ ಘಟಕ, ಬ್ಲಾಕ್ ಘಟಕಗಳಿಗೆ ವಿವಿಧ ಹುದ್ದೆಗಳಿಗೆ ಏಕ ಕಾಲಕ್ಕೆ ಮತದಾನ ನಡೆದಿತ್ತು. ಈ ಬಾರಿಯ ನಿಯಮದ ಪ್ರಕಾರ ಅತಿ ಹೆಚ್ಚು ಮತ ಪಡೆದ ಮೂವರು ಅಭ್ಯರ್ಥಿಗಳಲ್ಲಿ ಒಬ್ಬರನ್ನು ಅಧ್ಯಕ್ಷರನ್ನಾಗಿ ಹಾಗೂ ಉಳಿದ ಇಬ್ಬರನ್ನು ಉಪಾಧ್ಯಕ್ಷರನ್ನಾಗಿ ನೇಮಿಸಲಾಗುತ್ತದೆ.

'ಎಚ್‌ಡಿಕೆ ಬಳಿ ನಿಲ್ಲಬೇಕಾ'

ಸಚಿವ ಎನ್‌.ಚಲುವರಾಯಸ್ವಾಮಿ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಮಂಡ್ಯ: 'ಕೈಗಾರಿಕೆ ಅಭಿವೃದ್ಧಿಗೆ ಸಂಬಂಧಿಸಿ ಹೊರ ರಾಜ್ಯದವರಂತೆ ಕರ್ನಾಟಕ ಸರ್ಕಾರ ತಮ್ಮನ್ನು ಬಳಸಿಕೊಳ್ಳುತ್ತಿಲ್ಲವೆಂದು ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ಹೇಳಿದ್ದಾರೆ. ನಾನು ಅರ್ಜಿ ಹಿಡಿದು ಅವರ ಮನೆ ಬಳಿ ನಿಲ್ಲಬೇಕೇ? ರಾಜ್ಯದ ಜನ ಅವರನ್ನು ಗೆಲ್ಲಿಸಿಲ್ಲವೇ' ಎಂದು ಸಚಿವ ಎನ್‌.ಚಲುವರಾಯಸ್ವಾಮಿ ಪ್ರಶ್ನಿಸಿದರು.



ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಚಂದ್ರಬಾಬು ನಾಯ್ಡು, ನಿತೀಶ್ ಕುಮಾರ್ ಬೆಂಬಲವಿಲ್ಲವೆಂದರೆ ನರೇಂದ್ರ ಮೋದಿ ಪ್ರಧಾನಿಯಾಗಿ ಇರುವುದಿಲ್ಲ. ಹಾಗಾಗಿ ಅವರ ರಾಜ್ಯಗಳ ಅಭಿವೃದ್ಧಿಗೆ ಮುಂದಾಗಿದ್ದಾರೆ' ಎಂದು ಟೀಕಿಸಿದರು.

'ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಮುಡಾ ಪ್ರಕರಣ ರಾಜಕೀಯ ಪ್ರೇರಿತ. ಲೋಕಾಯುಕ್ತ ತನಿಖೆ ಮಾಡುತ್ತಿದೆ. ನ್ಯಾಯ ಕೊಟ್ಟ ನ್ಯಾಯಾಲಯಕ್ಕೆ ಧನ್ಯವಾದ' ಎಂದರು.

'ರಾಜ್ಯ ಸರ್ಕಾರದ ಎಲ್ಲ ನಿರ್ಧಾರಗಳನ್ನೂ ರಾಜ್ಯಪಾಲರು ನಿರಾಕರಿಸುತ್ತಾರೆ. ಅನೇಕ ವಿಚಾರಗಳಿಗೆ ಅಂಕಿತ ಹಾಕದೆ ವರ್ಷಗಟ್ಟಲೇ ಬಾಕಿ ಉಳಿದಿದೆ. ಆದರೆ, ಎಲ್ಲದ್ದಕ್ಕೂ ಮೊದಲು ಸಿದ್ದರಾಮಯ್ಯ ವಿರುದ್ಧ ತನಿಖೆಗೆ ಅನುಮತಿ ನೀಡಿದ್ದರು' ಎಂದು ದೂರಿದರು.

'ಮೈಕ್ರೊಫೈನಾನ್ಸ್ ಕಂಪನಿಗಳ ಕಿರುಕುಳದ ಕುರಿತು ಸರ್ಕಾರದ ನಿಲುವು ಸ್ಪಷ್ಟವಾಗಿದೆ. ಸಾಂವಿಧಾನಿಕ ಹುದ್ದೆಯಲ್ಲಿರುವ ರಾಜ್ಯಪಾಲರು ನ್ಯಾಯ ಕೊಡಬೇಕು. ಆದರೆ ಬಿಜೆಪಿ ವಕ್ತಾರರಾಗಿ ಮಾಡುತ್ತಿದ್ದಾರೆ. ಹೀಗೇ ಆದರೆ ಕಿರುಕುಳಕ್ಕೆ ಬೇಸತ್ತವರೆಲ್ಲರೂ ಪ್ರತಿಭಟಿಸುವ ಕಾಲ ಬರುತ್ತದೆ' ಎಂದರು.

'ಆರ್‌.ಅಶೋಕ ಅವರು ಪ್ರತಿಪಕ್ಷ ನಾಯಕರಾಗಿ ಕೆಲಸ ಮಾಡುತ್ತಿಲ್ಲವಾದ್ದರಿಂದ ಅವರ ಹೇಳಿಕೆಗೆ ಪ್ರತಿಕ್ರಿಯಿಸಲಾರೆ. ಅವರು ಆತ್ಮೀಯರು, ಆದರೆ ಪಾಪದ ಮನುಷ್ಯ. ಪಕ್ಷ ಕೊಟ್ಟಿರುವ ಸ್ಥಾನ ಉಳಿಸಿಕೊಳ್ಳಲು ಮಾತನಾಡುತ್ತಾರೆ. ರಾಜ್ಯ ಸರ್ಕಾರದ ಮೇಲೆ ವಾಗ್ದಾಳಿ ನಡೆಸದಿದ್ದರೆ ಅವರನ್ನೇ ಬದಲಾಯಿಸಿಬಿಡುತ್ತಾರೆ' ಎಂದು ವ್ಯಂಗ್ಯವಾಡಿದರು.

'ಎಚ್‌.ಡಿ.ದೇವೇಗೌಡರ ಕುಟುಂಬ ಬಿಟ್ಟರೆ ಬೇರೆ ಯಾರೂ ಪ್ರಾಮಾಣಿಕರಲ್ಲ. ಈಗ ಕಾಂಗ್ರೆಸ್‌ನವರು ಮಾತ್ರ ಭ್ರಷ್ಟರು, ಬಿಜೆಪಿಯನ್ನು ಒಪ್ಪುತ್ತಾರೆ ಎಂದೆನ್ನಿಸುತ್ತದೆ. ದೇವೇಗೌಡರಿಗೆ ಇನ್ನೂ ಹತ್ತಾರು ವರ್ಷ ಆಯಸ್ಸು ಸಿಗಲಿ. ನಮ್ಮನ್ನು ಹೀಗೇ ಟೀಕಿಸುತ್ತಿರಲಿ' ಎಂದರು.

ಎಚ್‌.ಡಿ.ದೇವೇಗೌಡ ಹೇಳಿಕೆಗೆ ಡಿಕೆಶಿ ತಿರುಗೇಟು

'ಪ್ರಚಾರ ಬಿಟ್ಟು ಬದ್ಧತೆ ತೋರಲಿ'

ಪ್ರಜಾವಾಣಿ ವಾರ್ತೆ

ಕನಕಪುರ (ರಾಮನಗರ): 'ಪ್ರಧಾನಿ ಮೋದಿ ಅವರ ಕೈ ಹಿಡಿದು ಮೇಕೆದಾಟು ಅಣೆಕಟ್ಟೆ ಯೋಜನೆಗೆ ಸಹಿ ಹಾಕಿಸುವೆ ಎಂದು ಜೆಡಿಎಸ್ ವರಿಷ್ಠ ಎಚ್‌.ಡಿ.ದೇವೇಗೌಡ ಅವರು ಹೇಳಿದ್ದರು. ಇನ್ನೂ ಯಾಕೆ ಸಹಿ ಹಾಕಿಸಿಲ್ಲ? ಕೇವಲ ಪ್ರಚಾರಕ್ಕೆ ಮಾತನಾಡದೆ, ರಾಜಕೀಯ ಬದ್ಧತೆ ಪ್ರದರ್ಶಿಸಬೇಕು. ಅವರ ಹಿರಿತನಕ್ಕಿರುವ ಗೌರವವನ್ನು ಉಳಿಸಿಕೊಳ್ಳಬೇಕು' ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

'ಬೆಂಗಳೂರಿಗೆ ನೀರು ಕೊಡಿಸುವುದೇ ನನ್ನ ಕೊನೆ ಆಸೆ' ಎಂಬ ದೇವೇಗೌಡರ ಹೇಳಿಕೆ ಕುರಿತು ತಾಲ್ಲೂಕಿನ ಶಿವನಹಳ್ಳಿಯಲ್ಲಿ ಶುಕ್ರವಾರ ಮಾಧ್ಯಮದವರಿಗೆ ಪ್ರತಿಕ್ರಿಯಿಸಿದ ಅವರು, 'ನಾವು ಮೇಕೆದಾಟು ಪಾದಯಾತ್ರೆ ಮಾಡಿದಾಗ ಇವರೇ ಟೀಕಿಸಿದ್ದರು. ಈಗ ಅವರ ಮೈತ್ರಿಕೂಟವೇ ಕೇಂದ್ರದಲ್ಲಿ ಅಧಿಕಾರದಲ್ಲಿದ್ದರೂ ಯಾಕೆ ಅನುಮತಿ ಕೊಡಿಸಿಲ್ಲ' ಎಂದು ಪ್ರಶ್ನಿಸಿದರು.

'ಈ ಡಿ.ಕೆ.ಶಿವಕುಮಾರ್ ಬೆಂಗಳೂರಿನ ಚರಿತ್ರೆಗೆ ಸೇರುವಂತಹ ಕೆಲಸ ಮಾಡಿದ್ದಾನೆ. ನಾನು ಡಿಸಿಎಂ ಆದ ತಕ್ಷಣ ಎಲ್ಲ ಕಡೆ ಕುಡಿಯುವ ನೀರನ್ನು ಮೀಸಲಿಟ್ಟಿದ್ದು, ಹಳ್ಳಿಗಳಿಗೂ ನೀರು ಕೊಡಲಾಗುತ್ತಿದೆ. ತೊರೆಕಾಡನಹಳ್ಳಿ ಮತ್ತು ಎತ್ತಿನಹೊಳೆಯಿಂದ ನೀರು ತಂದಿದ್ದೇವೆ. ತುಮಕೂರಿನವರೆಗೂ ನೀರು ಕೊಡಲಿದ್ದೇವೆ. ಹಿಂದಿನ ಬಿಜೆಪಿ ಅಥವಾ ಜೆಡಿಎಸ್ ಸರ್ಕಾರ ಈ ಕೆಲಸ ಮಾಡಲಿಲ್ಲ. ಇದು ಕಾಂಗ್ರೆಸ್ ಸಂಕಲ್ಪ' ಎಂದರು.

ಎಚ್‌ಡಿಕೆಗಿಲ್ಲ ಜವಾಬ್ದಾರಿ: 'ರಾಜ್ಯಕ್ಕೆ ಕೇಂದ್ರದಿಂದ ಅನುದಾನ ತರುವ ಕುರಿತು, ರಾಜ್ಯದ ಯಾವ ಸಚಿವರೂ ನನ್ನೊಂದಿಗೆ ಚರ್ಚಿಸಿಲ್ಲ ಎಂದಿರುವ ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ಅವರ ಹೇಳಿಕೆ ಹಾಸ್ಯಾಸ್ಪದ. ಅವರ ಜತೆ ಯಾಕೆ ಚರ್ಚಿಸಬೇಕು? ರಾಜ್ಯಕ್ಕೇನು ಕೊಡಿಸಬೇಕು ಎಂಬ ಜವಾಬ್ದಾರಿ ಅವರಿಗಿಲ್ಲವೇ?' ಎಂದು ತಿರುಗೇಟು ನೀಡಿದರು.


'ವಿಪಕ್ಷದ ನಾಯಕ ಆರ್‌.ಅಶೋಕ ಅವರು ಜ್ಯೋತಿಷ ಕಲಿಯುತ್ತಿದ್ದಾರೆಂದು ತಿಳಿದು ಸಂತೋಷವಾಯಿತು. ನನಗೂ ಈ ಜ್ಯೋತಿಷದ ಚಟವಿದೆ. ಸಮಯ ಕೊಟ್ಟರೆ ನಾನೂ ಅವರ ಬಳಿ ಜ್ಯೋತಿಷ ಕೇಳಿಕೊಂಡು ಬರುತ್ತೇನೆ' ಎಂದು 'ನವೆಂಬರ್‌ನಲ್ಲಿ ಸಿದ್ದರಾಮಯ್ಯ ಅವರು ಸಿ.ಎಂ ಕುರ್ಚಿಯಲ್ಲಿ ಇರಲ್ಲ' ಎಂಬ ಅವರ ಮಾತಿಗೆ ವ್ಯಂಗ್ಯವಾಡಿದರು.

'2 ದಿನದಲ್ಲಿ ಬಜೆಟ್ ದಿನಾಂಕ ಘೋಷಣೆ'

'ಇನ್ನೆರಡು ದಿನಗಳಲ್ಲಿ ಬಜೆಟ್ ದಿನಾಂಕ ಘೋಷಣೆಯಾಗಲಿದೆ. ಮುಖ್ಯಮಂತ್ರಿ ಕೂಡ ಮುಂದಿನ ತಿಂಗಳ ಮೊದಲ ವಾರದಲ್ಲಿ ಬಜೆಟ್ ಮುಂಡಿಸಲು ತಯಾರಿ ಮಾಡಿಕೊಂಡಿದ್ದಾರೆ.

ಗ್ಯಾರಂಟಿ ಯೋಜನೆಗಳು ಜನರಿಗೆ ನಾವು ಕೊಟ್ಟಿರುವ ಆರ್ಥಿಕ ಶಕ್ತಿ. ವರ್ಷಕ್ಕೆ ₹56 ಸಾವಿರ ಕೋಟಿ ಮೊತ್ತ ಜನರನ್ನು ತಲುಪುತ್ತಿದೆ. ಬದುಕಿನ ಸುಧಾರಣೆ ಹಾಗೂ ಸ್ವಾವಲಂಬನೆಗಾಗಿ ಈ ಯೋಜನೆ ಜಾರಿಗೆ ತಂದಿದ್ದೇವೆ' ಎಂದು ಬಜೆಟ್ ತಯಾರಿ ಕುರಿತ ಪ್ರಶ್ನೆಗೆ ಡಿ.ಕೆ.ಶಿವಕುಮಾರ್ ಪ್ರತಿಕ್ರಿಯಿಸಿದರು.

'ಭಾರತದ ವಲಸಿಗರನ್ನು ಅಮೆರಿಕ ಹೀನಾಯವಾಗಿ ನಡೆಸಿಕೊಂಡಿರುವುದು ಖಂಡನೀಯ. ವಲಸಿಗರನ್ನು ಕೈದಿಗಳಂತೆ ನೋಡಬಾರದು. ಅಮೆರಿಕದ ನಡೆ ಮನುಕುಲಕ್ಕೆ ಮಾಡಿದ ಅವಮಾನ' ಎಂದು ಕಿಡಿಕಾರಿದರು.



ಶಿವಕುಮಾರ್

ಸ್ವಸಹಾಯ ಗುಂಪುಗಳೇ ಮೈಕ್ರೊ ಫೈನಾನ್ಸ್ ಕಂಪನಿಗಳ ಮೊದಲ ಗುರಿ ● ಕಡಿಮೆ ಬಡ್ಡಿಯ ಆಮಿಷವೊಡ್ಡಿ ಸಾಲ

ಮೈಕ್ರೊ ಫೈನಾನ್ಸ್‌ಗಳಿಗೆ 'ಸ್ತ್ರೀಶಕ್ತಿ'ಯೇ ಶಾಖೆ

● ಚಂದ್ರಹಾಸ ಹಿರೇಮಳಲಿ

'ಮೈಕ್ರೊ ಫೈನಾನ್ಸ್' ವಿಷವರ್ತುಲ 2

ಬೆಂಗಳೂರು: ಎರಡೂವರೆ ದಶಕಗಳ ಹಿಂದೆ ಅಸ್ತಿತ್ವಕ್ಕೆ ಬಂದ 'ಸ್ತ್ರೀಶಕ್ತಿ' ಯೋಜನೆ ಬಡ ಮತ್ತು ತಳವರ್ಗದ ಮಹಿಳೆಯರಿಗೆ ಆರ್ಥಿಕ ಶಕ್ತಿ ತುಂಬಿ, ಸಬಲೀಕರಣದತ್ತ ಮಹತ್ವದ ಹೆಜ್ಜೆ ಇಟ್ಟಿದ್ದರೂ, ಯೋಜನೆಯಡಿ ರಚಿಸಿದ ಸ್ವಸಹಾಯ ಗುಂಪುಗಳೇ ಇಂದು 'ಮೈಕ್ರೊ ಫೈನಾನ್ಸ್' ಕಂಪನಿಗಳ ವಹಿವಾಟು ವಿಸ್ತರಣೆಯ ಶಾಖೆಗಳಾಗಿವೆ.

ಸ್ತ್ರೀಶಕ್ತಿ ಗುಂಪುಗಳನ್ನೇ ಬಂಡವಾಳ ಮಾಡಿಕೊಂಡ ಕೆಲ ರಾಜಕಾರಣಿಗಳು, ಮಠಾಧೀಶರು, ಧರ್ಮ ಪ್ರವರ್ತಕರು, ಗುತ್ತಿಗೆದಾರರು, ಉದ್ಯಮಿಗಳು ಹಲವು ಜಿಲ್ಲೆಗಳಲ್ಲಿ ತಮ್ಮ ಸಂಸ್ಥೆಗಳ ಮೂಲಕ ಆರ್ಥಿಕ ವಹಿವಾಟು ವಿಸ್ತರಿಸಿಕೊಂಡಿದ್ದಾರೆ. ಕೆಲ ಜಿಲ್ಲೆಗಳಲ್ಲಿ ಐಎಎಸ್, ಕೆಎಎಸ್‌ನಂತಹ ಅಧಿಕಾರಿ ವರ್ಗವೂ ಬೇನಾಮಿ ಮೈಕ್ರೊ ಫೈನಾನ್ಸ್ ಕಂಪನಿಗಳಲ್ಲಿ ಬಂಡವಾಳ ಹೂಡಿವೆ. ಸಮಾಜ ಸೇವೆ, ಗ್ರಾಮಾಭಿವೃದ್ಧಿ, ಮಹಿಳಾ ಸಬಲೀಕರಣ, ಸ್ವಯಂ ಉದ್ಯೋಗ, ತರಬೇತಿ ಹೆಸರಲ್ಲಿ ಕೆಲವರು ಹಣಕಾಸು ವಹಿವಾಟು ನಡೆಸುತ್ತಿದ್ದಾರೆ.

ಸ್ವ-ಸಹಾಯ ಗುಂಪುಗಳ ಮೂಲಕ ಮಹಿಳೆಯರ ಸಬಲೀಕರಣ, ಸಾಮಾಜಿಕ ಬದಲಾಣೆಗೆ ಸೂಕ್ತ ವಾತಾವರಣ ಹಾಗೂ ಆತ್ಮವಿಶ್ವಾಸ ಮೂಡಿಸಲು, ಸಂಪನ್ಮೂಲಗಳ ಮೇಲೆ ಹತೋಟಿ ಸಾಧಿಸಲು, ಬಡ ಮಹಿಳೆಯರ ಆದಾಯವನ್ನು ಹೆಚ್ಚಿಸಿ ಆರ್ಥಿಕ ಸ್ಥಿರತೆ ಸಾಧಿಸಲು, ವಿವಿಧ ಇಲಾಖೆಗಳ ಅಭಿವೃದ್ಧಿಯ ಫಲ ದೊರಕಿಸುವ ಮಹತ್ವದ ಉದ್ದೇಶಗಳೊಂದಿಗೆ 2000-01ನೇ ಸಾಲಿನಲ್ಲಿ 'ಸ್ತ್ರೀಶಕ್ತಿ ಯೋಜನೆ' ಅನುಷ್ಠಾನಗೊಳಿಸಲಾಗಿತ್ತು. ಪ್ರಸ್ತುತ ಕರ್ನಾಟಕದಲ್ಲಿ 1.65 ಲಕ್ಷ ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳಿವೆ. ಸರ್ಕಾರದ ಸಹಾಯ ಧನ ಹಾಗೂ ರಾಷ್ಟ್ರೀಕೃತ ಬ್ಯಾಂಕ್ ಸಾಲದ ಮೂಲಕ ನಡೆಸುತ್ತಿರುವ ವಹಿವಾಟು ₹4 ಸಾವಿರ ಕೋಟಿ ದಾಟಿದೆ. ಇದರ ಎರಡುಪಟ್ಟು ಹಣವನ್ನು ಸ್ತ್ರೀಶಕ್ತಿ ಗುಂಪುಗಳು ಮೈಕ್ರೊ ಫೈನಾನ್ಸ್‌ಗಳ ಮೂಲಕ ಪಡೆದು, ವಹಿವಾಟು ನಡೆಸುತ್ತಿವೆ.

ಸಣ್ಣಮೊತ್ತದಿಂದ ದೊಡ್ಡ ಮೊತ್ತದವರೆಗೆ: ಮೈಕ್ರೊ ಫೈನಾನ್ಸ್ ಕಂಪನಿಗಳು ಸ್ತ್ರೀಶಕ್ತಿ ಗುಂಪುಗಳಿಗೆ ಮೊದಲು ಸಣ್ಣ ಪ್ರಮಾಣದ ಸಾಲ ನೀಡುತ್ತವೆ. ತೀರುವಳಿ ಬಳಿಕ ಮೊದಲು ನೀಡಿದ್ದ ಪ್ರಮಾಣದ ಮೇಲೆ ಶೇಕಡವಾರು ಹೆಚ್ಚಿಸಿ, ಸಾಲ ನೀಡುತ್ತಾ ಹೋಗುತ್ತವೆ. ಮುಂದೆ ದೊಡ್ಡ ಮೊತ್ತದ ಸಾಲ ಪಡೆಯಲು ಮರುಪಾವತಿಯಲ್ಲಿ ವಿಳಂಬವಾಗದಂತೆ ಗುಂಪುಗಳ ಎಲ್ಲ ಸದಸ್ಯರು ಗಮನ ಹರಿಸುತ್ತಾರೆ.

'2018ರಲ್ಲಿ ಮೊದಲಿಗೆ 15 ಮಹಿಳೆಯರಿದ್ದ ನಮ್ಮ ಗುಂಪಿಗೆ ಮೈಕ್ರೊ ಫೈನಾನ್ಸ್ ಸಂಸ್ಥೆಯೊಂದು ₹30 ಸಾವಿರ ಸಾಲ ನೀಡಿತ್ತು. ತಲಾ ₹1,500 ಹಂಚಿಕೊಂಡಿದ್ದೆವು. ಈಗ ಆ ಮೊತ್ತ ₹3 ಲಕ್ಷ ತಲುಪಿದೆ. ತಲಾ ₹20 ಸಾವಿರ ಸಾಲ ಪಡೆಯಬಹುದು. ಬೇರೆ ಸದಸ್ಯರಿಗೆ ಸಾಲದ ಅಗತ್ಯವಿಲ್ಲದಿದ್ದರೆ, ಒಬ್ಬರಿಗೆ ಅಧಿಕ ಮೊತ್ತದ ಆವಶ್ಯವಿದ್ದಾಗ ಉಳಿದವರು ಸಹಕರಿಸುತ್ತಾರೆ. ಕೆಲವೊಮ್ಮೆ ನಿಧನ ಇತರೆ ಕಾರಣಗಳಿಂದ ಕಂತು ಪಾವತಿ ಸ್ಥಗಿತವಾಗುತ್ತವೆ. ಆಗ ಉಳಿದವರು ಸಮನಾಗಿ ಹಂಚಿಕೊಂಡು ತೀರಿಸುತ್ತೇವೆ' ಎನ್ನುತ್ತಾರೆ ಭಿನ್ನಮಂಗಲದ ಶುಭ.

ಸ್ತ್ರೀಶಕ್ತಿಗೂ ತಟ್ಟಿದ ಒತ್ತಡದ ಬಿಸಿ: ಹಲವು ಜಿಲ್ಲೆಗಳಲ್ಲಿ ಮೊದಲು ಕಡಿಮೆ ಬಡ್ಡಿ ದರಕ್ಕೆ ಸಾಲ ನೀಡುತ್ತಿದ್ದ ಮೈಕ್ರೊ ಫೈನಾನ್ಸ್ ಕಂಪನಿಗಳು ಕಾಯಂ ಗ್ರಾಹಕರಾಗುತ್ತಿದ್ದಂತೆ ನಿಧಾನವಾಗಿ ಬಡ್ಡಿ ದರ ಏರಿಸುತ್ತಾ ಹೋಗುತ್ತವೆ. ಒಂದು ಗುಂಪಿನಲ್ಲಿ ಸಾಲ ಮರುಪಾತಿಸದ ಸದಸ್ಯರ ಸಂಖ್ಯೆ ಹೆಚ್ಚಾದಂತೆ ಉಳಿದ ಸದಸ್ಯರ ಮೇಲೆ ಒತ್ತಡ ಹೆಚ್ಚಾಗುತ್ತದೆ. ಫೈನಾನ್ಸ್ ಪ್ರಮುಖರ ಒತ್ತಡವೂ ಆರಂಭವಾಗುತ್ತದೆ.

'ಕೆಲ ಮೈಕ್ರೊ ಫೈನಾನ್ಸ್ ಕಂಪನಿಗಳು ಸಿಬ್ಬಂದಿ ಮೂಲಕ ಸಾಲನೀಡುವ ಆಸೆ ತೋರಿಸುತ್ತವೆ. ಕಡಿಮೆ ಬಡ್ಡಿಗೆ ಸಾಲ ಆಮಿಷದೊಂದಿಗೆ ಗ್ರಾಮೀಣ ಮಹಿಳೆಯರನ್ನು ಸಾಲದ ಸುಳಿಗೆ ಸಿಲುಕಿಸುತ್ತಾರೆ' ಎಂದು ಜಗಳೂರು ತಾಲ್ಲೂಕಿನ ಮಹಿಳೆಯೊಬ್ಬರು ಹೇಳಿದರು.

ಬೆಳಗಾವಿ ತಾಲ್ಲೂಕಿನ ಹಾಲಭಾವಿ ಗ್ರಾಮದಲ್ಲಿ ಮೈಕ್ರೊ ಫೈನಾನ್ಸ್ ಸಂಸ್ಥೆಯೊಂದು ₹100 ಕೋಟಿಗೂ ಹೆಚ್ಚು ಹಣ ವಂಚಿಸಿದ ಪ್ರಕರಣ ನಡೆದಿದೆ. ಇದರಲ್ಲಿ ವಿವಿಧ ಗ್ರಾಮಗಳ 15 ಸಾವಿರಕ್ಕೂ ಹೆಚ್ಚು ಮಹಿಳೆಯರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಮೈಕ್ರೊ ಫೈನಾನ್ಸ್ ಕಂಪನಿಯ ಒಬ್ಬ ಪ್ರತಿನಿಧಿ ಸಾಲ ಪಡೆದ ಮಹಿಳೆಯರಿಂದ ಅರ್ಧದಷ್ಟು ಹಣಪಡೆದು ವಂಚಿಸಿದ್ದಾನೆ.

ಸಾಲದ ಮೇಲೆ ಶೇ 50ರಷ್ಟು ಸಬ್ಸಿಡಿ ಕೊಡಿಸುತ್ತೇವೆ ಎಂದು ನಂಬಿಸಿ ಬೆಳಗಾವಿ ತಾಲ್ಲೂಕಿನ ಯಮನಾಪುರ ಗ್ರಾಮದಲ್ಲಿ 7,000ಕ್ಕೂ ಹೆಚ್ಚು ಮಹಿಳೆಯರಿಗೆ ಸಾಲ ಕೊಡಿಸಿದ್ದಾರೆ. ಮಂಜೂರಾಗಿದ್ದ ಸಾಲದಲ್ಲಿ ಅರ್ಧದಷ್ಟು ಸ್ವತಃ ಬಳಸಿಕೊಂಡಿದ್ದಾರೆ. ಈಗ ಸಾಲದ ಪೂರ್ಣ ಅಸಲು ತುಂಬುವಂತೆ ಫೈನಾನ್ಸ್‌ನವರು ಮಹಿಳೆಯರಿಗೆ ಕಿರುಕುಳ ನೀಡುತ್ತಿದ್ದಾರೆ.

ಫೈನಾನ್ಸ್ ಅವಲಂಬನೆ ತಪ್ಪಿಸಿದ 'ಸಂಜೀವಿನಿ'

ಹಲವು ಜಿಲ್ಲೆಗಳಲ್ಲಿ ಮಹಿಳಾ ಸ್ವ ಸಹಾಯ ಸಂಘಗಳು ಯಶಸ್ವಿಯಾಗಿ ಸ್ತ್ರೀ ಸ್ವಾವಲಂಬನೆಗೆ ಬೆನ್ನೆಲುಬಾಗಿವೆ. ಜಿಲ್ಲಾ ಪಂಚಾಯಿತಿಯ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನದ (ಎನ್‌ಆರ್‌ಎಲ್‌ಎಂ) ಸಂಜೀವಿನಿ ಮಹಿಳಾ ಒಕ್ಕೂಟಗಳು ಮಹಿಳೆಯರಿಗೆ ಸ್ವದ್ಯೋಗಕ್ಕಾಗಿ ಸಾಲ ನೀಡುತ್ತಾ, ಅವರು ಮೈಕ್ರೊ ಫೈನಾನ್ಸ್ ಸಾಲದ ಸುಳಿಗೆ ಸಿಲುಕಿಕೊಳ್ಳದಂತೆ ಮಾಡಿವೆ.

ಉದಾಹರಣೆಗೆ ಉಡುಪಿ ಜಿಲ್ಲೆಯಲ್ಲಿ 8,454 ಸಂಜೀವಿನಿ ಸ್ವಸಹಾಯ ಸಂಘಗಳಿದ್ದು, ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿವೆ. ಕೆಲ ಜಿಲ್ಲೆಗಳಲ್ಲಿ ಘನತ್ಯಾಜ್ಯ ವಿಲೇವಾರಿ ಘಟಕಗಳ ನಿರ್ವಹಣೆ, ವಾಹನ ಚಾಲನೆ, ಆಹಾರ ಪದಾರ್ಥಗಳ ತಯಾರಿಕೆ, ಗುಡಿ ಕೈಗಾರಿಕೆ, ಅಂಗಡಿ, ಹೋಟೆಲ್, ಕ್ಯಾಂಟೀನ್‌ಗಳ ನಿರ್ವಹಣೆ ಮೊದಲಾದ ಸ್ವಯಂ ಉದ್ಯೋಗ ವಹಿವಾಟು ನಡೆಸುತ್ತಿವೆ.

ದಾವಣಗೆರೆ ಜಿಲ್ಲೆ ಕಾಡಜ್ಜಿಯ 'ಕಾವೇರಿ ಸ್ವ-ಸಹಾಯ ಸಂಘ' ಸೇರಿ ಹಲವು ಸಂಘಗಳು ಯಶಸ್ವಿಯಾಗಿವೆ. ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ ಯೋಜನೆಯಡಿ ನಗರದಲ್ಲಿ 'ಅಕ್ಕ ಕೆಫೆ' ಆರಂಭಿಸಿದೆ.

ಅಂಕಿ ಅಂಶಗಳು

1.65 ಲಕ್ಷ – ಪ್ರಸ್ತುತ ಇರುವ ಸ್ತ್ರೀಶಕ್ತಿ ಗುಂಪು	25.85 ಲಕ್ಷ – ಒಟ್ಟು ಮಹಿಳಾ ಸದಸ್ಯರು
1.47 ಲಕ್ಷ – ಬ್ಯಾಂಕ್ ಮೂಲಕ ವಹಿವಾಟು ನಡೆಸುವ ಗುಂಪು	₹3,490.80 ಕೋಟಿ – ಸ್ತ್ರೀಶಕ್ತಿ ಗುಂಪುಗಳು ಪಡೆದ ಸಾಲ
89,303 – ಆದಾಯ ಚಟುವಟಿಕೆಯಲ್ಲಿ ತೊಡಗಿಸಿಕೊಂಡ ಗುಂಪು	₹4,017.78 ಕೋಟಿ – ಗುಂಪುಗಳ ಒಟ್ಟು ವಹಿವಾಟು

ಮರು ಪಾವತಿಯ 'ಗ್ಯಾರಂಟಿ'

ರೈತರು, ಸಣ್ಣ ವ್ಯಾಪಾರಿಗಳು, ಪುರುಷರಿಗಿಂತ ಸಾಲ ನೀಡಲು ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳನ್ನೇ ಆಯ್ಕೆ ಮಾಡಿಕೊಳ್ಳಲು ಪ್ರಮುಖ ಕಾರಣ ಸಾಲ ಮರುಪಾವತಿ ಗ್ಯಾರಂಟಿ. ನೀಡಿದ ಸಾಲದ ಮೊತ್ತಕ್ಕೆ ಗುಂಪಿನ ಎಲ್ಲ ಮಹಿಳೆಯರನ್ನೂ ಹೊಣೆ ಮಾಡಲಾಗುತ್ತದೆ. ಸಾಲಪಡೆದವರು ಪ್ರತಿ ವಾರ ನಿಗದಿತ ದಿನ ಗುಂಪಿನ ಮುಖ್ಯಸ್ಥರಿಗೆ ಹಣ ತಲುಪಿಸಬೇಕು. ಒಬ್ಬಿಬ್ಬರು ಕಟ್ಟದಿದ್ದರೆ, ವಿಳಂಬಿಸಿದರೆ ಉಳಿದವರು ಒತ್ತಡ ಹೇರುತ್ತಾರೆ. ಇಲ್ಲವೇ, ಎಲ್ಲರೂ ಸೇರಿ ಸಾಲ ಮರುಪಾವತಿಸದವರ ಕಂತು ಭರಿಸುತ್ತಾರೆ. ಹೀಗೆ ಸಾಲದ ಮೊತ್ತ ಹಿಂದಿರುಗುವ ಗ್ಯಾರಂಟಿ ಇರುವ ಕಾರಣಕ್ಕೇ ಸ್ತ್ರೀಶಕ್ತಿ ಗುಂಪಗಳಿಗೆ ಮೈಕ್ರೊ ಫೈನಾನ್ಸ್‌ಗಳು ಮುಗಿಬಿದ್ದು ಸಾಲ ನೀಡುತ್ತಿವೆ.

ರಾಜಕಾರಣಿಗಳಿಗೆ 'ಮತದ ಫಸಲು'

ಸಮಾಜ ಸೇವೆ, ಗ್ರಾಮಾಭಿವೃದ್ಧಿ, ಮಹಿಳಾ ಸಬಲೀಕರಣ, ಸ್ವಯಂ ಉದ್ಯೋಗ, ತರಬೇತಿ ಹೆಸರಿನಲ್ಲಿ ಹಲವು ರಾಜಕಾರಣಿಗಳು ಮೈಕ್ರೊ ಫೈನಾನ್ಸ್, ಸಹಕಾರ ಸಂಘಗಳ ಮೂಲಕ ಸ್ತ್ರೀಶಕ್ತಿ ಗುಂಪುಗಳಿಗೆ ಸಾಲ ನೀಡಿವೆ.

ಕಿತ್ತೂರು ಕರ್ನಾಟಕ, ಕಲ್ಯಾಣ ಕರ್ನಾಟಕ, ಮಧ್ಯ ಕರ್ನಾಟಕ, ಮಲೆನಾಡು ಭಾಗದಲ್ಲಿ ರಾಜಕಾರಣಿಗಳ ಒಡೆತನದ ಮೈಕ್ರೊ ಫೈನಾನ್ಸ್‌ಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಸೇವೆಯ ನೆಪದಲ್ಲಿ ಚುನಾವಣೆ ವೇಳೆ ಇಂತಹ ಗುಂಪುಗಳ ಮೂಲಕವೇ ಮತಕ್ಕಾಗಿ ಹಣ ನೀಡಲಾಗುತ್ತದೆ ಎಂಬ ಆರೋಪಗಳು ಇವೆ.

ಸುದ್ದಿ 2 ನಿಮಿಷ

ಜಯಲಲಿತಾ ಉತ್ತರಾಧಿಕಾರಿಯಿಂದ ಸುಪ್ರೀಂಕೋರ್ಟ್‌ಗೆ ಮೊರೆ

ನವದೆಹಲಿ: ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ದಿವಂಗತ ಜೆ.ಜಯಲಲಿತಾ ವಿರುದ್ಧದ ಅಕ್ರಮ ಆಸ್ತಿ ಗಳಿಕೆಗೆ ಸಂಬಂಧಿಸಿದ ಪ್ರಕರಣದಲ್ಲಿ ವಶಕ್ಕೆ ಪಡೆಯಲಾಗಿದ್ದ ಬಹುಕೋಟಿ ಮೌಲ್ಯದ ಚರ ಮತ್ತು ಸ್ಥಿರ ಆಸ್ತಿಗಳನ್ನು ಹಿಂದಿರುಗಿಸುವಂತೆ ಮಾಡಿದ್ದ ಮನವಿಯನ್ನು ತಿರಸ್ಕರಿಸಿದ್ದ ಕರ್ನಾಟಕ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ, ಜಯಲಲಿತಾ ಅವರ ಉತ್ತರಾಧಿಕಾರಿಗಳಲ್ಲಿ ಒಬ್ಬರು ಸುಪ್ರೀಂ ಕೋರ್ಟ್ ಮೊರೆಹೋಗಿದ್ದಾರೆ.



ಕರ್ನಾಟಕ ಹೈಕೋರ್ಟ್ 2025ರ ಜನವರಿ 13ರಂದು ಹೊರಡಿಸಿದ್ದ ಆದೇಶವನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಲಾಗಿದೆ. ಅರ್ಜಿದಾರರಾದ ಜೆ. ದೀಪಾ ಅವರ ಪರವಾಗಿ ವಕೀಲ ಎಂ. ಸತ್ಯಕುಮಾರ್ ಅವರು ಮೇಲ್ಮನವಿ ಅರ್ಜಿ ಸಲ್ಲಿಸಿದ್ದಾರೆ.

ಹೈಕೋರ್ಟ್ 2015ರ ಮೇ 11ರಂದು ಜಯಲಲಿತಾ ಅವರನ್ನು ಖುಲಾಸೆಗೊಳಿಸುವ ತೀರ್ಪು ನೀಡಿತ್ತು. ಇದನ್ನು ಪ್ರಶ್ನಿಸಿ ಸರ್ಕಾರ ಸುಪ್ರೀಂ ಕೋರ್ಟ್ ಮೊರೆಹೋಗಿತ್ತು. ಅದರ ತೀರ್ಪು (2017ರ ಫೆಬ್ರುವರಿ 14) ಬರುವುದಕ್ಕೂ ಮುನ್ನ, ಅಂದರೆ 2016ರ ಡಿಸೆಂಬರ್ 5ರಂದು ಜಯಲಲಿತಾ ಅವರು ನಿಧನರಾದರು ಎಂದು ಅರ್ಜಿದಾರರು ತಿಳಿಸಿದ್ದಾರೆ.

ವಿಶೇಷ ನ್ಯಾಯಾಲಯ 2025ರ ಜನವರಿ 29ರಂದು ನೀಡಿದ್ದ ಆದೇಶವನ್ನೂ ಅರ್ಜಿದಾರರು ಪ್ರಶ್ನಿಸಿದ್ದಾರೆ.

ಹಠಾತ್ ಸಾವು; ಅಧ್ಯಯನಕ್ಕೆ ಸಮಿತಿ

ಬೆಂಗಳೂರು: ಕೋವಿಡ್ ನಂತರ ಹಠಾತ್ ಸಾವು ಪ್ರಕರಣಗಳು ಹೆಚ್ಚುತ್ತಿರುವುದು ಹಾಗೂ ಇಂತಹ ಸಾವುಗಳನ್ನು ತಡೆಯಲು ಅಗತ್ಯ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವ ಕುರಿತು ಅಧ್ಯಯನ ನಡೆಸಲು ಸಮಿತಿ ರಚಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದ್ದಾರೆ.

'ಕೋವಿಡ್ ನಂತರ ರಾಜ್ಯದಲ್ಲಿ ಹಲವರು ಹೃದಯಾಘಾತ, ಹೃದಯಸ್ತಂಭನ, ಮಿದುಳು ಹಾಗೂ ನರ ಸಂಬಂಧಿ ಕಾರಣಗಳಿಂದ ಹಠಾತ್ ನಿಧನರಾಗುತ್ತಿದ್ದಾರೆ. ಇದರಿಂದ ಅವಲಂಬಿತ ಕುಟುಂಬಗಳು ಆರ್ಥಿಕ–ಸಾಮಾಜಿಕ ಸಮಸ್ಯೆಗಳಿಗೆ ಒಳಗಾಗುತ್ತಿದ್ದಾರೆ. ಇಂತಹ ಸಾವುಗಳು ಕೋವಿಡ್ ಲಸಿಕೆ ಅಡ್ಡ ಪರಿಣಾಮ ಕಾರಣ ಎಂದು ಸಾರ್ವಜನಿಕ ವಲಯದಲ್ಲಿ ಚರ್ಚೆಯಾಗುತ್ತಿದೆ. ಹಾಗಾಗಿ, ಕುರಿತು ಅಧ್ಯಯನ ನಡೆಸಬೇಕು' ಎಂದು ಪತ್ರಕರ್ತ ರಾಜಾರಾಂ ತಲ್ಲೂರು ಅವರು ಪತ್ರ ಬರೆದಿದ್ದರು.

ಪತ್ರದ ಕೋರಿಕೆಯಂತೆ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಸೂಚಿಸಿರುವ ಸಿದ್ದರಾಮಯ್ಯ ಅವರು ಆರೋಗ್ಯ ತಜ್ಞರು, ವೈದ್ಯರು, ವಿಜ್ಞಾನಿಗಳಿರುವ ಸಮಿತಿ ರಚಿಸಬೇಕು. ವರದಿ ಪಡೆದು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದಿದ್ದಾರೆ.

ಸುಗ್ರೀವಾಜ್ಞೆಗೆ ಅಂಕಿತ ಇಲ್ಲ

ಒಂದನೇ ಪುಟದಿಂದ...

ಮೈಕ್ರೊ ಫೈನಾನ್ಸ್ ಕಂಪನಿಗಳು ನೀಡಿದ ಕಾನೂನುಬದ್ಧ ಸಾಲ ಮತ್ತು ಅದರ ಮೇಲಿನ ಬಡ್ಡಿ ವಸೂಲಿ ಮಾಡುವಲ್ಲಿ ಜಪ್ತಿ, ಅವಹೇಳನ, ಬೆದರಿಕೆ, ಹರಾಜು ಮೊದಲಾದ ಕಾನೂನುಬಾಹಿರ ಚಟುವಟಿಕೆಗಳನ್ನು ನಿಯಂತ್ರಿಸುವ ಅಂಶಗಳನ್ನು ಸುಗ್ರೀವಾಜ್ಞೆ ಹೊಂದಿದೆ. ಜತೆಗೆ ನೋಂದಣಿ ಮತ್ತು ಪರವಾನಗಿ ಇಲ್ಲದವರು ನೀಡಿರುವ ಸಾಲ ರದ್ದಾಗುತ್ತದೆ ಎಂದೂ ಹೇಳಿದೆ.

ಈ ಅಂಶಗಳಿಗೆ ರಾಜ್ಯಪಾಲ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಸುಗ್ರೀವಾಜ್ಞೆಯಿಂದ ಜನರಿಗೆ ಹೇಗೆ ಅನುಕೂಲವಾಗುತ್ತದೆ ಎಂಬುದನ್ನು ವಿವರಿಸುವ ದತ್ತಾಂಶ ಮತ್ತು ಮಾಹಿತಿಗಳನ್ನು ಸುಗ್ರೀವಾಜ್ಞೆ ಹೊಂದಿಲ್ಲ. ಇದು ಗಂಭೀರ ವಿಚಾರವಾಗಿರುವ ಕಾರಣ, ಮುಂಬರುವ ಬಜೆಟ್ ಅಧಿವೇಶನದಲ್ಲಿ ಕೂಲಂಕಷವಾಗಿ ಚರ್ಚಿಸಿ ಕಾನೂನು ರೂಪಿಸಿ ಎಂದು ಸರ್ಕಾರಕ್ಕೆ ಸೂಚಿಸಿದ್ದಾರೆ.

ಇದಕ್ಕೆ ಪ್ರತಿಕ್ರಿಯೆ ನೀಡಿರುವ ಕಾನೂನು ಸಚಿವ, 'ಸಂತ್ರಸ್ತ ಜನರಿಗೆ ತಕ್ಷಣ ದಿಂದಲೇ ಕಾನೂನಿನ ರಕ್ಷಣೆ ದೊರೆಯಲಿ ಎಂದು ಸುಗ್ರೀವಾಜ್ಞೆ ಸಿದ್ಧಪಡಿಸಲಾಗಿದೆ. ಅದು ಸಹ ಮುಂದೆ ಸದನದಲ್ಲಿ ಚರ್ಚೆಗೆ ಬಂದು, ನಂತರ ಕಾಯ್ದೆಯಾಗಲಿದೆ. ಇದೆಲ್ಲವನ್ನೂ ಗಮನದಲ್ಲಿ ಇರಿಸಿಕೊಂಡೇ, ರಾಜ್ಯ ಸರ್ಕಾರವು ಸಂವಿಧಾನವು ಕೊಟ್ಟಿರುವ ಪರಮಾಧಿಕಾರದ ಅಡಿಯಲ್ಲಿ ಸುಗ್ರೀವಾಜ್ಞೆ ಸಿದ್ಧಪಡಿಸಿದೆ' ಎಂದು ಉತ್ತರಿಸಿದ್ದಾರೆ.

ಮೈಕ್ರೊ ಫೈನಾನ್ಸ್: ಸುಗ್ರೀವಾಜ್ಞೆ ವಾಪಸ್ ಪತ್ರದಲ್ಲಿ ರಾಜ್ಯಪಾಲ ಪ್ರತಿಪಾದನೆ

'ಇರುವ ಕಾನೂನಿನಡಿಯೇ ಕ್ರಮ ಜರುಗಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೈಕ್ರೊ ಫೈನಾನ್ಸ್ ಕಂಪನಿಗಳು ಸಾಲ ಮತ್ತು ಬಡ್ಡಿ ವಸೂಲಿಗೆ ಕಾನೂನುಬಾಹಿರ ಕ್ರಮ ಅನುಸರಿಸಿದರೆ, ಶಿಕ್ಷಿಸಲು ಈಗಾಗಲೇ ಕಾನೂನುಗಳಿವೆ. ಅವುಗಳನ್ನೇ ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತನ್ನಿ' ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ರಾಜ್ಯ ಸರ್ಕಾರಕ್ಕೆ ಸೂಚಿಸಿದ್ದಾರೆ.

'ಕರ್ನಾಟಕ ಮೈಕ್ರೊ ಫೈನಾನ್ಸ್ (ಬಲವಂತದ ಕ್ರಮ ತಡೆ) ಸುಗ್ರೀವಾಜ್ಞೆ–2025'ಕ್ಕೆ ಅಂಕಿತ ಹಾಕದೆ ವಾಪಸ್ ಕಳುಹಿಸಿ ಬರೆದ ಪತ್ರದಲ್ಲಿ ರಾಜ್ಯಪಾಲ ಈ ಅಂಶವನ್ನು ಉಲ್ಲೇಖಿಸಿದ್ದಾರೆ.

'ಕಾನೂನುಗಳು ಇಲ್ಲದೇ ಇದ್ದ ಸಂದರ್ಭದಲ್ಲಿ ಸುಗ್ರೀವಾಜ್ಞೆ ಅನಿವಾರ್ಯವಾಗುತ್ತದೆ. ಆದರೆ ಸಾಲ ನೀಡುವವರಿಂದಾಗುವ ಕಿರುಕುಳವನ್ನು ತಡೆಯಲು 'ಮನಿ ಲೆಂಡರ್ಸ್ ಕಾಯ್ದೆ–1961', 'ನೆಗೋಷಿಯೆಬಲ್ ಇನ್‌ಸ್ಟ್ರುಮೆಂಟ್ಸ್ ಕಾಯ್ದೆ–1881', 'ಕರ್ನಾಟಕ ಋಣ ಕಾಯ್ದೆ–1976', 'ಭಾರತೀಯ ದಂಡ ಸಂಹಿತೆ' ಹಾಗೂ 'ಕರ್ನಾಟಕ ಪೊಲೀಸ್ ಕಾಯ್ದೆ'ಗಳನ್ನು ಇಲ್ಲಿ ಬಳಸಲು ಅವಕಾಶವಿದೆ' ಎಂದಿದ್ದಾರೆ.

'ಲಭ್ಯ ಕಾನೂನುಗಳ ಅನುಷ್ಠಾನದಲ್ಲಿ ದಕ್ಷತೆ ಮತ್ತು ಪೊಲೀಸ್ ವ್ಯವಸ್ಥೆಯ ಬಳಕೆಯಲ್ಲಿ ಸಮಸ್ಯೆ ಇರುವುದರಿಂದಲೇ ಕಿರುಕುಳ ಉಂಟಾಗುತ್ತಿದೆ. ಅವುಗಳನ್ನೇ ಪರಿಣಾಮಕಾರಿಯಾಗಿ ಬಳಸಿ, ಸಮಸ್ಯೆಗಳನ್ನು ನಿಯಂತ್ರಿಸಬಹುದು' ಎಂದು ರಾಜ್ಯಪಾಲ ಸೂಚಿಸಿದ್ದಾರೆ.

'ಇಲ್ಲಿ ಎತ್ತಲಾಗಿರುವ ಅಂಶಗಳಿಗೆ ಸ್ಪಷ್ಟೀಕರಣಗಳನ್ನು ಒಳಗೊಂಡ ಕಡತವನ್ನು ಮರುಸಲ್ಲಿಸಿ' ಎಂದು ಸರ್ಕಾರಕ್ಕೆ ಸೂಚಿಸಿದ್ದಾರೆ.

ಇದಕ್ಕೆ ವಿವರಣಾತ್ಮಕ ಪ್ರತಿಕ್ರಿಯೆ ನೀಡಿರುವ ಕಾನೂನು ಸಚಿವ ಎಚ್‌.ಕೆ. ಪಾಟೀಲ, 'ಸಾಲ ನೀಡಿದವರ ಕಾನೂನು ಬಾಹಿರ ಕ್ರಮಗಳನ್ನು, ಆ ಕ್ರಮಗಳ ಸ್ವರೂಪದ ಕಾರಣಕ್ಕೆ ಶಿಕ್ಷಿಸಲು ಕಾನೂನುಗಳಿವೆ. ಆದರೆ ಸಾಲದ ಕಾರಣಕ್ಕೆ ಇಂತಹ ಕೃತ್ಯ ಎಸಗಿದಾಗ ಶಿಕ್ಷೆಗೆ ಒಳಪಡಿಸಲು ನಿರ್ದಿಷ್ಟ ಕಾನೂನು ಇಲ್ಲ. ಸಾಲಗಾರರ ಹಿತ ಕಾಪಾಡಲು ಪ್ರತ್ಯೇಕ ಕಾನೂನಿನ ಅವಶ್ಯಕತೆ ಇದೆ' ಎಂದು ಸ್ಪಷ್ಟಪಡಿಸಿದ್ದಾರೆ.

'ಮೈಕ್ರೊ ಫೈನಾನ್ಸ್‌ಗೆ ಸಂಬಂಧಿಸಿದಂತೆ ರಿಸರ್ವ್ ಬ್ಯಾಂಕ್‌ನ ಮಾರ್ಗಸೂಚಿಗಳು ನೋಂದಾಯಿತ ಮತ್ತು ಪರವಾನಗಿ ಹೊಂದಿದ ಕಂಪನಿಗಳಿಗಷ್ಟೇ ಅನ್ವಯವಾಗುತ್ತದೆ. ನೋಂದಣಿ ಮತ್ತು ಪರವಾನಗಿ ಇಲ್ಲದ ಕಂಪನಿಗಳಿಗೆ ಇದು ಅನ್ವಯವಾಗುವುದಿಲ್ಲ. ಅವುಗಳ ಕಾನೂನುಬಾಹಿರ ನಡೆಗಳಿಂದ ಜನರನ್ನು ರಕ್ಷಿಸಲು ಸುಗ್ರೀವಾಜ್ಞೆ ಅಗತ್ಯ' ಎಂದು ಪ್ರತಿಪಾದಿಸಿದ್ದಾರೆ.

ಆಕ್ಷೇಪ	ಸ್ಪಷ್ಟೀಕರಣ
ಸಾಲ ನೀಡುವ ಸಂಸ್ಥೆಗಳು ಸಾಲಗಾರರಿಂದ ಯಾವುದೇ ಭದ್ರತೆ ಪಡೆಯಬಾರದು. ಪಡೆದಿದ್ದರೆ ಹಿಂದಿರುಗಿಸಬೇಕು ಎಂದು ಈ ಸುಗ್ರೀವಾಜ್ಞೆ ಹೇಳುತ್ತದೆ. ಇದು, ಸರ್ಕಾರಿ ಬ್ಯಾಂಕುಗಳ ಸಾಲದ ನಿಯಮಗಳಿಗೆ ವಿರುದ್ಧವಾದುದು. ಸಾಲ ನೀಡಿಕೆ ವ್ಯವಹಾರಕ್ಕೆ ತೊಡಕಾಗುತ್ತದೆ	ಯಾವುದೇ ಭದ್ರತೆ ಪಡೆಯದೆಯೇ ಸಾಲ ನೀಡಬೇಕು ಎಂಬುದು ಮೈಕ್ರೊ ಫೈನಾನ್ಸ್ ವ್ಯವಸ್ಥೆಗೆ ಆರ್‌ಬಿಐ ನೀಡಿರುವ ಮಾರ್ಗಸೂಚಿ. ಅದನ್ನೇ ಸುಗ್ರೀವಾಜ್ಞೆಯಲ್ಲಿ ಸೂಚಿಸಲಾಗಿದೆ
ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಸಾಲ ದೊರಕದೇ ಇರುವವರಿಗೆ ಅನುಕೂಲಕ್ಕೆ ಮೈಕ್ರೊ ಫೈನಾನ್ಸ್ ವ್ಯವಸ್ಥೆ ರೂಪುಗೊಂಡಿದೆ. ಇಂತಹ ನಿರ್ಬಂಧಗಳಿಂದ ಬ್ಯಾಂಕಿಂಗ್ ಸಾಲ ವ್ಯವಸ್ಥೆ ವಂಚಿತ ಜನರ ಅಪೇಕ್ಷೆಗಳಿಗೆ ಅಡಚಣೆಯಾಗುತ್ತದೆ	ಮೈಕ್ರೊ ಫೈನಾನ್ಸ್ ಕಂಪನಿಗಳು ಸಾಲ ನೀಡುವುದು ಮತ್ತು ವಸೂಲಿ ಮಾಡುವುದನ್ನು ನಿರ್ಬಂಧಿಸುವ ಅಂಶಗಳು ಸುಗ್ರೀವಾಜ್ಞೆಯಲ್ಲಿ ಇಲ್ಲ. ಇರುವ ಕಾನೂನನ್ನು ಪಾಲಿಸಿ ಎಂದಷ್ಟೇ ಸೂಚಿಸುತ್ತದೆ
ನೋಂದಾಯಿತ ಮತ್ತು ಪರವಾನಗಿ ಹೊಂದಿದ ಬ್ಯಾಂಕೇತರ ಹಣಕಾಸು ಸಂಸ್ಥೆಗಳನ್ನು (ಎನ್‌ಬಿಎಫ್‌ಸಿ) ಸುಗ್ರೀವಾಜ್ಞೆಯಿಂದ ಹೊರಗಿಡಲಾಗಿದೆ. ಇವು ದೊಡ್ಡ ಪ್ರಮಾಣದಲ್ಲಿ ಸಾಲ ನೀಡುತ್ತಿದ್ದು, ಸುಗ್ರೀವಾಜ್ಞೆ ಅವುಗಳಿಗೆ ಅನ್ವಯಿಸುವುದಿಲ್ಲ	ಇಂತಹ ಎನ್‌ಬಿಎಫ್‌ಸಿಗಳು ಆರ್‌ಬಿಐನ ನಿಬಂಧನೆಗಳಿಗೆ ಒಳಪಟ್ಟಿವೆ. ಅವುಗಳನ್ನು ಸುಗ್ರೀವಾಜ್ಞೆಯಿಂದ ಹೊರಗಿಡುವುದು ಕಾನೂನಿನ ಅಗತ್ಯವಾಗಿದೆ
ನೋಂದಣಿ ಮತ್ತು ಪರವಾನಗಿ ಇಲ್ಲದ ಕಂಪನಿ/ವ್ಯಕ್ತಿ ನೀಡಿದ ಸಾಲದ ಪ್ರಕರಣಗಳನ್ನು ನ್ಯಾಯಾಲಯಗಳು ವಿಚಾರಣೆ ನಡೆಸಬಾರದು ಎಂದು ನಿರ್ಬಂಧ ಹೇರಲಾಗಿದೆ. ಸಾಲ ನೀಡಿದ ವ್ಯಕ್ತಿಯ ಹಕ್ಕುಗಳನ್ನು ರಕ್ಷಿಸಬೇಕಾದದ್ದೂ ಸರ್ಕಾರದ ಜವಾಬ್ದಾರಿ ಅಲ್ಲವೇ. ಸಾಲವನ್ನು ರದ್ದು ಮಾಡಿದರೆ ಅದು ಕಾನೂನು ಸಂಘರ್ಷಕ್ಕೆ ಕಾರಣವಾಗುತ್ತದೆ	ಕಾನೂನಾತ್ಮಕವಾಗಿ ನೀಡಿದ ಸಾಲ ಮತ್ತು ಬಡ್ಡಿಯ ವಸೂಲಿಗೆ ಮಾತ್ರವೇ ಅವಕಾಶವಿದೆ. ಕಾನೂನುಬಾಹಿರವಾಗಿ ನೀಡಿದ ಸಾಲ ಮತ್ತು ಬಡ್ಡಿ ವಸೂಲಿ ಪ್ರಕರಣಗಳನ್ನು ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಡಿಸಲು ಸಾಧ್ಯವೇ ಇಲ್ಲ
ಸಹಜ ನ್ಯಾಯ ತತ್ವದಂತೆ ಪ್ರತಿಯೊಬ್ಬ ವ್ಯಕ್ತಿಗೂ ಕಾನೂನು ಹೋರಾಟದ ಹಕ್ಕು ಇದೆ. ಸಾಲ ನೀಡಿದವರು ನ್ಯಾಯಾಲಯಕ್ಕೆ ಹೋಗುವುದನ್ನು ನಿರ್ಬಂಧಿಸುವುದು, ಸಂವಿಧಾನವು ಕೊಟ್ಟಿರುವ ಮೂಲಭೂತ ಹಕ್ಕುಗಳ ಉಲ್ಲಂಘನೆ	ನೋಂದಣಿ ಮತ್ತು ಪರವಾನಗಿ ಇಲ್ಲದೆ ಕಾನೂನುಬಾಹಿರವಾಗಿ ನೀಡಿದ ಸಾಲ ಹಾಗೂ ಅದರ ಮೇಲಿನ ವಿಪರೀತ ಬಡ್ಡಿಯ ವಸೂಲಿಯನ್ನು ಮೂಲಭೂತ ಹಕ್ಕು ಎಂದು ಪರಿಗಣಿಸುವುದು, ಕಾನೂನು ಬಾಹಿರ ಚಟುವಟಿಕೆಗೆ ಸಾಂವಿಧಾನಿಕ ರಕ್ಷಣೆ ಕೊಟ್ಟಂತೆ. ಹಾಗೆ ಮಾಡುವುದು ಸಂವಿಧಾನ ವಿರೋಧಿ ಕ್ರಮವಾಗುತ್ತದೆ

ಒಳ ಮೀಸಲಾತಿ: ವರದಿ ಸಲ್ಲಿಕೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿಗಳಲ್ಲಿ ಒಳ ಮೀಸಲಾತಿ ಪ್ರಮಾಣ ನಿಗದಿಪಡಿಸಲು ರಚನೆಯಾಗಿರುವ ನಿವೃತ್ತ ನ್ಯಾಯಮೂರ್ತಿ ಎಚ್‌.ಎನ್‌. ನಾಗಮೋಹನದಾಸ್ ನೇತೃತ್ವದ ಆಯೋಗವು ಸರ್ಕಾರಕ್ಕೆ ಮಧ್ಯಂತರ ವರದಿ ಸಲ್ಲಿಸಿ, ಅದನ್ನು ಜಾರಿಗೊಳಿಸಲು ಶಿಫಾರಸು ಮಾಡಬೇಕು ಎಂದು ಸಾಮಾಜಿಕ ನ್ಯಾಯಕ್ಕಾಗಿ ಪರಿಶಿಷ್ಟ ಜಾತಿಗಳ ಒಕ್ಕೂಟದ ರಾಜ್ಯ ಸಮಿತಿ ಒತ್ತಾಯಿಸಿದೆ.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಸಮಿತಿಯ ರಾಜ್ಯ ಪ್ರಧಾನ ಸಂಚಾಲಕ ಬಸವರಾಜ್ ಕೌತಾಳ್, 'ಆಯೋಗವು ಮಧ್ಯಂತರ ವರದಿ ಸಲ್ಲಿಸಿದರೆ, ವಿವಿಧ ಹುದ್ದೆಗಳ ನೇಮಕಾತಿ ಹಾಗೂ ಬಜೆಟ್‌ನಲ್ಲಿ ಅನುದಾನ ಹಂಚಿಕೆಗೆ ಅನುಕೂಲ ಆಗುತ್ತದೆ. ಪರಿಶಿಷ್ಟ ಜಾತಿಗಳ ಯಾವುದೇ ಸಮುದಾಯಕ್ಕೆ ಅನ್ಯಾಯವಾಗದಂತೆ ಒಳ ಮೀಸಲಾತಿ ವರ್ಗೀಕರಣ ಮಾಡಬೇಕು' ಎಂದು ಆಗ್ರಹಿಸಿದರು.

'ಕಡಿಮೆ ಹುದ್ದೆಗಳ ನೇಮಕಾತಿ ಸಂದರ್ಭದಲ್ಲಿ ಪರಿಶಿಷ್ಟ ಜಾತಿಯ ಯಾವ ಗುಂಪಿಗೆ ಮೊದಲ ಆದ್ಯತೆ ಸಿಗಬೇಕು ಎಂಬ ಶ್ರೇಣೀಕರಣ ನಿಗದಿಪಡಿಸಬೇಕು. ಬಡ್ತಿ ಮೀಸಲಾತಿ, ಗುತ್ತಿಗೆ ನೌಕರರ ನೇಮಕಾತಿ ಸಂದರ್ಭದಲ್ಲೂ ಒಳ ಮೀಸಲಾತಿ ಪರಿಗಣಿಸಬೇಕು. ಮತಕ್ಷೇತ್ರಗಳ ಮೀಸಲಾತಿಯಲ್ಲೂ ಒಳ ಮೀಸಲಾತಿ ಕಡ್ಡಾಯಗೊಳಿಸಬೇಕು. ಒಳ ಮೀಸಲಾತಿ ಜಾರಿಯಲ್ಲಿ ಕುಂದುಕೊರತೆಗಳು ಹಾಗೂ ಪ್ರಗತಿಯ ಮೇಲ್ವಿಚಾರಣೆಗೆ ರಾಜ್ಯ ಪರಿಶಿಷ್ಟ ಜಾತಿಗಳ ಆಯೋಗದಡಿ ಸ್ವತಂತ್ರ ಸಮಿತಿ ರಚಿಸಬೇಕು' ಎಂದು ಒತ್ತಾಯಿಸಿದರು.

'ಇಂದಿರಾ ಸಹಾನಿ ಪ್ರಕರಣದ ತೀರ್ಪಿನನ್ವಯ ಮೀಸಲಾತಿಗೆ ವಿಧಿಸಿರುವ ಶೇ 50ರ ಮಿತಿ ರದ್ದುಪಡಿಸಲು ಕ್ರಮ ಕೈಗೊಳ್ಳಬೇಕು. ಉದ್ಯೋಗಾಂಕಾಕ್ಷಿಗಳಿಗೆ ಸಮಸ್ಯೆ ಆಗದಂತೆ ನಿಗದಿತ ಗಡುವಿನೊಳಗೆ ಆಯೋಗ ವರದಿ ಸಲ್ಲಿಸಬೇಕು' ಎಂದು ಕೋರಿದರು.

ಸಮಿತಿಯ ಮುಖಂಡರಾದ ಶಿವಣ್ಣ ಕನಕಪುರ, ವಿನಯ್ ಶ್ರೀನಿವಾಸ್, ಚಂದ್ರು ತರಹುಣಿಸೆ, ವೇಣುಗೋಪಾಲ್ ಮೌರ್ಯ, ಮಂಜುನಾಥ್, ರಘು ಸುದ್ದಿಗೋಷ್ಠಿಯಲ್ಲಿದ್ದರು.

ಮುಡಾ: ಸಿಬಿಐ ತನಿಖೆ ಬೇಕಿಲ್ಲ

ಸಿದ್ದರಾಮಯ್ಯ ತಾತ್ಕಾಲಿಕವಾಗಿ ನಿರಾಳರಾಗಿರಬಹುದು. ಕಾನೂನು ಹೋರಾಟ ಮುಂದುವರಿಸುತ್ತೇವೆ. ಲೂಟಿಯಾಗಿರುವ ರಾಜ್ಯದ ಜನತೆಯ ದುಡ್ಡು ಮತ್ತೆ ಖಜಾನೆಗೆ ವಾಪಸ್ ಬರುತ್ತದೆ
ಆರ್. ಅಶೋಕ, ವಿಧಾನಸಭೆ ವಿರೋಧ ಪಕ್ಷದ ನಾಯಕ

ಲೋಕಾಯುಕ್ತ ತನಿಖೆಯ ಮೇಲೆ ಅನುಮಾನವಿದೆ. ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ, ಸುಪ್ರೀಂ ಕೋರ್ಟ್‌ಗೆ ವಾರದಲ್ಲೇ ಮೇಲ್ಮನವಿ ಸಲ್ಲಿಸಲಾಗುವುದು
ಸ್ನೇಹಮಯಿ ಕೃಷ್ಣ, ದೂರುದಾರ, ಸಾಮಾಜಿಕ ಹೋರಾಟಗಾರ

ನಮಗೆ ನಿರಾಳವಾಗಿದೆ. ತನಿಖಾ ಸಂಸ್ಥೆಗಳ ಮೇಲೆ ಅನುಮಾನ ವ್ಯಕ್ತಪಡಿಸಿದರೆ, ಸಿಬಿಐ, ಇ.ಡಿ ಮೇಲೆಯೂ ಅನುಮಾನ ವ್ಯಕ್ತಪಡಿಸಬೇಕಾಗುತ್ತದೆ. ಹಗರಣದಲ್ಲಿ ನಮ್ಮ ಕುಟುಂಬದ ತಪ್ಪಿಲ್ಲ
ಡಾ.ಯತೀಂದ್ರ ಸಿದ್ದರಾಮಯ್ಯ, ವಿಧಾನಪರಿಷತ್ ಸದಸ್ಯ

ಒಂದನೇ ಪುಟದಿಂದ...

ಲೋಕಾಯುಕ್ತ ಈಗಾಗಲೇ ತನಿಖೆ ನಡೆಸಿ ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಿದ ಬಳಿಕ ಪ್ರಕರಣವನ್ನು ಮುಂದುವರಿದ ತನಿಖೆ ಅಥವಾ ಮರು ತನಿಖೆ ನಡೆಸಬೇಕು ಎಂದು ಸಿಬಿಐಗೆ ಆದೇಶಿಸಬೇಕೆ?

ಇವುಗಳಿಗೆ ಉತ್ತರಿಸಿ ತೀರ್ಪು ನೀಡಿರುವ ನ್ಯಾಯಪೀಠ, 'ಲೋಕಾಯುಕ್ತ ತನಿಖೆಯಲ್ಲಿ ಲೋಪದೋಷ ಕಂಡುಬಂದಿಲ್ಲ. ಹೀಗಾಗಿ, ಮುಂದುವರಿದ ತನಿಖೆಗಾಗಿ ಅಥವಾ ಮರು ತನಿಖೆ ನಡೆಸುವಂತೆ ಸಿಬಿಐಗೆ ಆದೇಶಿಸಲಾಗದು' ಎಂದು ಹೇಳಿತು.

'ತನಿಖೆ ನಡೆಸುತ್ತಿರುವ ಲೋಕಾಯುಕ್ತ ಪೊಲೀಸರು ಎಡಿಜಿಪಿ ಹಾಗೂ ಲೋಕಾಯುಕ್ತರಿಗೆ ಉತ್ತರದಾಯಿತ್ವ ಹೊಂದಿದ್ದಾರೆ. ಸಿ.ಎಂ ಸೇರಿ ಉನ್ನತ ಹುದ್ದೆಯಲ್ಲಿರುವವರ ವಿರುದ್ಧ ನಿಷ್ಪಕ್ಷಪಾತ ತನಿಖೆ ನಡೆಸಿದ ಗರಿಮೆ ಲೋಕಾಯುಕ್ತ ಸಂಸ್ಥೆಗಿದೆ. ರಾಜಕೀಯ ಹಸ್ತಕ್ಷೇಪ ಮಾಡದಂತೆ ಕಾಯ್ದೆಯಲ್ಲೇ ರಕ್ಷಣೆ ನೀಡಲಾಗಿದೆ. ಈ ಸಂಸ್ಥೆ ತಪ್ಪೆಸಗಿದೆ ಎನ್ನಲು ಕಾರಣಗಳಿಲ್ಲ' ಎಂದು ತಿಳಿಸಿದೆ.

'ಎಫ್‌ಐಆರ್ ದಾಖಲಾಗುವ ಮುನ್ನವೇ ಸಿಬಿಐ ತನಿಖೆಗೆ ಅರ್ಜಿದಾರರು ಕೋರಿರುವ ಔಚಿತ್ಯ ಏನೆಂದು ಅರ್ಥವಾಗುತ್ತಿಲ್ಲ. ಕೋರ್ಟ್ ಆದೇಶದ ಮುಖೇನ ಲೋಕಾಯುಕ್ತದ ಮೇಲಿಟ್ಟಿರುವ ಸಾರ್ವಜನಿಕರ ವಿಶ್ವಾಸವನ್ನು ಕುಗ್ಗಿಸಲಾಗದು' ಎಂದು ನ್ಯಾಯಪೀಠ ಹೇಳಿದೆ.

'ರಾಜಕಾರಣಿಗಳು ಪ್ರಭಾವ ಬಳಸಿ ತಪ್ಪಿಸಿಕೊಳ್ಳಬಾರದು ಎಂಬ ಕಾರಣಕ್ಕೆ ಈ ಮೊದಲು ಹೈಕೋರ್ಟ್ ತನಿಖೆಗೆ ಆದೇಶಿಸಿತ್ತು. ಹೀಗಾಗಿ, ಸಿಬಿಐ ತನಿಖೆಗೆ ವಹಿಸಲು ಅರ್ಹ ಕಾರಣಗಳಿಲ್ಲ' ಎಂಬ ಅಭಿಪ್ರಾಯ ವ್ಯಕ್ತಪಡಿಸಿರುವ ನ್ಯಾಯಪೀಠ ಅರ್ಜಿ ವಜಾಗೊಳಿಸಿದೆ.

ಪ್ರಕರಣದ ಹೆಜ್ಜೆಗಳು

'ಸಿದ್ದರಾಮಯ್ಯ ಅವರ ಪತ್ನಿಗೆ ಮೈಸೂರಿನ ಕೆಸರೆ ಗ್ರಾಮದ ಸರ್ವೆ ನಂ. 464ರಲ್ಲಿ 3 ಎಕರೆ 16 ಗುಂಟೆ ಜಮೀನಿನ ಬದಲಿಗೆ ಅಂದಾಜು ₹56 ಕೋಟಿ ಮೌಲ್ಯದ 14 ನಿವೇಶನಗಳನ್ನು ಅಕ್ರಮವಾಗಿ ಹಂಚಿಕೆ ಮಾಡಲಾಗಿದೆ. ಈ ಪ್ರಕ್ರಿಯೆಯಲ್ಲಿ ಸಿದ್ದರಾಮಯ್ಯ ಅಧಿಕಾರ ದುರ್ಬಳಕೆ ಮಾಡಿಕೊಂಡಿದ್ದು, ಅಧಿಕಾರಿಗಳ ಮೇಲೆ ಪ್ರಭಾವ ಬೀರಿದ್ದಾರೆ. ಈ ಸಂಬಂಧ ತನಿಖೆ ಅಥವಾ ವಿಚಾರಣೆಗೆ ಅನುಮತಿ ನೀಡಬೇಕು' ಎಂದು ಕೋರಿ ಸ್ನೇಹಮಯಿ ಕೃಷ್ಣ ಸೇರಿದಂತೆ ಮೂವರು ಸಾಮಾಜಿಕ ಕಾರ್ಯಕರ್ತರು 2024ರ ಜೂನ್–ಜುಲೈಯಲ್ಲಿ ರಾಜ್ಯಪಾಲರಿಗೆ ದೂರು ನೀಡಿದ್ದರು.

ಅರ್ಜಿಗಳನ್ನು ಪರಿಶೀಲಿಸಿದ್ದ ರಾಜ್ಯಪಾಲರು, ತನಿಖೆಗೆ ಅನುಮತಿ ನೀಡಿ 2024ರ ಆಗಸ್ಟ್ 17ರಂದು ಆದೇಶಿಸಿದ್ದರು. ಇದನ್ನು ಪ್ರಶ್ನಿಸಿ ಸಿದ್ದರಾಮಯ್ಯ ಆಗಸ್ಟ್ 19ರಂದು ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿದ್ದರು. ಅದನ್ನು ತಿರಸ್ಕರಿಸಿದ್ದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ತನಿಖೆ ನಡೆಸುವಂತೆ ಸೆಪ್ಟೆಂಬರ್ 24ರಂದು ಆದೇಶಿಸಿತ್ತು. ಸೆ. 27ರಂದೇ ಎಫ್‌ಐಆರ್ ದಾಖಲಿಸಿದ್ದರು. ಅದೇ ದಿನ ಸ್ನೇಹಮಯಿ ಕೃಷ್ಣ 'ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಬೇಕು' ಎಂದು ಕೋರಿ ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿದ್ದರು.

ಸಿಎಂ ಪರ ವಕೀಲರ ವಾದ ಏನಿತ್ತು?

- ಮುಖ್ಯಮಂತ್ರಿ ಆಗಿರುವ ಕಾರಣಕ್ಕೆ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಬೇಕು ಎಂದರೆ ಹೇಗೆ? ಏನಾದರೂ ಕಾರಣ ತೋರಿಸಬೇಕಲ್ಲವೇ? ಆರೋಪಿ ಹೇಗೆ ತನಿಖಾ ಸಂಸ್ಥೆ ಆಯ್ದುಕೊಳ್ಳಲು ಸಾಧ್ಯವಿಲ್ಲವೋ ಹಾಗೆಯೇ ದೂರುದಾರರೂ ಇಂತಹುದೇ ಸಂಸ್ಥೆ ತನಿಖೆ ನಡೆಸಬೇಕು ಎಂದು ಕೇಳಲಾಗದು. ರಾಜ್ಯಪಾಲರು ತನಿಖೆಗೆ ಅನುಮತಿ ನೀಡಿರುವ ಆದೇಶವನ್ನು ಹೈಕೋರ್ಟ್ ಎತ್ತಿ ಹಿಡಿದಿರುವ ನಂತರ ಯಾವುದೇ ಅಕ್ರಮವಾಗಿರುವುದನ್ನು ಅರ್ಜಿದಾರರು ಸಾಬೀತುಪಡಿಸಿಲ್ಲ.
- ಸಿ.ಎಂ ಭಾಗಿ ಆಗಿರುವ ಪ್ರಕರಣವನ್ನು ಸಿಬಿಐಗೆ ನೀಡಬೇಕು ಎಂಬ ಯಾವುದೇ ತತ್ವವಿಲ್ಲ. ಪ್ರಕರಣ ರಾಜಕೀಯಗೊಂಡಿದೆ. ತಪ್ಪು ವ್ಯಾಖ್ಯಾನಕ್ಕೆ ನ್ಯಾಯಾಲಯ ಅಸ್ತು ಎನ್ನಬಾರದು.



ಕರ್ನಾಟಕ ರಾಜ್ಯ ಸರ್ಕಾರಿ ಎನ್‌ಪಿಎಸ್ ನೌಕರರ ಸಂಘದ ಸದಸ್ಯರು ಶುಕ್ರವಾರ ಬೆಂಗಳೂರಿನಲ್ಲಿ ನಡೆಸಿದ ಪ್ರತಿಭಟನೆಯಲ್ಲಿ, ಒಪಿಎಸ್ ಎಂದು ಕೇಶ ವಿನ್ಯಾಸ ಮಾಡಿಕೊಂಡಿದ್ದ ನೌಕರರೊಬ್ಬರು ಗಮನಸೆಳೆದರು
ಚಿತ್ರ: ಪ್ರಶಾಂತ್ ಎಚ್‌.ಜಿ.

ಒಪಿಎಸ್ ಜಾರಿಗೆ ಆಗ್ರಹ, ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಷ್ಟ್ರೀಯ ಪಿಂಚಣಿ ಯೋಜನೆ (ಎನ್‌ಪಿಎಸ್) ರದ್ದುಗೊಳಿಸಿ, ಹಳೆ ಪಿಂಚಣಿ ಯೋಜನೆ (ಒಪಿಎಸ್) ಜಾರಿಗೊಳಿಸಬೇಕು' ಎಂದು ಆಗ್ರಹಿಸಿ ಕರ್ನಾಟಕ ರಾಜ್ಯ ಸರ್ಕಾರಿ ಎನ್‌ಪಿಎಸ್ ನೌಕರರ ಸಂಘದಿಂದ ಶುಕ್ರವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಧರಣಿ ನಡೆಯಿತು.

ಎನ್‌ಪಿಎಸ್ ಅನ್ನೇ ಯುಪಿಎಸ್ ಹೆಸರಲ್ಲಿ ಜಾರಿ ಮಾಡುವುದನ್ನು ಕೈಬಿಡಬೇಕುಎಂದು ಒತ್ತಾಯಿಸಿದರು. 'ಇದು ಒಂದು ದಿನಕ್ಕೆ ಸೀಮಿತವಾದ ಧರಣಿ ಎಂದು ಸರ್ಕಾರ ಭಾವಿಸಬಾರದು. ಬೇಡಿಕೆ ಈಡೇರದಿದ್ದರೆ ಮತ್ತೆ ಹೋರಾಟ ಮುಂದುವರಿಸಲಾಗುವುದು' ಎಂದು ಪ್ರತಿಭಟನಕಾರರು ಎಚ್ಚರಿಸಿದರು.

'ವಿಧಾನಸಭಾ ಚುನಾವಣೆಯ ತನ್ನ ಪ್ರಣಾಳಿಕೆಯಲ್ಲಿ ಕಾಂಗ್ರೆಸ್ ಪಕ್ಷ ನೀಡಿದ್ದ ಭರವಸೆಯಂತೆ ಎನ್‌ಪಿಎಸ್ ರದ್ದುಗೊಳಿಸುವುದನ್ನು 2025–26ನೇ ಸಾಲಿನ ಬಜೆಟ್‌ನಲ್ಲಿ ಪ್ರಕಟಿಸಬೇಕು' ಎಂದು ಸಂಘದ ಅಧ್ಯಕ್ಷ ಶಾಂತರಾಮ ಆಗ್ರಹಿಸಿದರು.

'ಎನ್‌ಪಿಎಸ್ ಅನ್ನು ಏಕೀಕೃತ ಪಿಂಚಣಿ ಯೋಜನೆ (ಯುಪಿಎಸ್) ಎಂದು ಹೆಸರಿಟ್ಟು ಜಾರಿಮಾಡಲು ಸಿದ್ಧತೆ ನಡೆಸಿದೆ. ನಮಗೆ ಯುಪಿಎಸ್, ಎನ್‌ಪಿಎಸ್ ಬೇಡ. ಹಳೇ ಪಿಂಚಣಿ ಯೋಜನೆಯನ್ನೇ ಜಾರಿ ಮಾಡಬೇಕು' ಎಂದು ಒತ್ತಾಯಿಸಿದರು.

ಸಂಘದ ಪದಾಧಿಕಾರಿಗಳಾದ ಎಸ್‌.ಎಸ್‌. ಹದ್ಲಿ, ದೊಡ್ಡ ತಮ್ಮೇಗೌಡ, ರಂಗನಾಥ ಜಿ., ಉಮೇಶ ತೋಟದ, ದಯಾನಂದ ಎಲ್‌.ಎಂ., ರಜನಿಕಾಂತ ಎಸ್‌.ಟಿ., ಶಶಿಕಲಾ ಎನ್‌.ಕೆ., ವೃಷಭೇಂದ್ರ ಎಸ್‌. ಹಿರೇಮಠ, ಗಜೇಂದ್ರ ಎ.ಎನ್‌., ರಾಜು ಮಾಳವಾಡ ಸಹಿತ ಸಾವಿರಾರು ನೌಕರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಭಿನ್ನಮತ ಶಮನಕ್ಕೆ ಯತ್ನ; ಕೆಲವರ ವಿರುದ್ಧ ಕ್ರಮ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿಸ್ತು ಉಲ್ಲಂಘಿಸಿ, ಪಕ್ಷವನ್ನು ದುರ್ಬಲಗೊಳಿಸುತ್ತಿರುವ ಕೆಲವು ನಾಯಕರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಬಿಜೆಪಿ ವರಿಷ್ಠರು ತೀರ್ಮಾನಿಸಿದ್ದಾರೆ.

'ರಾಜ್ಯ ಬಿಜೆಪಿಯಲ್ಲಿ ಕೆಲವರು ವಿವೇಚನೆಯಿಂದ ವರ್ತಿಸುತ್ತಿಲ್ಲ. ಇವರಿಗೆ ಪಕ್ಷ ಮತ್ತು ಸಂಘಟನೆಗಿಂತ ಸ್ವಹಿತವೇ ಹೆಚ್ಚಾಗಿದೆ. ಹೀಗಾಗಿ ಬೇಕಾಬಿಟ್ಟಿ ನಡೆದುಕೊಳ್ಳುತ್ತಿದ್ದಾರೆ. ವರಿಷ್ಠರು ಮಾಹಿತಿ ಕಲೆ ಹಾಕಿದ್ದು, ಅವರ ವಿರುದ್ಧ ಕ್ರಮಜರುಗಿಸುವ ಸಾಧ್ಯತೆ ಇದೆ' ಎಂದು ಬಿಜೆಪಿ ಮೂಲಗಳು ತಿಳಿಸಿವೆ.



'ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಮತ್ತು ಸಂಸದೀಯ ಮಂಡಳಿ ಸದಸ್ಯ ಬಿ.ಎಸ್‌. ಯಡಿಯೂರಪ್ಪ ವಿರುದ್ಧ ಆರಂಭದಲ್ಲಿ ಒಬ್ಬಿಬ್ಬರು ಮಾತ್ರ ಹೇಳಿಕೆ ನೀಡುತ್ತಿದ್ದರು. ಅವರಲ್ಲಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಮುಂಚೂಣಿಯಲ್ಲಿದ್ದರು. ಆದರೆ, ದಿನ ಕಳೆದಂತೆ ಭಿನ್ನಮತ ಕಾಳ್ಗಿಚ್ಚಿನಂತೆ ಹಬ್ಬುತ್ತಿರುವುದು, ಇತರರು ಹೇಳಿಕೆ ನೀಡುವುದನ್ನು ವರಿಷ್ಠರು ಗಂಭೀರವಾಗಿ ಪರಿಗಣಿಸಿದ್ದಾರೆ. ಬಹಿರಂಗವಾಗಿ ಟೀಕೆ–ಟಿಪ್ಪಣಿಯಲ್ಲಿ ತೊಡಗಿರುವುದು, ಪದೇ ಪದೇ ಸಭೆಗಳನ್ನು ನಡೆಸುವುದು ಹಾಗೂ ದೆಹಲಿಗೆ ತಂಡ ಕಟ್ಟಿಕೊಂಡು ಬರುವುದು ವರಿಷ್ಠರನ್ನು ಕೆರಳಿಸಿದೆ. ಇದರ ಹಿಂದಿನ ಸೂತ್ರಧಾರರು ಯಾರು ಮತ್ತು ಅವರ ಉದ್ದೇಶ ಏನು ಎಂಬ ವಿಷಯವೂ ವರಿಷ್ಠರ ಗಮನಕ್ಕೆ ಬಂದಿದೆ. ಸೂಕ್ತ ಸಮಯದಲ್ಲಿ ಕ್ರಮ ಜರುಗಿಸುವುದು ನಿಶ್ಚಿತ' ಎಂದು ಮೂಲಗಳು ಹೇಳಿವೆ.

ಅಶೋಕ– ಬೊಮ್ಮಾಯಿ ಗುರಿ: ಬಿ.ವೈ.ವಿಜಯೇಂದ್ರ ಅವರು ಗುರುವಾರ ಸುದ್ದಿಗೋಷ್ಠಿಯಲ್ಲಿ 'ತಟಸ್ಥ' ಬಣದವರ ಮೇಲೆ ಆಕ್ರಮಣಕಾರಿಯಾಗಿ ವಾಗ್ದಾಳಿ ನಡೆಸಿದ್ದಾರೆ. ಮುಖ್ಯವಾಗಿ ತಟಸ್ಥ ಬಣದಲ್ಲಿ ಗುರುತಿಸಿಕೊಂಡಿರುವ ವಿರೋಧಪಕ್ಷದ ನಾಯಕ ಆರ್‌.ಅಶೋಕ ಮತ್ತು ಸಂಸದ ಬಸವರಾಜ ಬೊಮ್ಮಾಯಿ ಹೆಸರನ್ನು ಪ್ರಸ್ತಾಪಿಸದೇ ಪರೋಕ್ಷವಾಗಿ ಟೀಕಾ ಪ್ರಹಾರ ನಡೆಸಿರುವುದು ಚರ್ಚೆಗೆ ಕಾರಣವಾಗಿದೆ.

'ಭಿನ್ನರು ಯಡಿಯೂರಪ್ಪ ಅವರ ಮೇಲೆ ಕೆಟ್ಟದಾಗಿ ವಾಗ್ದಾಳಿ ನಡೆಸಿದಾಗ, ಮೌನ ವಹಿಸುವುದು ಅಪರಾಧ' ಎಂದು ಇವರಿಬ್ಬರನ್ನು ಉದ್ದೇಶಿಸಿ ವಿಜಯೇಂದ್ರ ಕುಟುಕಿದ್ದರು. ಈ ಮೂಲಕ ಅಧ್ಯಕ್ಷರಾದ ತಮ್ಮ ಮೇಲೆ ಭಿನ್ನರು ನಿರಂತರ ವಾಗ್ದಾಳಿ ನಡೆಸುವಾಗ ಅವರನ್ನು ತಡೆಯದೇ, ಇವರು (ಅಶೋಕ– ಬೊಮ್ಮಾಯಿ) 'ಆನಂದ' ಅನುಭವಿಸುತ್ತಿದ್ದರು' ಎಂದು ಪರೋಕ್ಷವಾಗಿ ಬೇಸರ ಹೊರಹಾಕಿದ್ದರು.

ವಿಜಯೇಂದ್ರ ಬದಲಾವಣೆ ಖಚಿತ: ರಾಜ್ಯ ಘಟಕದ ಅಧ್ಯಕ್ಷ ಸ್ಥಾನದಿಂದ ವಿಜಯೇಂದ್ರ ಅವರನ್ನು ಬದಲಿಸುವುದು ಖಚಿತ ಎಂದು ಯತ್ನಾಳ ಬಣದವರು ಬಲವಾಗಿ ನಂಬಿದ್ದಾರೆ.

'ರಾಜ್ಯದಲ್ಲಿ ವಿಜಯೇಂದ್ರ ವಿರುದ್ಧ ದೊಡ್ಡ ಮಟ್ಟದ ವಿರೋಧ ಇರುವುದರಿಂದ ವರಿಷ್ಠರು ಎಲ್ಲ ಸೂಕ್ಷ್ಮವನ್ನೂ ಅರಿತಿದ್ದಾರೆ. ಬಸನಗೌಡ ಪಾಟೀಲ ಯತ್ನಾಳ, ಅರವಿಂದ ಲಿಂಬಾವಳಿ ಅವರು ವರಿಷ್ಠರನ್ನು ಭೇಟಿ ಮಾಡಿ ವಿಜಯೇಂದ್ರ ಮತ್ತು ಯಡಿಯೂರಪ್ಪ ವಿರುದ್ಧ ಮಾಹಿತಿಗಳನ್ನು ಕೊಟ್ಟಿದ್ದಾರೆ. ಎಲ್ಲವೂ ಒಳ್ಳೆಯದಾಗುತ್ತದೆ ಎಂಬ ನಂಬಿಕೆ ಇದೆ ' ಎಂದು ಯತ್ನಾಳ ಬಣದ ಮುಖಂಡರೊಬ್ಬರು ತಿಳಿಸಿದರು.

ಪಕ್ಷದ ಶಿಸ್ತು ಮೀರಿ ಮಾತನಾಡಬೇಡಿ: ಸುಧಾಕರ ರೆಡ್ಡಿ

'ಕೆಲವು ನಾಯಕರು ನೀಡುತ್ತಿರುವ ಬಹಿರಂಗ ಹೇಳಿಕೆಗಳಿಂದ ಕಾರ್ಯಕರ್ತರಿಗೆ ನೋವಾಗುತ್ತದೆ. ಶಿಸ್ತು ಮೀರಿ ಹೇಳಿಕೆ ನೀಡಬೇಡಿ' ಎಂದು ರಾಜ್ಯ ಬಿಜೆಪಿ ಸಹ ಉಸ್ತುವಾರಿ ಸುಧಾಕರ ರೆಡ್ಡಿ ತಾಕೀತು ಮಾಡಿದ್ದಾರೆ.

ಬಿಜೆಪಿ ಕಚೇರಿಯಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಕೆಲವು ನಾಯಕರು ಹೇಳಿಕೆಗಳನ್ನು ಗಮನಿಸಿದ್ದೇನೆ. ಶಾಂತಿವಾಗಿರಿ. ಇದನ್ನು ಎರಡೂ ಬಣಗಳಿಗೆ ಕಾರ್ಯಕರ್ತನಾಗಿ ಕೋರುತ್ತೇನೆ' ಎಂದರು.

'ಸಮಸ್ಯೆಗಳನ್ನು ಮಾತುಕತೆ ಮೂಲಕ ಬಗೆಹರಿಸಲು ಕೇಂದ್ರ ನಾಯಕತ್ವ ಶಕ್ತಿ ಹೊಂದಿದೆ. ಪಕ್ಷದ ಹಿತದೃಷ್ಟಿಯಿಂದ ಪಕ್ಷದೊಳಗಿನ ವೇದಿಕೆಯಲ್ಲಿ ಮಾತನಾಡಲು ಅವಕಾಶವಿದೆ' ಎಂದು ಹೇಳಿದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸ್ಥಾನದ ಆಕಾಂಕ್ಷಿಯಲ್ಲ. ಆದರೆ, ಜವಾಬ್ದಾರಿ ವಹಿಸಿದರೆ ನಿರ್ವಹಿಸುವೆ. ಎಲ್ಲರನ್ನೂ ಒಟ್ಟಾಗಿ ಕರೆದೊಯ್ಯುವ ಸಾಮರ್ಥ್ಯವಿದೆ
ಮುರುಗೇಶ ನಿರಾಣಿ, ಮಾಜಿ ಸಚಿವ

ನಮ್ಮ ದೆಹಲಿ ಭೇಟಿ ಫಲಪ್ರದವಾಗಿದ್ದು, ಕೇಂದ್ರದ ನಾಯಕರು ಸ್ಪಂದಿಸಿದ್ದಾರೆ. ಯಾರನ್ನು ಭೇಟಿಯಾದೆವು ಎಂಬುದನ್ನು ಗೋಪ್ಯವಾಗಿಡಲು ತಿಳಿಸಿದ್ದಾರೆ
ಬಸನಗೌಡ ಪಾಟೀಲ ಯತ್ನಾಳ, ಶಾಸಕ

ಪಕ್ಷದ ವಿಚಾರದಲ್ಲಿ 15–20 ದಿನಗಳಲ್ಲಿ ಕೇಂದ್ರ ನಾಯಕರು ಅಂತಿಮ ತೀರ್ಮಾನ ಕೊಡಲಿದ್ದಾರೆ. ಆ ನಂತರ ಸಹಜ ಸ್ಥಿತಿಗೆ ಬರುತ್ತದೆ. ಪಕ್ಷದ ಉಸ್ತುವಾರಿಯೇ ನಮ್ಮ 'ಸುಪ್ರೀಂ'
ಆರ್‌.ಅಶೋಕ, ವಿರೋಧ ಪಕ್ಷದ ನಾಯಕ

ಎಎಪಿಯ 16 ಅಭ್ಯರ್ಥಿಗಳಿಗೆ ಬಿಜೆಪಿಯಿಂದ ಹಣದ ಆಮಿಷ – ಆರೋಪ

ಅರವಿಂದ ಕೇಜ್ರಿವಾಲ್‌ಗೆ ಎಸಿಬಿ ನೋಟಿಸ್



ಅರವಿಂದ ಕೇಜ್ರಿವಾಲ್

ನವದೆಹಲಿ (ಪಿಟಿಐ): 'ನಮ್ಮ ಅಭ್ಯರ್ಥಿಗಳನ್ನು ಬಿಜೆಪಿಯತ್ತ ಸೆಳೆಯಲು ಆ ಪಕ್ಷದ ಕೆಲವರು ಹಣದ ಆಮಿಷ ಒಡ್ಡಿದ್ದಾರೆ' ಎಂಬ ಆರೋಪದ ಕುರಿತು ಸಾಕ್ಷ್ಯ ಒದಗಿಸುವಂತೆ ದೆಹಲಿ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ), ಎಎಪಿ ರಾಷ್ಟ್ರೀಯ ಸಂಚಾಲಕ ಅರವಿಂದ ಕೇಜ್ರಿವಾಲ್ ಅವರಿಗೆ ಶುಕ್ರವಾರ ನೋಟಿಸ್ ಜಾರಿಗೊಳಿಸಿದೆ.

ದೆಹಲಿ ವಿಧಾನಸಭಾ ಚುನಾವಣೆಯ ಮತಎಣಿಕೆ ಶನಿವಾರ ನಿಗದಿಯಾಗಿದ್ದು, ಅದರ ಮುನ್ನಾದಿನ ನಡೆದಿರುವ ಈ ಬೆಳವಣಿಗೆ ಎಎಪಿ ಮತ್ತು ಬಿಜೆಪಿ ನಡುವಿನ ರಾಜಕೀಯ ತಿಕ್ಕಾಟವನ್ನು ಇನ್ನಷ್ಟು ತೀವ್ರಗೊಳಿಸಿದೆ. 'ಇದು ರಾಜಕೀಯಪ್ರೇರಿತ ನಡೆ' ಎಂದು ಎಎಪಿ ಆರೋಪಿಸಿದೆ.

ಕೇಜ್ರಿವಾಲ್ ಅವರು ಮಾಡಿರುವ ಆರೋಪವನ್ನು ಎಸಿಬಿಯು ನೋಟಿಸ್‌ನಲ್ಲಿ ಉಲ್ಲೇಖಿಸಿದೆ. ಆರೋಪ ಮಾಡಿ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದು ಹೌದೇ ಎಂಬುದನ್ನು ಖಚಿತಪಡಿಸುವಂತೆ ಮತ್ತು ಹಣದ ಆಮಿಷದ ಬಗ್ಗೆ ವಿವರವಾದ ಮಾಹಿತಿ ಒದಗಿಸುವಂತೆ ಕೇಳಿದೆ.

'ಫೋನ್ ಕರೆಗಳನ್ನು ಸ್ವೀಕರಿಸಿದ ನಿಮ್ಮ ಪಕ್ಷದ 16 ಅಭ್ಯರ್ಥಿಗಳ ಹೆಸರು, ಅವರನ್ನು ಸಂಪರ್ಕಿಸಿದವರ ದೂರವಾಣಿ ಸಂಖ್ಯೆಗಳು ಮತ್ತು ಈ ಆರೋಪಗಳನ್ನು ದೃಢೀಕರಿಸುವ ಇತರ ಪುರಾವೆಗಳನ್ನು ಒದಗಿಸುವಂತೆ ಸೂಚಿಸಿದೆ.

ನಿವಾಸದ ಬಳಿ ಗೊಂದಲ: ಇದಕ್ಕೂ ಮುನ್ನ ಎಸಿಬಿ ತಂಡವು ಫಿರೋಜ್‌ಶಾ ರಸ್ತೆಯಲ್ಲಿರುವ ಕೇಜ್ರಿವಾಲ್ ಅವರ ನಿವಾಸಕ್ಕೆ ತಲುಪಿದಾಗ ಅಲ್ಲಿ ನಾಟಕೀಯ ಬೆಳವಣಿಗೆಗಳು ನಡೆದವು. ಎಸಿಬಿಯು ಬಿಜೆಪಿ ನಾಯಕರ ಸೂಚನೆಯಂತೆ ತನಿಖೆಗೆ ಮುಂದಾಗಿದೆ ಎಂದು ಆರೋಪಿಸಿದ ಎಎಪಿ ಮುಖಂಡರು, ತನಿಖಾ ತಂಡದ ಅಧಿಕಾರಿಗಳು ಕೇಜ್ರಿವಾಲ್ ನಿವಾಸ ಪ್ರವೇಶಿಸುವುದನ್ನು ತಡೆದರು. ಈ ವೇಳೆ ಸ್ಥಳದಲ್ಲಿ ಗೊಂದಲದ ಪರಿಸ್ಥಿತಿ ನಿರ್ಮಾಣವಾಯಿತು.

'ತನಿಖೆಗೆ ಸಂಬಂಧಿಸಿದ ನೋಟಿಸ್ ಎಸಿಬಿ ಅಧಿಕಾರಿಗಳ ಬಳಿ ಇರಲಿಲ್ಲ. ಸುಮಾರು ಒಂದೂವರೆ ಗಂಟೆಯ ಬಳಿಕವಷ್ಟೇ ಅವರು ನೋಟಿಸ್ ಜಾರಿಗೊಳಿಸಿದರು. ಲೆಫ್ಟಿನೆಂಟ್ ಗವರ್ನರ್ ಕಚೇರಿಯು ಬಿಜೆಪಿ ಜತೆ ಶಾಮೀಲಾಗಿ ರೂಪಿಸಿರುವ ನಾಟಕ ಇದು' ಎಂದು ಎಎಪಿ ಕಾನೂನು ವಿಭಾಗದ ಮುಖ್ಯಸ್ಥ ಸಂಜೀವ್ ನಾಸಿಯಾರ್ ಹೇಳಿದ್ದಾರೆ.

ಲೆಫ್ಟಿನೆಂಟ್ ಗವರ್ನರ್ ಆದೇಶ: 'ಬಿಜೆಪಿಯು ಹಣದ ಆಮಿಷವೊಡ್ಡಿರುವುದಾಗಿ ತಪ್ಪು ಮಾಹಿತಿ ಹರಡಿದ ಎಎಪಿ ಮುಖಂಡರ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿ ಬಿಜೆಪಿ ದೆಹಲಿ ಘಟಕದ ಪ್ರಧಾನ ಕಾರ್ಯದರ್ಶಿ ವಿಷ್ಣು ಮಿತ್ತಲ್ ಅವರು ಲೆಫ್ಟಿನೆಂಟ್ ಗವರ್ನರ್ ವಿ.ಕೆ.ಸಕ್ಸೇನಾ ಅವರಿಗೆ ಶುಕ್ರವಾರ ಬೆಳಿಗ್ಗೆ ದೂರು ನೀಡಿದ್ದರು. ಈ ದೂರನ್ನು ಆಧರಿಸಿ ಸಕ್ಸೇನಾ ಅವರು ಎಸಿಬಿ ತನಿಖೆಗೆ ಆದೇಶಿಸಿದ್ದರು.

'ತಲಾ ₹15 ಕೋಟಿ ಆಮಿಷ'

ಬಿಜೆಪಿಯು ವಿಧಾನಸಭಾ ಚುನಾವಣೆಯ ಮತ ಎಣಿಕೆಗೂ ಮುನ್ನ ಎಎಪಿಯ 16 ಅಭ್ಯರ್ಥಿಗಳಿಗೆ ಹಣದ ಆಮಿಷ ಒಡ್ಡಿ ತನ್ನತ್ತ ಸೆಳೆಯಲು ಪ್ರಯತ್ನಿಸಿದೆ ಎಂದು ಕೇಜ್ರಿವಾಲ್ ಅವರು ಗುರುವಾರ ಆರೋಪಿಸಿದ್ದರು.

'ಬಿಜೆಪಿ ಸೇರಿದರೆ ತಲಾ ₹15 ಕೋಟಿ ಹಾಗೂ ಸಚಿವ ಸ್ಥಾನ ನೀಡುವ ಭರವಸೆಯನ್ನು ಎಎಪಿ ಅಭ್ಯರ್ಥಿಗಳಿಗೆ ನೀಡಲಾಗಿದೆ' ಎಂದು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದರು.

'ಅಪರಿಚಿತ ವ್ಯಕ್ತಿಗಳು ನಮ್ಮ 16 ಅಭ್ಯರ್ಥಿಗಳಿಗೆ ಕರೆ ಮಾಡಿ ಆಮಿಷ ಒಡ್ಡಿದ್ದಾರೆ. ಅದರಲ್ಲಿ ಒಂದು ದೂರವಾಣಿ ಸಂಭಾಷಣೆಯನ್ನು ನಾವು ಬಹಿರಂಗಪಡಿಸಿದ್ದೇವೆ' ಎಂದು ಎಎಪಿ ರಾಜ್ಯಸಭಾ ಸಂಸದ ಸಂಜಯ್ ಸಿಂಗ್ ಹೇಳಿದ್ದಾರೆ.

'ಮಾಹಿತಿ ಒದಗಿಸಲು ಇ.ಸಿ ನಕಾರ'

ದೆಹಲಿಯ ಪ್ರತಿಯೊಂದು ವಿಧಾನಸಭಾ ಕ್ಷೇತ್ರದ ಮತಗಟ್ಟೆವಾರು ಮತದಾನದ ಮಾಹಿತಿಯನ್ನು ಹಂಚಿಕೊಳ್ಳಲು ಚುನಾವಣಾ ಆಯೋಗ (ಇ.ಸಿ) ನಿರಾಕರಿಸಿದೆ ಎಂದು ಅರವಿಂದ ಕೇಜ್ರಿವಾಲ್ ಆರೋಪಿಸಿದ್ದಾರೆ.

'ಪ್ರತಿ ಮತಗಟ್ಟೆಯಲ್ಲಿ ಚಲಾವಣೆಯಾದ ಮತಗಳ ವಿವರಗಳನ್ನು ಒಳಗೊಂಡ 'ಫಾರ್ಮ್ 17A' ಅಪ್‌ಲೋಡ್ ಮಾಡುವಂತೆ ಎಎಪಿ ಮಾಡಿರುವ ಮನವಿಯನ್ನು ಚುನಾವಣಾ ಆಯೋಗ ತಿರಸ್ಕರಿಸಿದೆ. ಆದ್ದರಿಂದ, ಮತದಾನಕ್ಕೆ ಸಂಬಂಧಿಸಿದ ನಮ್ಮಲ್ಲಿರುವ ಮಾಹಿತಿಯನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿದ್ದೇವೆ' ಎಂದು ಅವರು ಹೇಳಿದರು.

ದೆಹಲಿ: ಇಂದು ಮತ ಎಣಿಕೆ

ಪ್ರಜಾ ಮತ
ಜನತಂತ್ರದ ಹಬ್ಬ

ಪ್ರಜಾವಾಣಿ ವಾರ್ತೆ

ನವದೆಹಲಿ: ದೆಹಲಿ ವಿಧಾನಸಭಾ ಚುನಾವಣೆಯ ಮತ ಎಣಿಕೆ ಶನಿವಾರ ನಡೆಯಲಿದೆ. ಎಎಪಿ ನಾಲ್ಕನೇ ಅವಧಿಗೆ ಅಧಿಕಾರಕ್ಕೆ ಬರುತ್ತದೆಯೇ ಅಥವಾ 27 ವರ್ಷಗಳ ನಂತರ ಬಿಜೆಪಿ ಸರ್ಕಾರ ರಚಿಸುತ್ತದೆಯೇ ಎಂಬುದು ಗೊತ್ತಾಗಲಿದೆ.

ಎಣಿಕೆ ಪ್ರಕ್ರಿಯೆಯು ಬೆಳಿಗ್ಗೆ 8 ಗಂಟೆಗೆ ಪ್ರಾರಂಭವಾಗಲಿದೆ. ಮಧ್ಯಾಹ್ನದ ವೇಳೆಗೆ ಸ್ಪಷ್ಟ ಚಿತ್ರಣ ಹೊರಬೀಳುವ ಸಾಧ್ಯತೆ ಇದೆ. ಕೇಂದ್ರ ಚುನಾವಣಾ ಆಯೋಗದ ಪ್ರಕಾರ, ಶೇಕಡಾ 60.54ರಷ್ಟು ಮತಗಳು ಚಲಾವಣೆಯಾಗಿದೆ.

ಬಿಜೆಪಿ ಗರಿಷ್ಠ ಸ್ಥಾನಗಳನ್ನು ಗಳಿಸಿ ಅಧಿಕಾರದ ಚುಕ್ಕಾಣಿ ಹಿಡಿಯಲಿದೆ ಎಂದು ಬಹುತೇಕ ಮತಗಟ್ಟೆ ಸಮೀಕ್ಷೆಗಳು ಹೇಳಿವೆ. ತಮ್ಮ ಪಕ್ಷವು 50 ಸ್ಥಾನಗಳನ್ನು ಗೆಲ್ಲಲಿದೆ ಎಂದು ದೆಹಲಿ ಬಿಜೆಪಿ ಅಧ್ಯಕ್ಷ ವೀರೇಂದ್ರ ಸಚ್‌ದೇವ ತಿಳಿಸಿದರು. ಎಎಪಿ ಸರ್ಕಾರ ರಚಿಸಲಿದ್ದು, ಕೇಜ್ರಿವಾಲ್ ನಾಲ್ಕನೇ ಬಾರಿಗೆ ಮುಖ್ಯಮಂತ್ರಿ ಆಗಲಿದ್ದಾರೆ ಎಂದು ಪಕ್ಷದ ನಾಯಕರು ಪ್ರತಿಪಾದಿಸಿದ್ದಾರೆ.

ಗ್ಯಾರಂಟಿ: ವಿಶ್ವಸಂಸ್ಥೆ ಅಧಿಕಾರಿ ಮೆಚ್ಚುಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳಾ ಸಬಲೀಕರಣಕ್ಕೆ ರಾಜ್ಯ ಸರ್ಕಾರವು ಕೈಗೊಂಡಿರುವ ವಿವಿಧ ಕ್ರಮಗಳು ಮತ್ತು ಯೋಜನೆಗಳ ಬಗ್ಗೆ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಅಧ್ಯಕ್ಷ ಫಿಲೆಮನ್ ಯಾಂಗ್ ಅವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಶುಕ್ರವಾರ ನಗರಕ್ಕೆ ಭೇಟಿ ನೀಡಿದ್ದ ಅವರು, ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸುವಲ್ಲಿ ರಾಜ್ಯ ಸರ್ಕಾರದ ಕ್ರಮಗಳ ಬಗ್ಗೆ ಅಧಿಕಾರಿಗಳ ಜತೆ ಮಾತುಕತೆ ನಡೆಸಿದರು. ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು, 'ಒಂದು ರಾಜ್ಯ, ಹಲವು ಜಗತ್ತು' ಕುರಿತಾದ ಪುಸ್ತಕವನ್ನು ಫಿಲೆಮನ್ ಅವರಿಗೆ ಉಡುಗೊರೆಯಾಗಿ ನೀಡಿದರು.

ಮಹಿಳಾ ಸಬಲೀಕರಣದಲ್ಲಿ ಗ್ಯಾರಂಟಿಗಳಾದ ಗೃಹಲಕ್ಷ್ಮಿ, ಶಕ್ತಿ ಮತ್ತು ಗೃಹಜ್ಯೋತಿ ಯೋಜನೆಗಳು ಹೇಗೆ ನೆರವಾಗುತ್ತಿವೆ ಎಂಬುದನ್ನು ಶಾಲಿನಿ ರಜನೀಶ್ ಅವರು ವಿವರಿಸಿದರು. ಫಿಲೆಮನ್ ಅವರು ರಾಜ್ಯದ ನವೀಕರಿಸಬಹುದಾದ ಮೂಲದ ಇಂಧನ ಉತ್ಪಾದನಾ ಕ್ರಮಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು ಎಂದು ಸರ್ಕಾರದ ಪ್ರಕಟಣೆ ತಿಳಿಸಿದೆ.

ಮಾಹಿತಿ ತಂತ್ರಜ್ಞಾನ, ತಂತ್ರಾಂಶ ಅಭಿವೃದ್ಧಿ, ಕೃತಕಬುದ್ಧಿಮತ್ತೆ ಅಭಿವೃದ್ಧಿ ಕಾರ್ಯಗಳ ಉತ್ತೇಜನಕ್ಕೆ ರಾಜ್ಯ ಸರ್ಕಾರದ ಕ್ರಮಗಳ ಬಗ್ಗೆ ಅವರು ಮಾಹಿತಿ ಪಡೆದುಕೊಂಡರು ಎಂದು ತಿಳಿಸಿದೆ.

ಹಾವೇರಿ: ಕ್ರೇನ್ ಮಗುಚಿ ವ್ಯಕ್ತಿ ಸಾವು

ಹಾನಗಲ್ (ಹಾವೇರಿ ಜಿಲ್ಲೆ): ತಾಲ್ಲೂಕಿನ ಶೇಷಗಿರಿ ಗ್ರಾಮದಲ್ಲಿ ಶುಕ್ರವಾರ ಗಂಗಾ-ಪರಮೇಶ್ವರಿ ದೇವಸ್ಥಾನದ ಗೋಪುರ ಕಳಸಾರೋಹಣ ವೇಳೆ ಕ್ರೇನ್ ಬುಟ್ಟಿ ಮಗುಚಿ, ಗ್ರಾಮದ ಮಂಜುನಾಥ ಪಾಟೀಲ (42) ಮೃತಪಟ್ಟಿದ್ದಾರೆ.

'ಕ್ರೇನ್ ನೆರವಿನಿಂದ ಕಳಸಾರೋಹಣ ನೆರವೇರಿಸಲು ಸ್ವಾಮೀಜಿ ಸೇರಿ ಮೂವರು ಬುಟ್ಟಿಯನ್ನು ಏರಿದಾಗ, ಘಟನೆ ನಡೆದಿದೆ. ಕೂಸನೂರ ಗ್ರಾಮದ ತಿಪ್ಪಯ್ಯಸ್ವಾಮಿ ಆಶ್ರಮದ ಜ್ಯೋತಿರ್ಲಿಂಗಾನಂದ ಸ್ವಾಮೀಜಿ ಮತ್ತು ಸ್ಥಳೀಯರಾದ ಮಂಜು ಬಡಿಗೇರ ಅವರಿಗೆ ಗಾಯಗಳಾಗಿವೆ. ಹಾನಗಲ್ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದು ಆಡೂರ ಠಾಣೆ ಪೊಲೀಸರು ತಿಳಿಸಿದ್ದಾರೆ.

'ಮಸೂದೆಗೆ ಅಂಕಿತ ಹಾಕದಿದ್ದಾಗ ರಾಜ್ಯಗಳಿಗೆ ತಿಳಿಸಬೇಕು'



ನವದೆಹಲಿ(ಪಿಟಿಐ): ವಿಧಾನಸಭೆಗಳು ಅಂಗೀಕರಿಸಿದ ಮಸೂದೆಗಳಿಗೆ ಅಂಕಿತ ಹಾಕದಿದ್ದಾಗ, ಈ ಕುರಿತು ರಾಜ್ಯಪಾಲರು ರಾಜ್ಯ ಸರ್ಕಾರಕ್ಕೆ ಮಾಹಿತಿ ನೀಡದಿರುವುದು ಸರಿಯಲ್ಲ ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ಹೇಳಿದೆ.

ಅಲ್ಲದೇ, ಇಂತಹ ನಡೆ ಮೂಲಕ 'ಬಿಕ್ಕಟ್ಟು' ಸೃಷ್ಟಿಯಾಗುತ್ತಿರುವ ಕುರಿತು ಕಳವಳ ವ್ಯಕ್ತಪಡಿಸಿರುವ ಸುಪ್ರೀಂ ಕೋರ್ಟ್, ಇದಕ್ಕೆ ಯಾವ ರೀತಿ ಪರಿಹಾರ ಕಂಡುಕೊಳ್ಳಲು ಸಾಧ್ಯ ಎಂದೂ ಅಚ್ಚರಿ ವ್ಯಕ್ತಪಡಿಸಿದೆ.

ತಮಿಳುನಾಡು ವಿಧಾನಸಭೆಯ ಅಂಗೀಕಾರ ಪಡೆದಿರುವ ಮಸೂದೆಗಳಿಗೆ ಅಂಕಿತ ಹಾಕದೆ ಇರುವ ರಾಜ್ಯಪಾಲ ಆರ್.ಎನ್. ರವಿ ಅವರ ನಡೆಯನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿ ವಿಚಾರಣೆ ವೇಳೆ ಈ ಮಾತು ಹೇಳಿದೆ.

ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಹಾಗೂ ಆರ್.ಮಹಾದೇವನ್ ಅವರು ಇದ್ದ ನ್ಯಾಯಪೀಠ ಈ ಕುರಿತ ಅರ್ಜಿಯ ವಿಚಾರಣೆಯನ್ನು ಮುಂದುವರಿಸಿ ಹೀಗೆ ಹೇಳಿತು.

ನ್ಯಾಯಪೀಠವು ವಿಚಾರಣೆಯನ್ನು ಫೆ.10ಕ್ಕೆ ಮುಂದೂಡಿತು.

4ನೇ ತರಗತಿ ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ: ನಾಲ್ವರ ಬಂಧನ

ಮಣಪ್ಪಾರೈ (ತಮಿಳುನಾಡು) (ಪಿಟಿಐ): ಇಲ್ಲಿನ ಖಾಸಗಿ ಶಾಲೆಯೊಂದರಲ್ಲಿ 4ನೇ ತರಗತಿಯ ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ ನೀಡಿದ ಪ್ರಕರಣದಲ್ಲಿ ಶಾಲೆಯ ಮುಖ್ಯಸ್ಥೆ ಮತ್ತು ಆಕೆಯ ಪತಿ ಸೇರಿ ನಾಲ್ವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಶುಕ್ರವಾರ ತಿಳಿಸಿದ್ದಾರೆ.

ಶಾಲೆಯ ಮುಖ್ಯಸ್ಥೆಯ ಪತಿಯೇ ಈ ಪ್ರಕರಣದ ಪ್ರಮುಖ ಆರೋಪಿ. ತಲೆಮರೆಸಿಕೊಂಡಿರುವ ಮತ್ತೊಬ್ಬ ಆರೋಪಿಯ ಬಂಧನಕ್ಕೆ ಶೋಧ ನಡೆಯುತ್ತಿದೆ. ಬಾಲಕಿಯ ಪೋಷಕರು ನೀಡಿದ ದೂರು ಆಧರಿಸಿ ಪ್ರಕರಣ ದಾಖಲಿಸಿ, ಕ್ರಮ ತೆಗೆದುಕೊಳ್ಳಲಾಗಿದೆ. ಇದರಲ್ಲಿ ಮತ್ತೆ ಇನ್ಯಾರಾದರೂ ಭಾಗಿಯಾಗಿರುವುದು ಕಂಡುಬಂದರೆ ಅವರನ್ನೂ ಬಂಧಿಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ಘಟನೆಯಿಂದ ಕುಪಿತಗೊಂಡ ಬಾಲಕಿಯ ಸಂಬಂಧಿಕರು ಮತ್ತು ಸ್ಥಳೀಯರು ಗುರುವಾರ ಶಾಲೆಗೆ ನುಗ್ಗಿ ಕಿಟಕಿ ಮುರಿದು, ಹೂಕುಂಡಗಳನ್ನು ಹೊಡೆದು ಹಾಕಿದ್ದರು. ಅಲ್ಲದೆ, ಶಾಲೆ ಆವರಣದಲ್ಲಿ ನಿಲ್ಲಿಸಿದ್ದ ಕಾರಿಗೂ ಹಾನಿ ಮಾಡಿದ್ದರು.

ಲಿವರ್ ಪೂಲ್ ವಿವಿಯೊಂದಿಗೆ ಒಪ್ಪಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿಕ್ಷಣ ಹಾಗೂ ಸಂಶೋಧನೆಯ ಸಹಭಾಗಿತ್ವ ಉತ್ತೇಜಿಸುವ ಉದ್ದೇಶದಿಂದ ಕರ್ನಾಟಕ ಸರ್ಕಾರ ಮತ್ತು ಲಿವರ್ ಪೂಲ್ ವಿಶ್ವವಿದ್ಯಾಲಯ ಒಪ್ಪಂದ ಮಾಡಿಕೊಂಡಿವೆ.

ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವ ಎಂ.ಬಿ.ಪಾಟೀಲ ಹಾಗೂ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ ಅವರ ಸಮ್ಮುಖದಲ್ಲಿ ಒಪ್ಪಂದಕ್ಕೆ ಅಂಕಿತ ಹಾಕಲಾಯಿತು.

ಬ್ರಿಟಿಷ್ ಡೆಪ್ಯುಟಿ ಹೈಕಮಿಷನ್‌ನ ಬ್ರಿಟಿಷ್ ಕೌನ್ಸಿಲ್ ವಿಭಾಗದ ನಿರ್ದೇಶಕ ಜನಕ ಪುಷ್ಪನಾಥನ್, ಉಪ ಮುಖ್ಯಸ್ಥ ಜೇಮ್ಸ್ ಗೋಡ್ಬರ್, ಲಿವರ್ ಪೂಲ್ ವಿ.ವಿ.ಯ ಕುಲಪತಿ ಪ್ರೊ.ಟಿಮ್ ಜೋನ್ಸ್, ಮತ್ತು ಸಮ-ಕುಲಪತಿ ಪ್ರೊ. ತಾರಿಕ್ ಅಲಿ ಅವರು ಸಹಿ ಹಾಕಿದರು.

ಆವಿಷ್ಕಾರ ಕಾರ್ಯಕ್ರಮಗಳು ಹಾಗೂ ಶಿಕ್ಷಣ ಸಹಕಾರಕ್ಕೆ ಸಂಬಂಧಿಸಿದ ಸಹಭಾಗಿತ್ವವನ್ನು ಸದೃಢಗೊಳಿಸಲಾಗುತ್ತದೆ. ಅದನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯಲು ಜಂಟಿ ಕಾರ್ಯತಂಡ ರಚಿಸುವ ಗುರಿಯನ್ನೂ ಒಪ್ಪಂದ ಒಳಗೊಂಡಿದೆ.



❦ ಸುಭಾಷಿತ ❦

ಭಿನ್ನಮತದ ಮನ್ನಣೆಯೇ ಪ್ರಜಾಪ್ರಭುತ್ವದ ಪ್ರಾಣವಾಯು.

–ಗೋಪಾಲಕೃಷ್ಣ ಅಡಿಗ

ಯುಜಿಸಿ ಕರಡು ನಿಯಮಗಳಿಗೆ ವಿರೋಧ ರಾಜ್ಯಗಳ ಅಧಿಕಾರ ಮೊಟಕು ಸಲ್ಲದು

ವಿಶ್ವವಿದ್ಯಾಲಯಗಳ ಅನುದಾನ ಆಯೋಗವು (ಯುಜಿಸಿ) ಸಾರ್ವಜನಿಕರಿಂದ ಸಲಹೆ, ಸೂಚನೆ ಕೋರಿ ಈಚೆಗೆ ಪ್ರಕಟಿಸಿರುವ ಕರಡು ನಿಯಮಗಳ ಕುರಿತು ಭಾರಿ ಟೀಕೆ ವ್ಯಕ್ತವಾಗಿದೆ. ಈ ನಿಯಮಗಳು ವಿಶ್ವವಿದ್ಯಾಲಯಗಳ ಸ್ವಾಯತ್ತೆಗೆ, ರಾಜ್ಯಗಳ ಅಧಿಕಾರಕ್ಕೆ ಮತ್ತು ಒಕ್ಕೂಟ ವ್ಯವಸ್ಥೆಯ ತತ್ವಕ್ಕೆ ಅಪಾಯ ತಂದೊಡ್ಡುತ್ತವೆ ಎಂಬ ಆತಂಕವನ್ನು ವ್ಯಕ್ತಪಡಿಸಲಾಗಿದೆ. ಬಿಜೆಪಿಯನ್ನು ರಾಜಕೀಯವಾಗಿ ವಿರೋಧಿಸುವ ಪಕ್ಷಗಳ ಆಡಳಿತ ಇರುವ ಆರು ರಾಜ್ಯಗಳು ಒಂದಾಗಿ ನಿಯಮಗಳನ್ನು ವಿರೋಧಿಸಿವೆ. ನಿಯಮಗಳನ್ನು ಹಿಂಪಡೆಯಬೇಕು ಎಂದು ಅವು ಕೋರಿವೆ. ಕರ್ನಾಟಕ, ಹಿಮಾಚಲ ಪ್ರದೇಶ, ಜಾರ್ಖಂಡ್, ಕೇರಳ, ತಮಿಳುನಾಡು ಮತ್ತು ತೆಲಂಗಾಣ ರಾಜ್ಯಗಳ ಉನ್ನತ ಶಿಕ್ಷಣ ಸಚಿವರು ಈಚೆಗೆ ಬೆಂಗಳೂರಿನಲ್ಲಿ ಸಭೆ ಸೇರಿ, ನಿಯಮಗಳಿಗೆ ತಮ್ಮ ವಿರೋಧವನ್ನು ವಿವರಿಸುವ 15 ಅಂಶಗಳ ನಿರ್ಣಯವನ್ನು ಅಂಗೀಕರಿಸಿದ್ದಾರೆ. ಹಲವು ಸಂಗತಿಗಳ ಬಗ್ಗೆ ಅವರು ವಿರೋಧವನ್ನು ವ್ಯಕ್ತಪಡಿಸಿದ್ದಾರೆ. ವಿಶ್ವವಿದ್ಯಾಲಯಗಳಿಗೆ ಕುಲಪತಿಗಳ ನೇಮಕಕ್ಕೆ, ಬೋಧಕ ಸಿಬ್ಬಂದಿ ನೇಮಕಕ್ಕೆ ಅನುಸರಿಸುವ ವಿಧಾನ, ವಿದ್ಯಾರ್ಥಿಗಳಿಗೆ ಪ್ರವೇಶ ಕಲ್ಪಿಸುವುದು, ಪರೀಕ್ಷೆ ನಡೆಸುವುದು ಹಾಗೂ ಪದವಿ ನೀಡುವುದಕ್ಕೆ ಸಂಬಂಧಿಸಿದ ಕರಡು ನಿಯಮಗಳಿಗೆ ವಿರೋಧ ದಾಖಲಾಗಿದೆ. ಈ ಸಭೆಯಲ್ಲಿ ಪಾಲ್ಗೊಳ್ಳದೇ ಇದ್ದ ಇತರ ಕೆಲವು ರಾಜ್ಯಗಳು ಕೂಡ ನಿಯಮಗಳನ್ನು ವಿರೋಧಿಸಿವೆ. ಪಶ್ಚಿಮ ಬಂಗಾಳ ಸರ್ಕಾರ ನೇಮಕ ಮಾಡಿದ ಸಮಿತಿಯೊಂದು ಈ ನಿಯಮಗಳನ್ನು ವಿರೋಧಿಸಿದೆ. 'ಇಂಡಿಯಾ' ಮೈತ್ರಿಕೂಟದ ರಾಜಕೀಯ ಪಕ್ಷಗಳು ಮಾತ್ರವಲ್ಲದೆ, ಬಿಜು ಜನತಾ ದಳ ಕೂಡ ನಿಯಮವನ್ನು ವಿರೋಧಿಸಿದೆ. ಎನ್‌ಡಿಎ ಮೈತ್ರಿಕೂಟದ ಕೆಲವು ಪಕ್ಷಗಳಿಗೆ ಈ ನಿಯಮಗಳು ಸಮಾಧಾನ ತಂದಿಲ್ಲ. ಅಂದರೆ ಕರಡು ನಿಯಮಗಳಿಗೆ ವಿರೋಧವು ವ್ಯಾಪಕವಾಗಿದೆ ಎಂದೇ ಅರ್ಥ.



ಈ ನಿಯಮಗಳನ್ನು ರಾಜ್ಯಗಳ ಮೇಲೆ ಬಲವಂತದಿಂದ ಹೇರುವುದು ಸರಿಯಲ್ಲ

ಕುಲಪತಿಗಳು ಹಾಗೂ ಬೋಧಕ ಸಿಬ್ಬಂದಿಯ ನೇಮಕಕ್ಕೆ ಸಂಬಂಧಿಸಿದ ನಿಯಮಗಳಿಗೆ ತೀವ್ರ ವಿರೋಧ ಇದೆ. ಕುಲಪತಿಗಳನ್ನು ನೇಮಕ ಮಾಡುವ ಅಧಿಕಾರವನ್ನು ರಾಜ್ಯ ಸರ್ಕಾರಗಳಿಂದ ಕಿತ್ತು, ಆ ಅಧಿಕಾರವನ್ನು ರಾಜ್ಯಪಾಲರಿಗೆ ನೀಡುವ ಪ್ರಸ್ತಾವ ಈ ನಿಯಮಗಳಲ್ಲಿ ಇದೆ. ಇದರ ಅರ್ಥ, ಇವರ ನೇಮಕಾತಿ ಪ್ರಕ್ರಿಯೆಯಲ್ಲಿ ಕೇಂದ್ರ ಸರ್ಕಾರಕ್ಕೆ ಪೂರ್ಣ ಅಧಿಕಾರ ಇರುತ್ತದೆ. ನಿಯಮಗಳು ಜಾರಿಗೆ ಬಂದರೆ, ವಿಶ್ವವಿದ್ಯಾಲಯಗಳ ಆಡಳಿತವು ಕೇಂದ್ರದ ಕೈಸೇರುತ್ತದೆ. ರಾಜ್ಯಗಳ ಮಟ್ಟದಲ್ಲಿ ವಿಶ್ವವಿದ್ಯಾಲಯಗಳನ್ನು ಪ್ರತ್ಯೇಕ ಶಾಸನ ರೂಪಿಸಿ ಸ್ಥಾಪಿಸಲಾಗಿರುತ್ತದೆ, ಆ ವಿಶ್ವವಿದ್ಯಾಲಯಗಳಿಗೆ ರಾಜ್ಯದ ಬೊಕ್ಕಸದಿಂದ ಅನುದಾನ ಸಿಗುತ್ತಿರುತ್ತದೆ. ಅಲ್ಲಿನ ಮೂಲಸೌಕರ್ಯವನ್ನು ರಾಜ್ಯ ಸರ್ಕಾರ ಒದಗಿಸಿರುತ್ತದೆ. ಹೀಗಿರುವಾಗ ಇಂತಹ ವಿಶ್ವವಿದ್ಯಾಲಯಗಳ ಆಡಳಿತವನ್ನು ಕೇಂದ್ರ ಸರ್ಕಾರದ ನಿಯಂತ್ರಣಕ್ಕೆ ವರ್ಗಾಯಿಸುವಂತಹ ನಿಯಮಗಳನ್ನು ಯುಜಿಸಿ ರೂಪಿಸುವುದು ಸರಿಯಲ್ಲ. ವಿಶ್ವವಿದ್ಯಾಲಯಗಳ ನಡುವೆ ಸಮನ್ವಯ ಸಾಧಿಸುವ ಹಾಗೂ ವಿಶ್ವವಿದ್ಯಾಲಯಗಳ ಗುಣಮಟ್ಟವನ್ನು ನಿರ್ಧರಿಸುವ ಅಧಿಕಾರವು ಯುಜಿಸಿಗೆ ಇದೆ. ಆದರೆ ವಿಶ್ವವಿದ್ಯಾಲಯಗಳನ್ನು ಯಾರು ಮುನ್ನಡೆಸಬೇಕು ಎಂಬುದನ್ನು ತೀರ್ಮಾನಿಸುವ ಅಧಿಕಾರ ಅದಕ್ಕೆ ಇಲ್ಲ.

ಯುಜಿಸಿಯ ಈ ಕರಡು ನಿಯಮಗಳು ಸಂವಿಧಾನ ಹೇಳಿರುವ ಒಕ್ಕೂಟ ವ್ಯವಸ್ಥೆಯ ಸ್ವರೂಪಕ್ಕೆ ಕೂಡ ಧಕ್ಕೆ ತರುವಂತಿವೆ. ಶಿಕ್ಷಣವು ಸಮವರ್ತಿ ಪಟ್ಟಿಯಲ್ಲಿದೆ. ಶಿಕ್ಷಣದ ವಿಚಾರದಲ್ಲಿ ರಾಜ್ಯಗಳಿಗೂ ಕಾನೂನುಬದ್ಧವಾದ ಹಕ್ಕುಗಳು, ಅಧಿಕಾರ ಇವೆ. ಆ ಹಕ್ಕುಗಳು ಮತ್ತು ಅಧಿಕಾರವನ್ನು ಮೊಟಕುಗೊಳಿಸುವುದು ಸರಿಯಲ್ಲ. ರಾಜ್ಯಗಳು ರೂಪಿಸಿದ ಶಾಸನಗಳಿಗಿಂತ ಯುಜಿಸಿ ರೂಪಿಸಿದ ನಿಯಮಗಳಿಗೆ ಹೆಚ್ಚಿನ ಮಹತ್ವ ನೀಡಲು ಆಗುವುದಿಲ್ಲ. ನಿಯಮಗಳಲ್ಲಿ ಇರುವ ಇತರ ಹಲವು ಪ್ರಸ್ತಾವಗಳಿಗೂ ರಾಜ್ಯಗಳು ವಿರೋಧ ವ್ಯಕ್ತಪಡಿಸಿವೆ. ಬೋಧಕ ಸಿಬ್ಬಂದಿಯ ನೇಮಕಕ್ಕೆ ಇರುವ ನಿಯಮಗಳನ್ನು ಬದಲಾಯಿಸಲಾಗಿದೆ, ನೇಮಕಕ್ಕೆ ರಾಷ್ಟ್ರೀಯ ಅರ್ಹತಾ ಪರೀಕ್ಷೆಯಲ್ಲಿ ಉತ್ತೀರ್ಣ ಆಗಬೇಕು ಎಂಬ ಅಗತ್ಯ ಇರುವುದಿಲ್ಲ. ಬಡ್ತಿ ಕುರಿತ ನಿಯಮಗಳನ್ನು ಬದಲಾಯಿಸುವ ಪ್ರಸ್ತಾವ ಇದೆ. ಉದ್ಯಮಗಳಲ್ಲಿನ ವೃತ್ತಿಪರರನ್ನು ಹಾಗೂ ಸಾರ್ವಜನಿಕ ಆಡಳಿತದಲ್ಲಿ ಅನುಭವ ಹೊಂದಿರುವವರನ್ನು ಕುಲಪತಿ ಮತ್ತು ಬೋಧಕರನ್ನಾಗಿ ನೇಮಕ ಮಾಡಲು ಅವಕಾಶ ಇರುತ್ತದೆ. ಕರಡು ನಿಯಮಗಳು ಅನುಷ್ಠಾನಕ್ಕೆ ಬಂದಲ್ಲಿ ವಿಶ್ವವಿದ್ಯಾಲಯಗಳ ವ್ಯವಸ್ಥೆಯಲ್ಲಿ ವ್ಯಾಪಕ ಬದಲಾವಣೆಗಳು ಬರಲಿವೆ. ಆದರೆ ಈ ನಿಯಮಗಳನ್ನು ರಾಜ್ಯಗಳ ಮೇಲೆ ಬಲವಂತದಿಂದ ಹೇರುವುದು ಸರಿಯಲ್ಲ.

ನಿಯಂತ್ರಣ ಕ್ರಮಗಳಲ್ಲಿ ಪಾರದರ್ಶಕತೆ ಮತ್ತು ಸ್ಪಷ್ಟತೆ ಕಾಯ್ದುಕೊಳ್ಳಬೇಕಿದೆ

ಪರಮಾಣು ವಿದ್ಯುತ್: ಖಾಸಗಿಯತ್ತ ಕಣ್ಣು



ವಿಶ್ಲೇಷಣೆ

ಗುರುರಾಜ್ ಎಸ್. ದಾವಣಗೆರೆ

ಈ ದಶಕದ ಕೊನೆಗೆ ಐದು ಲಕ್ಷ ಮೆಗಾವಾಟ್ ಇಂಗಾಲಮುಕ್ತ ವಿದ್ಯುತ್ ಉತ್ಪಾದಿಸುತ್ತೇವೆ ಎಂದು ಗ್ಲಾಸ್ಗೊ ಶೃಂಗಸಭೆಯಲ್ಲಿ ಭಾರತ ಪ್ರತಿಜ್ಞೆ ಮಾಡಿದ್ದು ನಿಮಗೆ ನೆನಪಿದೆಯೇ? ಅದನ್ನು ಸಾಧಿಸಲು ಕೇಂದ್ರ ಸರ್ಕಾರವು ಪರಮಾಣು ವಿದ್ಯುತ್ ಉತ್ಪಾದನೆಯ ಅವಕಾಶವನ್ನು ಖಾಸಗಿ ಕ್ಷೇತ್ರಕ್ಕೂ ವಿಸ್ತರಿಸಲು ಮುಂದಾಗಿದೆ. ಅದಕ್ಕಾಗಿ, ಅಣುಶಕ್ತಿ ಕಾಯ್ದೆಗಳಿಗೆ ತಿದ್ದುಪಡಿ ಮಾಡಲು ಹೊರಟಿದೆ. ಸರ್ಕಾರದ ಈ ಉದ್ದೇಶ ಕೈಗೂಡಿದರೆ, ಇದುವರೆಗೂ ಸರ್ಕಾರಿ ಸ್ವಾಮ್ಯದ ಉದ್ಯಮಗಳಿಗೆ ಸೀಮಿತವಾಗಿದ್ದ ಅಣು ವಿದ್ಯುತ್ ಉತ್ಪಾದನೆಯ ಅವಕಾಶ ಇನ್ನು ಮುಂದೆ ಖಾಸಗಿಯವರಿಗೂ ಸಿಗಲಿದೆ.

ಈ ಸುದ್ದಿಯ ಬೆನ್ನಲ್ಲೇ, ಪರಮಾಣು ವಿದ್ಯುತ್ ಉತ್ಪಾದನೆಯಂತಹ ಅತಿ ಸೂಕ್ಷ್ಮ ಮತ್ತು ಅಪಾಯಕಾರಿ ಎಂದೇ ಭಾವಿಸಲಾಗಿರುವ ಉದ್ಯಮದಲ್ಲಿ ಖಾಸಗಿಯವರ ಪ್ರವೇಶವಾದರೆ ದೇಶದ ಭದ್ರತೆಗೆ ಧಕ್ಕೆಯಾಗುವುದಿಲ್ಲವೇ, ಈಗಾಗಲೇ ಬಿಸಿಲು, ಗಾಳಿ, ಬಯೊಮಾಸ್‌ನಿಂದ 1.75 ಲಕ್ಷ ಮೆ.ವಾ. ಇಂಗಾಲಮುಕ್ತ ವಿದ್ಯುತ್ ಉತ್ಪಾದಿಸುವ ಕೆಲಸ ಚೆನ್ನಾಗಿ ನಡೆದಿರುವಾಗ, ಪರಮಾಣು ವಿದ್ಯುತ್ತಿನ ಗೊಡವೆ ಏಕೆ ಎಂಬ ಪ್ರಶ್ನೆಗಳು ಎದ್ದಿವೆ.

ಖಾಸಗಿಯವರನ್ನು ಈ ಕ್ಷೇತ್ರಕ್ಕೆ ಬರಮಾಡಿಕೊಳ್ಳುವ ವಿಚಾರ ಹೊಸದೇನಲ್ಲ. ನೀತಿ ಆಯೋಗ ಮತ್ತು ಅಣುಶಕ್ತಿ ಇಲಾಖೆಯ ಹಿಂದಿನ ವರ್ಷದ ವರದಿಯಲ್ಲಿ ಈ ವಿಚಾರ ಪ್ರಸ್ತಾಪವಾಗಿತ್ತು. ಅದಕ್ಕಾಗಿ ಪರಮಾಣು ಶಕ್ತಿ ಕಾಯ್ದೆ (ಅಟಾಮಿಕ್ ಎನರ್ಜಿ ಆ್ಯಕ್ಟ್) ಮತ್ತು ಪರಮಾಣು ಹಾನಿಗೆ ನಾಗರಿಕ ಹೊಣೆಗಾರಿಕೆ (ಸಿವಿಲ್ ಲಯಬಿಲಿಟಿ ಫಾರ್ ನ್ಯೂಕ್ಲಿಯರ್ ಡ್ಯಾಮೇಜ್- ಸಿಎಲ್‌ಎನ್‌ಡಿ) ಕಾಯ್ದೆಗೆ ಸೂಕ್ತ ತಿದ್ದುಪಡಿ ಮಾಡಿ ಖಾಸಗಿ ಉದ್ದಿಮೆದಾರರಿಗೆ ಪ್ರವೇಶ ಕಲ್ಪಿಸಲಾಗುವುದು ಎಂದಿರುವ ಕೇಂದ್ರ ಸರ್ಕಾರ, ಇನ್ನು ಎಂಟು ವರ್ಷಗಳಲ್ಲಿ ದೇಶೀಯವಾಗಿ ನಿರ್ಮಿಸಲಾದ ಐದು ಸಣ್ಣ ಮತ್ತು ಮಧ್ಯಮ ರಿಯಾಕ್ಟರ್‌ಗಳು ಕಾರ್ಯಾರಂಭ ಮಾಡಲಿವೆ ಎಂಬ ವಿಶ್ವಾಸ ವ್ಯಕ್ತಪಡಿಸಿದೆ.

ಇದಕ್ಕೆ ಪೂರಕವೆಂಬಂತೆ, ಈ ವರ್ಷದ ಆಯವ್ಯಯದಲ್ಲಿ ಈ ಉದ್ದೇಶಕ್ಕೆ ₹ 20,000 ಕೋಟಿ ತೆಗೆದಿರಿಸಿರುವ ಸರ್ಕಾರ, 2047ರ ವೇಳೆಗೆ ಕನಿಷ್ಠ 1 ಲಕ್ಷ ಮೆ.ವಾ. ಪರಮಾಣು ವಿದ್ಯುತ್ ಉತ್ಪಾದನೆಯ ಗುರಿ ಇಟ್ಟುಕೊಂಡಿದೆ. ಈ ಕೆಲಸ ಬರೀ ಸರ್ಕಾರಿ ಉದ್ಯಮಗಳಿಂದ ಸಾಧ್ಯವಿಲ್ಲ. ಖಾಸಗಿ ಸಹಭಾಗಿತ್ವ ಮತ್ತು 2,600 ಕೋಟಿ ಡಾಲರ್ (ಅಂದಾಜು ₹ 2.27 ಲಕ್ಷ ಕೋಟಿ) ಬಂಡವಾಳ ಬೇಕು. ಅಣುಶಕ್ತಿ ಉತ್ಪಾದನೆಗೆ ಖಾಸಗಿ ಭಾಗೀದಾರಿಕೆ ಪ್ರೋತ್ಸಾಹಿಸಲು ಅಮೆರಿಕದ ವೆಸ್ಟಿಂಗ್ ಹೌಸ್ ಎಲೆಕ್ಟ್ರಿಕ್ ಕಂಪನಿಯೊಂದಿಗೆ 2008ರಲ್ಲಿ ಒಪ್ಪಂದವಾಗಿತ್ತು. ಯೋಜನೆಗೆ ಅಂತಿಮ ರೂಪ ನೀಡಲು ಎರಡು ವರ್ಷ ಬೇಕಾಯಿತು. 2010ರ ಸಿಎಲ್‌ಎನ್‌ಡಿ ಕಾಯ್ದೆ ಪ್ರಕಾರ, ಅಣು ವಿದ್ಯುತ್ ಉತ್ಪಾದನೆಯನ್ನು ವಾಣಿಜ್ಯೀಕರಣಗೊಳಿಸಲು ಅವಕಾಶ ಇಲ್ಲ. ಯೋಜನೆಯ ಪ್ರಕಾರ, ಆಂಧ್ರಪ್ರದೇಶದ ಕೊವ್ವಾಡದಲ್ಲಿ 6,000 ಮೆಗಾವಾಟ್ ಸಾಮರ್ಥ್ಯದ ಅಣು ವಿದ್ಯುತ್ ಸ್ಥಾವರ ನಿರ್ಮಾಣ ಆರಂಭ ಆಗಬೇಕಿತ್ತು. ಉತ್ಪಾದನೆಯಲ್ಲಿ ಅಪಘಾತಗಳೇನಾದರೂ ಸಂಭವಿಸಿದರೆ ನಷ್ಟ ಕಟ್ಟಿಕೊಡುವ ಹೊಣೆಯು ಕಾನೂನಿನ ಅನ್ವಯ ಸ್ಥಾವರ ನಿರ್ವಾಹಕರದೇ ಆಗಿರುತ್ತದೆ. ಕಾನೂನಿನ ತೊಡಕು ಮತ್ತು 2017ರಲ್ಲಿ ಕಂಪನಿ ಎದುರಿಸಿದ ಆರ್ಥಿಕ ಮುಗ್ಗಟ್ಟಿನಿಂದ ಯೋಜನೆ ಇನ್ನೂ ತೆವಳುತ್ತಲೇ ಇದೆ. 2015ರಲ್ಲಿ ಎನ್‌ಡಿಎ ಸರ್ಕಾರ ಯಾವ ಕಾರಣಕ್ಕೂ ಕಾಯ್ದೆ ಬದಲಾಗದು ಎಂದಿತ್ತು. ಈಗ ಮಾತಿನ ವರಸೆ ಬದಲಾಗಿದೆ.

ಸಿಎಲ್‌ಎನ್‌ಡಿಯು ಪರಮಾಣು ವಿಪತ್ತಿನ ಸಂದರ್ಭಗಳಲ್ಲಿ ಹಾನಿಗೆ ಒಳಗಾಗುವವರನ್ನು ರಕ್ಷಿಸಲು ಮುತುವರ್ಜಿ ವಹಿಸುತ್ತದೆ. ಆಸ್ತಿಪಾಸ್ತಿ, ಪ್ರಾಣ ನಷ್ಟಕ್ಕೆ ನಿರ್ವಾಹಕರೇ ಪರಿಹಾರ ನೀಡಬೇಕಾಗುತ್ತದೆ. ಪರಿಹಾರದ ಗರಿಷ್ಠ ಮಿತಿ ₹ 1,500 ಕೋಟಿ. ನಷ್ಟದ ಪ್ರಮಾಣ ಇದಕ್ಕೂ ದೊಡ್ಡದಿದ್ದರೆ ಕೇಂದ್ರ ಸರ್ಕಾರ ಜವಾಬ್ದಾರಿ ತೆಗೆದುಕೊಳ್ಳುತ್ತದೆ. ಆದರೆ ಉದ್ದೇಶಿತ ತಿದ್ದುಪಡಿಯ ಪ್ರಕಾರ, ನಷ್ಟ ಕಟ್ಟಿಕೊಡುವ ಹೊಣೆಯು ಸಾಮಗ್ರಿ, ಉಪಕರಣ ಸರಬರಾಜು ಮಾಡುವವರದು. ಆದರೆ ಅಂತರರಾಷ್ಟ್ರೀಯ ಕಾನೂನು ಚೌಕಟ್ಟು, ನಿರ್ವಾಹಕರೇ ಹೊಣೆಗಾರರಾಗುತ್ತಾರೆ ಎನ್ನುತ್ತದೆ. ಈಗ ನಾವು ಮಾಡುತ್ತಿರುವ ತಿದ್ದುಪಡಿಯು ಜಗತ್ತಿನಾದ್ಯಂತ ಅಣು ವಿದ್ಯುತ್ ಉತ್ಪಾದನೆಗೆ ಸಂಬಂಧಿಸಿ ಚಾಲ್ತಿಯಲ್ಲಿರುವ ನಿಯಮಗಳಿಗೆ ಸಂಪೂರ್ಣ ತದ್ವಿರುದ್ಧವಾಗಿದೆ. 'ಈ ಮಸೂದೆಯು ತಂತ್ರಜ್ಞಾನ, ಉಪಕರಣ, ಸಾಮಗ್ರಿ ಸರಬರಾಜು ಮಾಡುವ ನಮ್ಮಂತಹ ಕಂಪನಿಗಳಿಗೆ ಭಾರಿ ನಷ್ಟ ಉಂಟುಮಾಡುತ್ತದೆ' ಎಂದಿರುವ ಅಮೆರಿಕದ ಜಿ.ಈ. ಹಿಟಾಚಿ ನ್ಯೂಕ್ಲಿಯರ್ ಎನರ್ಜಿ, ವೆಸ್ಟಿಂಗ್ ಹೌಸ್ ಎಲೆಕ್ಟ್ರಿಕ್ ಕಂಪನಿ ಮತ್ತು ರೋಸಾಟಂ ಸ್ಟೇಟ್ ಕಾರ್ಪೊರೇಷನ್, ಸಲಕರಣೆ ಸರಬರಾಜಿಗೆ ಹಿಂದೇಟು ಹಾಕುತ್ತಿವೆ.

ರಾಜಸ್ಥಾನ, ಗುಜರಾತ್, ಮಹಾರಾಷ್ಟ್ರ, ಉತ್ತರ ಪ್ರದೇಶ, ಕರ್ನಾಟಕ ಮತ್ತು ತಮಿಳುನಾಡಿನಲ್ಲಿ ಈಗಾಗಲೇ ಅಣು ವಿದ್ಯುತ್ ಘಟಕಗಳು ಕೆಲಸ ನಿರ್ವಹಿಸುತ್ತಿವೆ. ವಾರ್ಷಿಕ 6,733 ಮೆಗಾವಾಟ್ ವಿದ್ಯುತ್ ಉತ್ಪಾದನೆ ಆಗುತ್ತಿದೆ. ಎಲ್ಲ ಘಟಕಗಳು ಸರ್ಕಾರಕ್ಕೆ ಸೇರಿವೆ. ಸರ್ಕಾರದ ಒಡೆತನದ ನ್ಯೂಕ್ಲಿಯರ್ ಪವರ್ ಕಾರ್ಪೊರೇಷನ್ ಆಫ್ ಇಂಡಿಯಾ ಮತ್ತು 'ಭಾವಿನಿ'ಯು ವಿದ್ಯುತ್ ಉತ್ಪಾದನೆಗೆ ಬೇಕಾದ ಪರಿಕರಗಳನ್ನು ಒದಗಿಸುತ್ತಿವೆ. ಅಣು ವಿದ್ಯುತ್ ಉತ್ಪಾದನೆ ಕ್ಷೇತ್ರದಲ್ಲಿ ಖಾಸಗಿಯವರು ಏಕೆ ಇರುವಂತಿಲ್ಲ ಎಂದು ಸಂದೀಪ್ ಎನ್ನುವವರು ಹಿಂದಿನ ಸೆಪ್ಟೆಂಬರ್‌ನಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು. 'ಸಂಸತ್ತು ಬಹಳ ಎಚ್ಚರಿಕೆಯ ಲೆಕ್ಕಾಚಾರ ಹಾಕಿ, ದೇಶದ ಭದ್ರತೆಯನ್ನು ಆದ್ಯತೆಯನ್ನಾಗಿಸಿ, ಉತ್ಪಾದನೆಯ ಜೊತೆಗೆ ಅಪಘಾತ ತಪ್ಪಿಸಲು ಸರ್ವ ಮುನ್ನೆಚ್ಚರಿಕೆಗಳನ್ನೂ ತೆಗೆದುಕೊಳ್ಳುತ್ತದೆ. ಖಾಸಗಿಯವರಿಂದ ಇದನ್ನು ನಿರೀಕ್ಷಿಸಲಾಗದು' ಎಂಬ ವಿವರಣೆ ನೀಡಿ ಅರ್ಜಿ ವಜಾ ಮಾಡಲಾಗಿತ್ತು.



ಪರಮಾಣು ವಿದ್ಯುತ್ ಉತ್ಪಾದನೆಯಲ್ಲಿ ಸೋರಿಕೆ ಮತ್ತು ತ್ಯಾಜ್ಯ ನಿರ್ವಹಣೆಯ ಸವಾಲುಗಳು ತುಂಬಾ ದೊಡ್ಡವು. ಇವುಗಳನ್ನು ಸರಿಯಾಗಿ ನಿರ್ವಹಿಸುವ ಬಗ್ಗೆ ಇನ್ನೂ ಅನುಮಾನಗಳಿವೆ. ರಷ್ಯಾದ ಚರ್ನೋಬಿಲ್, ಜಪಾನಿನ ಫುಕುಶಿಮಾ ಅಣುಸ್ಥಾವರಗಳ ಅವಘಡಗಳನ್ನು ದೃಷ್ಟಿಯಲ್ಲಿ ಇರಿಸಿಕೊಂಡ ಸುಪ್ರೀಂ ಕೋರ್ಟ್, ತಮಿಳುನಾಡಿನ ಕೂಡಂಕುಲಂ ಅಣುಸ್ಥಾವರ ಸ್ಥಾಪನೆಯ ವಿಷಯದಲ್ಲಿ ಕೇಂದ್ರ ಸರ್ಕಾರಕ್ಕೆ ಕಟ್ಟಲೆಗಳನ್ನು ಹಾಕಿ, ಸ್ಥಾವರವನ್ನು ಸತತವಾಗಿ ತಪಾಸಿಸಿ ವರದಿ ನೀಡುವಂತೆ ಆದೇಶಿಸಿತ್ತು. ಅಣುಶಕ್ತಿ ಇಲಾಖೆ, ನ್ಯಾಷನಲ್ ಪವರ್ ಕಾರ್ಪೊರೇಷನ್ ಆಫ್ ಇಂಡಿಯಾ ಲಿಮಿಟೆಡ್ ಆ ಕೆಲಸವನ್ನು ತಪ್ಪದೇ ಮಾಡುತ್ತಿವೆ.

ಗುರಿ ಸಾಧನೆಗೆ ಹಲವು ಅಡ್ಡಿಗಳಿವೆ. ಅಣು ವಿದ್ಯುತ್ ಘಟಕ ಸ್ಥಾಪನೆಗೆ ಬೇಕಾದ ಜಾಗ ಪಡೆಯುವುದು ಅಷ್ಟು ಸುಲಭವಲ್ಲ. ಪ್ರತಿ ಸ್ಥಾವರದ ಸ್ಥಾಪನೆಯ ಸಮಯದಲ್ಲಿ ಸ್ಥಳೀಯರ ಪ್ರತಿಭಟನೆ ಸರ್ವೇಸಾಮಾನ್ಯ. ಪರಿಸರ ಇಲಾಖೆಯು ಹಸಿರು ನಿಶಾನೆ ತೋರುವವರೆಗೂ ಭೂಸ್ವಾಧೀನ ಪ್ರಕ್ರಿಯೆ ನಡೆಯಕೂಡದು ಎಂದು ಕೊವ್ವಾಡ ಸ್ಥಾವರದ ವಿಷಯದಲ್ಲಿ ಆಂಧ್ರಪ್ರದೇಶ ಹೈಕೋರ್ಟ್ ಹೇಳಿತ್ತು. ಅಣು ವಿದ್ಯುತ್ ಕ್ಷೇಮಕರವಲ್ಲ ಎಂಬ ಅಂಶವನ್ನು ಅಸ್ತ್ರವನ್ನಾಗಿಸಿಕೊಂಡು ವಿರೋಧ ಪಕ್ಷಗಳು ಸರ್ಕಾರದ ವಿರುದ್ಧ ಮುಗಿಬೀಳುತ್ತವೆ.

ಖಾಸಗಿ ಉದ್ಯಮಗಳು ರೂಪಿಸಿಕೊಳ್ಳುವ ತಂತ್ರಜ್ಞಾನ ಬಳಕೆಗೆ ಅವಕಾಶವಿಲ್ಲ. ಬಳಸುವ ತಂತ್ರಜ್ಞಾನ ದೇಶೀಯವಾಗಿರಬೇಕು ಮತ್ತು ಅದು ವಾಣಿಜ್ಯ ಕ್ಷೇತ್ರದ ಬಳಕೆಗೆ ಯೋಗ್ಯವಾಗಿರಬೇಕು ಎನ್ನುವ ಮಾರುಕಟ್ಟೆ ತಜ್ಞರು, 'ಇನ್ನೂ ಐದು ವರ್ಷ ನಮ್ಮ ಕೆಲಸವೇನಿದ್ದರೂ ತಂತ್ರಜ್ಞಾನ ರೂಪಿಸುವುದಾಗಿರುತ್ತದೆ. ಉತ್ಪಾದನೆ ಏನಿದ್ದರೂ 2030ರ ನಂತರ' ಎಂದಿದ್ದಾರೆ. ಸರ್ಕಾರ ಹೇಳುವ ತಂತ್ರಜ್ಞಾನವನ್ನೇ ಬಳಸಬೇಕೆನ್ನುವ ನಿರ್ಬಂಧ ಅಣು ವಿದ್ಯುತ್ ಉತ್ಪಾದನೆಯ ಕೆಲಸಗಳಿಗೆ ಹಿನ್ನಡೆ ಉಂಟುಮಾಡುತ್ತದೆ. ಸಣ್ಣ ಮತ್ತು ಮಧ್ಯಮ ಗಾತ್ರದ ರಿಯಾಕ್ಟರ್‌ಗಳನ್ನು ಉತ್ಪಾದಿಸುವ ತಂತ್ರಜ್ಞಾನ ನಮಗಿನ್ನೂ ಪೂರ್ಣವಾಗಿ ಸಿದ್ಧಿಸಿಲ್ಲ. ಮಾಡಿದ ಉತ್ಪಾದನೆಗೆ ದರ ನಿಗದಿ ಆಗಬೇಕು, ಸರಿಯಾದ ಬೆಲೆ ಸಿಗಬೇಕು. ಆಗ ಖಾಸಗಿಯವರು ಈ ಕ್ಷೇತ್ರಕ್ಕೆ ಕೈ ಹಾಕುತ್ತಾರೆ. ಅಲ್ಲದೆ ಹೊಸ ತಂತ್ರಜ್ಞಾನ ಯಶಸ್ವಿಯಾಗದಿದ್ದಲ್ಲಿ ಉದ್ಯಮಕ್ಕೆ ಬೆಂಬಲವಾಗಿ ನಿಲ್ಲಲು ಸರ್ಕಾರ ತಯಾರಿರಬೇಕು.

ನಿಯಂತ್ರಣ ಕ್ರಮಗಳಲ್ಲಿ ಪಾರದರ್ಶಕತೆ ಮತ್ತು ಸ್ಪಷ್ಟತೆ ಇದ್ದರೆ ಮಾತ್ರ ಖಾಸಗಿಯವರು ಮುಂದೆ ಬರುತ್ತಾರೆ. ಪ್ರಕ್ರಿಯೆಗಳು ನೇರ ಹಾಗೂ ಮುಕ್ತವಾಗಿದ್ದರೆ ವಿದೇಶಿ ಕಂಪನಿಗಳು ಬಂಡವಾಳ ಹೂಡುತ್ತವೆ. ಅಪಘಾತಗಳು ಸಂಭವಿಸಿದಾಗ ಅಂತರರಾಷ್ಟ್ರೀಯ ಒಪ್ಪಂದಗಳಿಗೆ ಅನುಗುಣವಾಗಿ ಪೂರಕ ಪರಿಹಾರ ವ್ಯವಸ್ಥೆ ಇದ್ದರೆ ವಿದೇಶಿ ಬಂಡವಾಳ ಸುಲಭವಾಗಿ ಹರಿದುಬರುತ್ತದೆ. ವಿಪತ್ತಿಗೆ ಒಳಗಾದವರಿಗೆ ಶೀಘ್ರ ಪರಿಹಾರ ದೊರಕಬೇಕು. ಎಲ್ಲಕ್ಕಿಂತ ಮುಖ್ಯವಾಗಿ, ಪರಮಾಣು ವಿದ್ಯುತ್ ಉತ್ಪಾದನೆಯ ಬಗೆಗೆ ಜನರಲ್ಲಿ ಇರುವ ಭಯ, ಅನುಮಾನವನ್ನು ವಿಜ್ಞಾನಿಗಳು ನಿವಾರಿಸಬೇಕು.

ಚುರುಮುರಿ



ವಿರಾಮಸೌಧ!

• ಚಂದ್ರಕಾಂತ ವಡ್ಡು

'ನಮ್ಮ ಮನೆಯಲ್ಲಿ ನನ್ನದು ನಾಯಿಪಾಡು ಆಗಿದೆ...' ಎಂದು ಗೊಣಗುತ್ತಾ ಹೆಂಡತಿ ಒಲೆ ಮೇಲಿನ ಒಗ್ಗರಣೆಗೆ ತನ್ನ ದುಃಖ ಬೆರೆಸಿ ಚಟ್‌ಪಟ್ ಸಿಡಿಸಿದಳು.

'ಹಾಗೇಕೆ ಅಂದುಕೋಬೇಕು, ನಾಯಿಗಿರೋ ಮನ್ನಣೆ ಯಾರಿಗಿದೆ? ಅವುಗಳಿಗೆ ವಿಧಾನಸೌಧದ ಆವರಣದಲ್ಲೇ ಆಶ್ರಯ ತಾಣ ನಿರ್ಮಾಣ ಮಾಡ್ತಾರೆ' ತಿಂಗಳೇಶ ಪೇಪರ್ ಬಿಡಿಸಿ ಸುದ್ದಿ ತೋರಿಸಿದ.

'ಪಾಪ, ಅವುಗಳಿಗೆ ಅಷ್ಟೂ ಮಾಡದಿದ್ದರೆ ಹೇಗೆ? ವಿಧಾನಸೌಧ ಮತ್ತು ವಿಕಾಸಸೌಧವನ್ನು ರಾತ್ರಿ ಕಾಯೋದೇ ಬೀದಿನಾಯಿಗಳಂತೆ. ಹಾಗಂತ ಭದ್ರತಾ ಸಿಬ್ಬಂದಿಯೇ ಒಪ್ಪಿಕೊಂಡಿದ್ದಾರೆ'.

'ಇದು ಭದ್ರತಾ ಸಿಬ್ಬಂದಿ ತಮ್ಮ ಕೆಲಸ ಕಡಿಮೆ ಮಾಡಿಕೊಳ್ಳಲು ಹೇಳಿದ ಮಾತಲ್ಲ. ಬೀದಿನಾಯಿಗಳ ಹಾವಳಿ ತಪ್ಪಿಸಲು ನೇಮಕಗೊಂಡ ತಜ್ಞರ ಸಮಿತಿಯೇ ಅವುಗಳನ್ನು ಅಲ್ಲೇ ಉಳಿಸಿಕೊಳ್ಳಬೇಕೆಂದು ವರದಿ ಕೊಟ್ಟಿದೆ'.

'ಸರ್ಕಾರಕ್ಕೆ ಜಾತಿ ಜನಗಣತಿ ವರದಿಗಿಂತ ನಾಯಿ ಹಾವಳಿ ತಜ್ಞರ ವರದಿಯೇ ಮುಖ್ಯ, ತಕ್ಷಣ ಜಾರಿಗೆ ತರುತ್ತದೆ. ವಿಧಾನಸೌಧ, ವಿಕಾಸಸೌಧದ ಪಕ್ಕದಲ್ಲಿ ಬೀದಿನಾಯಿಗಳಿಗಾಗಿ 'ವಿರಾಮಸೌಧ' ನಿರ್ಮಿಸಿದರೂ ಅಚ್ಚರಿ ಪಡಬೇಕಿಲ್ಲ!'

'ಆವರಣದಲ್ಲಿನ ಇಲಿಗಳನ್ನು ಹಿಡಿಯಲು 8 ಲಕ್ಷ ರೂಪಾಯಿ ಟೆಂಡರ್ ಬೇರೆ ಕೊಡಲಾಗಿದೆ. ಒಂದಿಷ್ಟು ಬೆಕ್ಕುಗಳನ್ನು ಸಾಕಿದ್ದರೆ ಸಾಕಾಗುತ್ತಿರಲಿಲ್ಲವೇ?'

'ಸಾಕಬಹುದಿತ್ತು... ಆದರೆ ವಿಧಾನಸೌಧದ ಆವರಣದಲ್ಲಿ ವಾಸವಿರುವ ಇಲಿ, ಬೆಕ್ಕು ಮತ್ತು ನಾಯಿಗಳು ರಾಜಕಾರಣಿಗಳನ್ನು ಅನುಕರಿಸಿ ಪರಸ್ಪರ ಹೊಂದಾಣಿಕೆ ಮಾಡಿಕೊಂಡರೆ ಕಷ್ಟ'.

'ಅದನ್ನು ವಿರೋಧಿಸಲು ಅವುಗಳಲ್ಲೇ ಇಲಿ, ಬೆಕ್ಕು ಹುಟ್ಟಿಕೊಳ್ಳುತ್ತವೆ, ನಾವೇಕೆ ತಲೆಕೆಡಿಸಿಕೊಳ್ಳೋದು. ವಿಧಾನಸೌಧ ಮತ್ತು ವಿಕಾಸಸೌಧದ ಆವರಣದ ಭದ್ರತೆ ಹೇಗೋ ಆಗುತ್ತದೆ. ಕಟ್ಟಡದ ಒಳಗೆ ಸೇರಿಕೊಂಡಿರುವ ಹೆಗ್ಗಣಗಳ ಹಾವಳಿಗೇನು ಮಾಡೋದು?'

'ಹೆಗ್ಗಣಪ್ಪನ ನೇತೃತ್ವದಲ್ಲಿ ಆಯೋಗ ರಚಿಸೋದು, ಅಧಿಕಾರಾವಧಿ ಮುಗಿಸೋದು, ಅಷ್ಟೇ'.


ದಿನದ ಟ್ವೀಟ್

ಪರಿಸರ ಸಮತೋಲನ: ಮಹತ್ವ ಅರಿಯೋಣ

ಕೊಪ್ಪಳ ಜಿಲ್ಲೆಯ ಬಂಕಾಪುರದಲ್ಲಿರುವ ತೋಳ ವನ್ಯಜೀವಿಧಾಮದಲ್ಲಿ 8 ತೋಳದ ಮರಿಗಳು ಜನ್ಮತಾಳುವುದರೊಂದಿಗೆ ವನ್ಯಜೀವಿ ಸಂರಕ್ಷಣೆಯಲ್ಲಿ ಹೊಸ ಅಧ್ಯಾಯವೊಂದು ಆರಂಭವಾಗಿದೆ. ಇದರಿಂದ, ಪರಿಸರ ಸಮತೋಲನ ಕಾಪಾಡುವಲ್ಲಿ ಪ್ರಮುಖ ಪಾತ್ರ ವಹಿಸುವ ಇಂಡಿಯನ್ ಗ್ರೇ ವುಲ್ಫ್ ಪ್ರಭೇದದ ತೋಳದ ವಿಷಯದಲ್ಲಿ ಮಹತ್ವದ ವಿಜಯ ಸಾಧಿಸಿದಂತೆ ಆಗಿದೆ...

ಕರ್ನಾಟಕ ವೆದರ್

ಕಿಡಿನುಡಿ



ಗಾಜಾವನ್ನು 'ಸ್ವಾಧೀನಪಡಿಸಿಕೊಳ್ಳುವ', 'ಪುನರ್‌ನಿರ್ಮಿಸುವ' ಮತ್ತು 'ತಮ್ಮದಾಗಿಸಿಕೊಳ್ಳುವ' ಟ್ರಂಪ್ ಅವರ ಅಕ್ರಮ, ಅನೈತಿಕ ಹಾಗೂ ಅಪಾಯಕಾರಿಯಾದ ಘೋಷಣೆಗೆ ಹಲವಾರು ರಾಷ್ಟ್ರಗಳು ಆಕ್ಷೇಪ ವ್ಯಕ್ತಪಡಿಸಿವೆ. ಭಾರತ ಸರ್ಕಾರ ಮಾತ್ರ ಮೌನವಾಗಿದೆ. ಯಾಕೆ?

ಸುಧೀಂದ್ರ ಕುಲಕರ್ಣಿ, ಲೇಖಕ, ರಾಜಕೀಯ ವಿಶ್ಲೇಷಕ

25 ವರ್ಷಗಳ ಹಿಂದೆ

ಮಂಗಳವಾರ, 8-2-2000

• **'ವಾಟರ್': ಎರಡು ವಾರ ಚಿತ್ರೀಕರಣ ನಿಷೇಧಕ್ಕೆ ಆದೇಶ**

ವಾರಾಣಸಿ, ಫೆ. 7 (ಪಿಟಿಐ)– ಪವಿತ್ರ ಯಾತ್ರಾ ಸ್ಥಳದಲ್ಲಿ ಪರಿಸ್ಥಿತಿ ದಿನೇದಿನೇ ಹದಗೆಡುತ್ತಿರುವ ಹಿನ್ನೆಲೆಯಲ್ಲಿ ದೀಪಾ ಮೆಹ್ತಾ ಅವರ ವಿವಾದಾತ್ಮಕ 'ವಾಟರ್' ಚಿತ್ರೀಕರಣ ವನ್ನು ಎರಡು ವಾರಗಳ ಮಟ್ಟಿಗೆ ನಿಷೇಧಿಸಿ ಉತ್ತರಪ್ರದೇಶ ಸರ್ಕಾರ ಆದೇಶ ಹೊರಡಿಸಿದೆ. ಇದರೊಂದಿಗೆ 'ವಾಟರ್' ವಿವಾದ ಹೊಸ ತಿರುವು ಪಡೆದುಕೊಂಡಿದೆ.

ಜಿಲ್ಲಾ ನ್ಯಾಯಾಧೀಶ ಅಲೋಕ್ ಕುಮಾರ್ ಅವರು ಆ ಆದೇಶದ ಪ್ರತಿಯನ್ನು ಸಂಜೆ ಮೆಹ್ತಾ ಅವರಿಗೆ ನೀಡಿದರು ಎಂದು ರಾಜ್ಯ ಗೃಹ ಕಾರ್ಯದರ್ಶಿ ವಿ.ಕೆ.ಮಿತ್ತಲ್ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಈ ತಿಂಗಳ 22ರ ವೇಳೆಗೆ ಪರಿಸ್ಥಿತಿ ಸುಧಾರಿಸಿದರೆ ಚಿತ್ರೀಕರಣಕ್ಕೆ ಅವಕಾಶ ನೀಡುವ ಬಗ್ಗೆ ಯೋಚಿಸಲಾಗುವುದು ಎಂದು ಅವರು ಹೇಳಿದರು.

'ನಿಷೇಧದ ಆದೇಶದಿಂದ ನನಗೆ ತೀವ್ರ ಆಘಾತವಾಗಿದೆ' ಎಂದು ಮೆಹ್ತಾ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದಾರೆ. ಈ ಆದೇಶದ ಬಗ್ಗೆ ಮೆಹ್ತಾ ಅವರು ಕಾನೂನು ತಜ್ಞರ ಸಲಹೆ ಪಡೆಯುತ್ತಿದ್ದಾರೆ ಎಂದು ಚಿತ್ರತಂಡದ ಸದಸ್ಯರೊಬ್ಬರು ಹೇಳಿದ್ದಾರೆ.

• **ಕಂಪ್ಯೂಟರೀಕರಣ: ಈಗ ಕೋರ್ಟ್ ಸರದಿ**

ಬೆಂಗಳೂರು, ಫೆ. 7– ರಾಜ್ಯದ 180 ಸ್ಥಳಗಳಲ್ಲಿರುವ ಎಲ್ಲಾ 539 ಕೋರ್ಟ್‌ಗಳನ್ನು ಮುಂಬರುವ ಮಾರ್ಚ್ 31ರ ಒಳಗೆ ಕಂಪ್ಯೂಟರೀಕರಣಗೊಳಿಸಲು ಕರ್ನಾಟಕ ಹೈಕೋರ್ಟ್ ಉದ್ದೇಶಿಸಿದೆ.

ಕಂಪ್ಯೂಟರ್‌ನ ಇಂಟರ್‌ನೆಟ್ ಜಾಲಕ್ಕೆ ಮಾಹಿತಿಯನ್ನು ಬೆಂಗಳೂರು ಅಥವಾ ಆಯಾ ಜಿಲ್ಲಾ ಕೇಂದ್ರಗಳ ಮೂಲಕವೇ ಒದಗಿಸಬೇಕೇ ಎಂಬುದರ ಬಗ್ಗೆ ಹೈಕೋರ್ಟ್ ಇನ್ನೂ ಅಂತಿಮ ತೀರ್ಮಾನ ಕೈಗೊಳ್ಳಬೇಕಿದೆ. ಮೊಕದ್ದಮೆ ದಾಖಲಾದ ದಿನದಂದು ಅದು ಇತ್ಯರ್ಥವಾಗುವ ಅವಧಿಯ ತನಕ ವಿವಿಧ ಹಂತಗಳ ಮಾಹಿತಿಯನ್ನು ಇಂಟರ್‌ನೆಟ್ ಮೂಲಕ ಪಡೆಯಬಹುದಾಗಿದೆ.

50 ವರ್ಷಗಳ ಹಿಂದೆ

ಶನಿವಾರ, 8-2-1975

• **ಸೊಳ್ಳೆ: ಮುಷ್ಕರಕ್ಕೆ ಮೂಲ?**

ಬೆಂಗಳೂರು, ಫೆ. 7– ಯಃಕಶ್ಚಿತ್ ಸೊಳ್ಳೆ ವಿದ್ಯಾರ್ಥಿಗಳ ಮುಷ್ಕರಕ್ಕೆ ಕಾರಣವಾಗಬಲ್ಲದೆ? ಆಗಬಹುದೆಂದು ನಗರದ ಕಾಲೇಜಿನ ಪ್ರಿನ್ಸಿಪಾಲರೊಬ್ಬರಿಗೆ ನಿಜವಾಗಿಯೂ ಚಿಂತೆ.

ಆ ಪ್ರಿನ್ಸಿಪಾಲರು ತಮ್ಮ ಚಿಂತೆಯನ್ನು ನಗರಸಭೆಯ ಸಂಬಂಧಪಟ್ಟ ಅಧಿಕಾರಿಯ ಮುಂದೆ ತೋಡಿಕೊಂಡು ಬಿಟ್ಟಿದ್ದಾರೆ.

ಹನುಮಂತ ನಗರದ ಪೀಪಲ್ಸ್ ಎಜುಕೇಷನ್ ಸೊಸೈಟಿಯ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ರಾತ್ರಿ ವೇಳೆ ಪಾಠ ಹೇಳಿಕೊಡುವ ವ್ಯವಸ್ಥೆಯುಂಟು. ಇಡೀ ತರಗತಿಗೆ ಸೊಳ್ಳೆ ಪರದೆ ಕಟ್ಟುವಂತಿಲ್ಲ, ವಿದ್ಯಾರ್ಥಿಗಳು ಕ್ಷಣಕಾಲ ಕುಳಿತು ಪಾಠ ಕೇಳುವಂತಿಲ್ಲ. ಬೇಜಾರಾಗಿ ತಮ್ಮ ಪ್ರಿನ್ಸಿಪಾಲರಿಗೆ ಕಷ್ಟ ಹೇಳಿಕೊಂಡರು. ಪಾಪ, ಬಡ ಪ್ರಿನ್ಸಿಪಾಲರು ಇಂಥ ಸಮಸ್ಯೆಗೆ ಪರಿಹಾರ ದೊರಕಿಸಲು ಸಾಧ್ಯವಿಲ್ಲ ಅನ್ನುವ ಅರಿವು ವಿದ್ಯಾರ್ಥಿಗಳಿಗುಂಟು. ಸಂಬಂಧಪಟ್ಟ ಅಧಿಕಾರಿಗಳ ಗಮನ ಸೆಳೆಯಲು ಮುಷ್ಕರ ಹೂಡುವ ಮಾತೂ ಅಲ್ಲಲ್ಲಿ ಕೇಳಿಬಂತು.

ಸಂಗತ

ಜಾಗೃತಿ ಮೂಡಲಿ, ಅನಾಹುತ ತಪ್ಪಲಿ

ನಾಯಿ ಕಡಿತದ ಅಪಾಯಗಳನ್ನು ತಗ್ಗಿಸಲು ಜನರಲ್ಲಿ ಜಾಗೃತಿ ಮೂಡಿಸುವ ಕೆಲಸವೊಂದೇ ನಮ್ಮ ಮುಂದೆ ಇರುವ ಸದ್ಯದ ಮಾರ್ಗ

• ಡಾ. ಮುರಳೀಧರ ಕಿರಣಕೆರೆ

ಅದು ಶಾಲೆಯೊಂದರಲ್ಲಿ ಆಯೋಜನೆಗೊಂಡಿದ್ದ ಪ್ರಾಣಿಜನ್ಯ ರೋಗಗಳ ಬಗೆಗಿನ ಅರಿವು ಕಾರ್ಯಕ್ರಮ. 'ನಿಮ್ಮಲ್ಲಿ ಎಷ್ಟು ಮಕ್ಕಳು ನಾಯಿಯಿಂದ ಕಚ್ಚಿಸಿಕೊಂಡಿದ್ದೀರಿ? ಕೈ ಎತ್ತಿ' ಎಂದು ಕೇಳಿದಾಗ ಸಿಕ್ಕಿದ ಉತ್ತರ ನಿಜಕ್ಕೂ ಗಾಬರಿ ಮೂಡಿಸುವಂತಿತ್ತು! ಅಲ್ಲಿದ್ದ ಸುಮಾರು ಇನ್ನೂರು ಮಕ್ಕಳಲ್ಲಿ ಹೆಚ್ಚುಕಮ್ಮಿ ಅರ್ಧದಷ್ಟು ಎಳೆಯರಿಗೆ ನಾಯಿ ಕಡಿತದ ಅನುಭವ ಆಗಿತ್ತು. ಕೆಲವರು ಮನೆಯಲ್ಲಿ ಸಾಕಿದ ನಾಯಿಯಿಂದ ಕಚ್ಚಿಸಿಕೊಂಡಿದ್ದರೆ, ಮತ್ತೆ ಕೆಲವರಿಗೆ ಬೀದಿನಾಯಿ ಕಚ್ಚಿತ್ತು. ನಾಯಿ ಕಡಿತಕ್ಕೆ ಚುಚ್ಚುಮದ್ದು ತೆಗೆದುಕೊಳ್ಳದ ಮಕ್ಕಳ ಸಂಖ್ಯೆಯೂ ದೊಡ್ಡದಿತ್ತು!

ನಾಯಿ ಕಡಿತದ ಪ್ರಕರಣಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಏರಿಕೆಯಾಗುತ್ತಾ ಆತಂಕ ಹೆಚ್ಚಿಸುತ್ತಿದೆ. ಕರ್ನಾಟಕ ಸರ್ಕಾರವು 2022ರಲ್ಲಿ ಮಾರಕ ರೇಬಿಸ್ (ಹುಚ್ಚುನಾಯಿ) ರೋಗವನ್ನು 'ಘೋಷಿತ ಕಾಯಿಲೆ' ಪಟ್ಟಿಗೆ ಸೇರಿಸಿದೆ. ಹಾಗಾಗಿ, ಎಲ್ಲಾ ಸರ್ಕಾರಿ ಮತ್ತು ಖಾಸಗಿ ವೈದ್ಯಕೀಯ ಸಂಸ್ಥೆಗಳು ತಮ್ಮಲ್ಲಿ ದಾಖಲಾಗುವ ನಾಯಿ ಕಡಿತದ ಪ್ರಕರಣಗಳನ್ನು ಸರ್ಕಾರಕ್ಕೆ ವರದಿ ಮಾಡುವುದು ಕಡ್ಡಾಯ. ಆರೋಗ್ಯ ಇಲಾಖೆ ಮಾಹಿತಿಯಂತೆ, 2024ರಲ್ಲಿ ನಮ್ಮ ರಾಜ್ಯದಲ್ಲಿ ದಾಖಲಾದ ನಾಯಿ ಕಡಿತದ ಪ್ರಕರಣಗಳ ಸಂಖ್ಯೆ 3.57 ಲಕ್ಷ! 2023ರಲ್ಲಿ ಈ ಸಂಖ್ಯೆ ಸುಮಾರು 2.32 ಲಕ್ಷ. ಅಂದರೆ ಒಂದೇ ವರ್ಷದಲ್ಲಿ ಪ್ರಕರಣಗಳ ಸಂಖ್ಯೆಯಲ್ಲಿ 1.25 ಲಕ್ಷದಷ್ಟು ಹೆಚ್ಚಳವಾಗಿದೆ. ಇನ್ನು ನಾಯಿ ಕಡಿತವನ್ನು ನಿರ್ಲಕ್ಷಿಸಿ ವೈದ್ಯಕೀಯ ಸಲಹೆ ಪಡೆಯದವರ ಸಂಖ್ಯೆಯೂ ದೊಡ್ಡದಿದೆ.

ಬೀದಿನಾಯಿಗಳ ಸಂಖ್ಯೆ ಹೆಚ್ಚುತ್ತಿರುವುದರಿಂದಲೇ ನಾಯಿ ಕಡಿತದ ಪ್ರಕರಣಗಳೂ ಏರುತ್ತಿವೆ. ಭಾರತೀಯ ಪ್ರಾಣಿ ಕಲ್ಯಾಣ ಮಂಡಳಿ ರೂಪಿಸಿರುವ ನಿಯಮಗಳ ಅನುಸಾರವೇ ಸಂತಾನಶಕ್ತಿ ನಿಯಂತ್ರಣ ಕಾರ್ಯಕ್ರಮಗಳು ನಡೆಯಬೇಕಿದೆ. ಮಂಡಳಿಯಿಂದ ಅನುಮೋದನೆ ಪಡೆದಿರುವ ಪ್ರಾಣಿ ಕಲ್ಯಾಣ ಸಮಿತಿಗಳಷ್ಟೇ ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆ ನಡೆಸುವ ಅಧಿಕಾರ ಹೊಂದಿರುತ್ತವೆ. ಬೀದಿನಾಯಿಗಳನ್ನು ಹಿಡಿಯುವುದು, ಶಸ್ತ್ರಚಿಕಿತ್ಸೆ ನಡೆಸುವುದು, ಆ ನಂತರ ನಾಲ್ಕು ದಿನಗಳವರೆಗೆ ಅವುಗಳಿಗೆ ಔಷಧೋಪಚಾರ, ಆಹಾರ ನೀಡಿಕೆ, ರೇಬಿಸ್ ಲಸಿಕೆ ಹಾಕುವುದು, ನಂತರದಲ್ಲಿ ಅವುಗಳನ್ನು ಮೂಲ ಸ್ಥಳಕ್ಕೆ ಬಿಡುವುದು ಎಂದೆಲ್ಲಾ ಸೇರಿ ಸಂತಾನಶಕ್ತಿಹರಣ ಪ್ರಕ್ರಿಯೆಗೆ ಪ್ರತಿ ನಾಯಿಗೂ ಹತ್ತಿರ ಹತ್ತಿರ ₹ 2,000ದಷ್ಟು ವೆಚ್ಚವಾಗುತ್ತದೆ. ನೂರಾರು, ಸಾವಿರಾರು ಸಂಖ್ಯೆಯಲ್ಲಿರುವ ಬೀದಿನಾಯಿಗಳನ್ನು ಈ ಪ್ರಕ್ರಿಯೆಗೆ ಒಳಪಡಿಸುವಷ್ಟು ಆರ್ಥಿಕ ಸಂಪನ್ಮೂಲ ಸ್ಥಳೀಯ ಸಂಸ್ಥೆಗಳಲ್ಲಿ ಇಲ್ಲ. ಜೊತೆಗೆ, ನಿಯಮಬದ್ಧವಾಗಿ ಅನುಷ್ಠಾನ ಮಾಡಲು ಕುಶಲ ಮಾನವ ಸಂಪನ್ಮೂಲದ ಕೊರತೆಯೂ ಇದೆ. ಹಾಗಾಗಿ, ನಾಯಿಗಳ ಸಂಖ್ಯೆಯನ್ನು ನಿಯಂತ್ರಿಸುವುದು ಒಂದು ದೀರ್ಘಾವಧಿಯ ಯೋಜನೆಯೇ ಸರಿ.

ನಾಯಿ ಕಡಿತದ ಅಪಾಯಗಳನ್ನು ತಗ್ಗಿಸಲು ಜಾಗೃತಿ ಮೂಡಿಸುವುದೊಂದೇ ನಮ್ಮೆದುರಿಗಿರುವ ಸದ್ಯದ ಮಾರ್ಗ. ಕಡಿತಕ್ಕೆ ಒಳಗಾಗುವವರಲ್ಲಿ 15 ವರ್ಷದ ಒಳಗಿನ ಮಕ್ಕಳೇ ಹೆಚ್ಚು. ಪ್ರಾಣಿಯ ವರ್ತನೆಯ ಬಗ್ಗೆ ತಿಳಿವಳಿಕೆ ಇಲ್ಲದಿರುವುದೇ ಇದಕ್ಕೆ ಪ್ರಮುಖ ಕಾರಣ. ಆಹಾರ ತಿನ್ನುತ್ತಿರುವ ನಾಯಿಗೆ ಅಡಚಣೆ ಮಾಡಿದಾಗ, ಮರಿ ಹಾಕಿದ ನಾಯಿಯ ಹತ್ತಿರ ಹೋದಾಗ, ಹಿಂಸೆ ಮಾಡಿದಾಗ, ಚಿಕಿತ್ಸೆ ನೀಡುವಾಗ, ಹಿಂಡಿನಲ್ಲಿರುವ ನಾಯಿಗಳನ್ನು ಕೆಣಕಿದಾಗ, ಅವು ಸಂತಾನಾಭಿವೃದ್ಧಿ ಕ್ರಿಯೆಯಲ್ಲಿ ತೊಡಗಿದ್ದಾಗ ತೊಂದರೆ ಮಾಡಿದರೆ ನಾಯಿಗಳು ಕೆರಳಿ ಕಚ್ಚಬಹುದು. ಕೆಲವು ನಾಯಿಗಳು ಸ್ವಭಾವತಃ ಆಕ್ರಮಣಶೀಲ ಆಗಿರುತ್ತವೆ. ಚಿಕ್ಕ ಮಗುವನ್ನು ಒಂಟಿಯಾಗಿ ನಾಯಿಯ ಜೊತೆ ಬಿಡಲೇಬಾರದು. ಎಳೆಯ ಮಕ್ಕಳು ನಾಯಿಗಳಿಗೆ ಬೇಟೆಪ್ರಾಣಿಯಂತೆ ಕಾಣಿಸಿ ಅವು ಆಕ್ರಮಣ ಮಾಡುವ ಸಂಭವ ಇರುತ್ತದೆ!



ನಾಯಿಯ ಹಿಂಡು ದಾಳಿ ಮಾಡಿದರೆ ಓಡಬಾರದು. ಕೈಯಲ್ಲಿರುವ ವಸ್ತುವನ್ನು ಅತ್ತ, ಇತ್ತ ಬೀಸಿ ಅವುಗಳ ಗಮನ ಬೇರೆಡೆಗೆ ಹರಿಯುವಂತೆ ಮಾಡಿ ತಪ್ಪಿಸಿಕೊಳ್ಳುವ ಅವಕಾಶ ಹುಡುಕಬೇಕು. ಬೆರಳುಗಳು ನಾಯಿಯ ಬಾಯಿಗೆ ಸಿಗದ ರೀತಿಯಲ್ಲಿ ಕೈಗಳನ್ನು ಮುಷ್ಟಿ ಮಾಡಿಕೊಂಡು ಅಲುಗಾಡದೆ ನಿಲ್ಲುವುದರಿಂದ ಹೆಚ್ಚಿನ ಕಡಿತದಿಂದ ತಪ್ಪಿಸಿಕೊಳ್ಳಬಹುದು. ಇನ್ನು ಹಿಂಡು ದಾಳಿಯಲ್ಲಿ ಕಿವಿಗಳನ್ನು ಕೈಗಳಿಂದ ಮುಚ್ಚಿಕೊಂಡು ಮೊಣಕಾಲುಗಳ ಮಧ್ಯೆ ತಲೆ ಹುದುಗಿಸಿಕೊಂಡು ನೆಲದ ಮೇಲೆ ಚೆಂಡಿನ ರೀತಿಯಲ್ಲಿ ಸುರುಳಿಯಾಗಿ ಕೂರುವುದೂ ಗಂಭೀರ ಅನಾಹುತವನ್ನು ತಪ್ಪಿಸಬಲ್ಲದು.

ಅಕಸ್ಮಾತ್ ನಾಯಿಯಿಂದ ಕಚ್ಚಿಸಿಕೊಂಡರೆ ತಕ್ಷಣ ಗಾಯವನ್ನು ಚೆನ್ನಾಗಿ ತೊಳೆದುಕೊಳ್ಳುವುದು ಅತಿ ಮುಖ್ಯ. ಸೋಪು ಬಳಸಿ ಗಾಯವನ್ನು ಹದಿನೈದು ನಿಮಿಷಗಳವರೆಗೆ ಉಜ್ಜಿ ಉಜ್ಜಿ ತೊಳೆಯುವುದು ರೇಬಿಸ್ ವೈರಾಣುಗಳನ್ನು ನಾಶಗೊಳಿಸುವ ದಿಸೆಯಲ್ಲಿ ಸಹಕಾರಿ. ನಂತರದಲ್ಲಿ ಅಯೋಡಿನ್ ಟಿಂಕ್ಚರ್, ಸ್ಪಿರಿಟ್‌ನಂತಹ ನಂಜು ನಿವಾರಕ ದ್ರಾವಣ ಇಲ್ಲವೇ ಮುಲಾಮು ಹಚ್ಚಿಕೊಂಡು ಬೇಗನೆ ವೈದ್ಯಕೀಯ ಸಲಹೆ, ಚಿಕಿತ್ಸೆ ಪಡೆಯಬೇಕು. ಗಾಯಕ್ಕೆ ಸುಣ್ಣ, ಖಾರದ ಪುಡಿ, ನೀಲಿ ಪುಡಿ ಹಾಕುವುದು, ಹಸಿಮಣ್ಣು ಮೆತ್ತುವುದು ಖಂಡಿತವಾಗಿಯೂ ಅಪಾಯಕ್ಕೆ ಆಹ್ವಾನವಿತ್ತಂತೆ.

ಹೆಚ್ಚಿನ ಮಕ್ಕಳು ತಂದೆ-ತಾಯಿ ಬೈಯ್ಯುತ್ತಾರೆಂದು ನಾಯಿ ಕಚ್ಚಿದ ವಿಷಯವನ್ನು ಮರೆಮಾಚುತ್ತಾರೆ. ಕಚ್ಚಿದ ನಾಯಿಗೆ ಹುಚ್ಚಿದ್ದರೆ ಕಚ್ಚಿಸಿಕೊಂಡವರ ಜೀವಕ್ಕೂ ಅಪಾಯ. ಹೌದು, ಇಂತಹ ಸಂಭವನೀಯ ಅಪಾಯಗಳಿಂದ ಪಾರಾಗಲು ನಾಯಿಗಳ ವರ್ತನೆಯ ಬಗ್ಗೆ ಅರಿವು ಇರಬೇಕಾದದ್ದು ಅತ್ಯಗತ್ಯ.

ಲೇಖಕ: ಮುಖ್ಯ ಪಶುವೈದ್ಯಾಧಿಕಾರಿ
ಪಶು ಆಸ್ಪತ್ರೆ, ತೀರ್ಥಹಳ್ಳಿ

ವಾಚಕರ ವಾಣಿ

ಅಮಾನವೀಯ ನಡೆ ಖಂಡನಾರ್ಹ

ಅಮೆರಿಕವು ಭಾರತದ ಅಕ್ರಮ ವಲಸಿಗರನ್ನು ಸ್ವದೇಶಕ್ಕೆ ವಾಪಸ್ ಕಳುಹಿಸುವ ವಿಚಾರದಲ್ಲಿ ಅಮಾನವೀಯವಾಗಿ ನಡೆದುಕೊಂಡಿದೆ. ಅಮೆರಿಕದ ಸೇನಾಪಡೆ ವಿಮಾನದಲ್ಲಿ ಕರೆತಂದ ಈ ವ್ಯಕ್ತಿಗಳಿಗೆ ಕೈಕೋಳ ತೊಡಿಸಿ, ಕಾಲುಗಳಿಗೆ ಸರಪಳಿ ಬಿಗಿದಿರುವುದು ಸ್ಪಷ್ಟವಾಗಿ ಗೋಚರಿಸುವಂತಹ ವಿಡಿಯೊವನ್ನು ಅಮೆರಿಕದ ಗಡಿ ಕಾವಲುಪಡೆ ಮುಖ್ಯಸ್ಥರು ತಮ್ಮ ಎಕ್ಸ್ ಖಾತೆಯಲ್ಲಿ ಹಂಚಿಕೊಂಡಿದ್ದಾರೆ. ಇಂತಹ ಅಮಾನವೀಯ ನಡೆಯನ್ನು ಇಡೀ ಜಗತ್ತು ಖಂಡಿಸಬೇಕು. ಯಾವುದೇ ದೇಶದ ಅಕ್ರಮ ವಲಸಿಗರನ್ನು ಗುರುತಿಸಿ, ಅವರ ದೇಶಕ್ಕೆ ವಾಪಸ್ ಕಳುಹಿಸಿಕೊಡುವ ಪ್ರಕ್ರಿಯೆ ಹೊಸದೇನಲ್ಲ. ಯಾವುದೇ ದೇಶವು ತಮ್ಮ ಪ್ರಜೆಗಳು ಬೇರೆ ದೇಶಗಳಲ್ಲಿ ಅಕ್ರಮವಾಗಿ ನೆಲಸಿರುವುದು ಕಂಡುಬಂದರೆ ಅವರನ್ನು ವಾಪಸ್ ಕರೆಸಿಕೊಳ್ಳಬೇಕು. ಅದು ಪ್ರತಿ ದೇಶದ ಕರ್ತವ್ಯ ಕೂಡ ಆಗಿರುತ್ತದೆ. ಆದರೆ ಅಕ್ರಮ ವಲಸಿಗರನ್ನು ಹೀಗೆ ಹೀನಾಯವಾಗಿ ನಡೆಸಿಕೊಳ್ಳುವುದು ಒಪ್ಪುವಂತಹದ್ದಲ್ಲ.

ಪ್ರಧಾನಿ ನರೇಂದ್ರ ಮೋದಿ ಅವರು ಅಮೆರಿಕಕ್ಕೆ ಭೇಟಿ ನೀಡುವ ಸಂದರ್ಭದಲ್ಲಿ ಈ ವಿಷಯವನ್ನು ಪ್ರಸ್ತಾಪಿಸಬೇಕು. ಇಂತಹ ಕೆಟ್ಟ ನಡೆ ಮರುಕಳಿಸದಂತೆ ನೋಡಿಕೊಳ್ಳಲು ಅಲ್ಲಿನ ಅಧ್ಯಕ್ಷರಿಗೆ ಮನವರಿಕೆ ಮಾಡಿಕೊಡಬೇಕು. ಪಕ್ಷಭೇದ ಮರೆತು ಇದನ್ನು ಖಂಡಿಸಬೇಕಾದುದು ರಾಜಕೀಯ ಪಕ್ಷಗಳ ಕರ್ತವ್ಯವೂ ಹೌದು.

ಭೀಮಾಶಂಕರ ದಾದೆಲಿ ಹಳಿಸಗರ, ಶಹಾಪುರ

ಭಾಷಾ ಪ್ರೀತಿ ಮೆರೆದ ಮಹಾರಾಷ್ಟ್ರ

ಮಹಾರಾಷ್ಟ್ರದಲ್ಲಿ ಇನ್ನು ಮುಂದೆ ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ಸಿಬ್ಬಂದಿಯು ಮರಾಠಿ ಭಾಷೆಯಲ್ಲಿಯೇ ಮಾತನಾಡಬೇಕು ಮತ್ತು ಈ ನಿಬಂಧನೆಯನ್ನು ಉಲ್ಲಂಘಿಸುವವರ ವಿರುದ್ಧ ಶಿಸ್ತುಕ್ರಮ ತೆಗೆದುಕೊಳ್ಳಲಾಗುವುದು ಎಂದು ಅಲ್ಲಿನ ಸರ್ಕಾರ ಆದೇಶ ಹೊರಡಿಸಿರುವುದು ಶ್ಲಾಘನೀಯ. ಇದನ್ನು ಮಹಾರಾಷ್ಟ್ರದಾದ್ಯಂತ ವ್ಯಾಪಕವಾಗಿ ಸ್ವಾಗತಿಸಲಾಗಿದೆ. ಕರ್ನಾಟಕದಲ್ಲಿ ಇಂಗ್ಲಿಷ್ ಭಾಷೆಯ ದಬ್ಬಾಳಿಕೆ ಇರುವಂತೆ ಮಹಾರಾಷ್ಟ್ರದಲ್ಲಿ ಹಿಂದಿ ಭಾಷೆಯ ಬಳಕೆ ಹೆಚ್ಚಾಗುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಿ ಸರ್ಕಾರ ಈ ಕ್ರಮ ತೆಗೆದುಕೊಂಡಿದೆ ಎಂಬ ಮಾತಿದೆ.

ಕರ್ನಾಟಕದಲ್ಲಿ ಸರ್ಕಾರಿ ಮತ್ತು ಖಾಸಗಿ ಉದ್ಯೋಗಗಳಲ್ಲಿ ಸ್ಥಳೀಯರಿಗೆ ಮೀಸಲಾತಿ ಕಲ್ಪಿಸಬೇಕೆಂದು ಶಿಫಾರಸು ಮಾಡಿರುವ ಸರೋಜಿನಿ ಮಹಿಷಿ ವರದಿಯು ರಾಜಕೀಯ ಇಚ್ಛಾಶಕ್ತಿಯ ಕೊರತೆಯಿಂದಾಗಿ ಎಷ್ಟೋ ವರ್ಷಗಳಿಂದ ದೂಳು ತಿನ್ನುತ್ತಿದೆ. ಇದರಿಂದ, ಕನ್ನಡಿಗರಿಗೆ ಉದ್ಯೋಗದಲ್ಲಿ ಮೀಸಲಾತಿ ನೀಡಬೇಕೆಂಬ ಬೇಡಿಕೆ ಬೇಡಿಕೆಯಾಗಿಯೇ ಉಳಿದಿದೆ. ಹೀಗಿರುವಾಗ, ಮಹಾರಾಷ್ಟ್ರ ಸರ್ಕಾರವು ಸದ್ದಿಲ್ಲದೆ ಮರಾಠಿ ಭಾಷೆಯ ಪರವಾಗಿ ನಿಂತಿರುವುದು ಕರ್ನಾಟಕ ಸರ್ಕಾರದ ಕಣ್ಣು ತೆರೆಸಬೇಕಾಗಿದೆ.

ರಮಾನಂದ ಶರ್ಮಾ, ಬೆಂಗಳೂರು

ಅಕ್ರಮ ವಲಸೆ: ಕಠಿಣ ಕ್ರಮ ಅಗತ್ಯ

ಅಕ್ರಮ ವಲಸಿಗರ ವಿರುದ್ಧ ಅಮೆರಿಕ ತಳೆದಿರುವ ನಿಲುವು ಸರಿಯಾಗಿದೆ. ಅಕ್ರಮ ವಲಸಿಗರನ್ನು ರಾಜಕೀಯ ಹಿತಾಸಕ್ತಿಗಾಗಿ ಬಳಸಿಕೊಳ್ಳುವ ಪರಿಪಾಟ ನಿಲ್ಲಬೇಕು. ದೇಶದ ಒಟ್ಟಾರೆ ಹಿತದೃಷ್ಟಿಯಿಂದ ಪ್ರತಿ ರಾಷ್ಟ್ರವೂ ಈ ದಿಸೆಯಲ್ಲಿ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು.

ಅಂತರ್ಯುದ್ಧ, ಬಡತನ, ನಿರುದ್ಯೋಗದಂತಹ ಕಾರಣಗಳಿಂದ ಲಕ್ಷಾಂತರ ಜನ ಪ್ರತಿವರ್ಷ ವಲಸೆ ನೀತಿ– ನಿಯಮಗಳನ್ನು ಉಲ್ಲಂಘಿಸಿ, ಗಡಿ ದಾಟಿ ಇತರ ರಾಷ್ಟ್ರಗಳಿಗೆ ತೆರಳುವುದು ಸಾಮಾನ್ಯ. ಈ ದಿಸೆಯಲ್ಲಿ ಗಡಿ ಭದ್ರತಾ ಪಡೆಗಳು ಹೆಚ್ಚು ಜಾಗರೂಕವಾಗಿ ಇರಬೇಕಾಗಿದೆ. ಅಕ್ರಮ ವಲಸೆ ವಿರುದ್ಧದ ಅಮೆರಿಕದ ನೀತಿಯನ್ನು ಪ್ರಶ್ನಿಸುವುದರ ಬದಲು, ತಮ್ಮ ಜನರಿಗೆ ತಾಯ್ನಾಡಿನಲ್ಲಿ ನೆಮ್ಮದಿಯ ಜೀವನವನ್ನು ಕಲ್ಪಿಸಿಕೊಡುವತ್ತ ದೇಶಗಳು ಪ್ರಯತ್ನಿಸಬೇಕಿದೆ.

ಸುರೇಂದ್ರ ಪೈ, ಭಟ್ಕಳ

ಹೈಟೆಕ್ ಶೌಚಾಲಯ ಅಗತ್ಯವೇ?

ವಿಜಯಪುರ ಜಿಲ್ಲೆಯ ಆಯ್ದ ಸರ್ಕಾರಿ ಶಾಲೆಗಳು, ವಿಶ್ವವಿದ್ಯಾಲಯಗಳು, ಬಸ್ ನಿಲ್ದಾಣಗಳು, ತಹಶೀಲ್ದಾರ್ ಕಚೇರಿ ಆವರಣದಲ್ಲಿ ನವದೆಹಲಿಯ ಲಾಡ್ಲಿ ಫೌಂಡೇಷನ್ ಟ್ರಸ್ಟ್ ವತಿಯಿಂದ ಕೃತಕ ಬುದ್ಧಿಮತ್ತೆ (ಎ.ಐ) ತಂತ್ರಜ್ಞಾನ ಆಧಾರಿತ ಹೈಟೆಕ್ ಶೌಚಾಲಯಗಳನ್ನು ನಿರ್ಮಿಸುತ್ತಿರುವುದಾಗಿ ವರದಿಯಾಗಿದೆ (ಪ್ರ.ವಾ., ಫೆ. 7). ರಾಜ್ಯದ ಹೆಚ್ಚಿನ ಸರ್ಕಾರಿ ಶಾಲೆಗಳು ಅತಿ ಮುಖ್ಯ ಮೂಲ ಸೌಕರ್ಯವಾದ ಶೌಚಾಲಯ ವ್ಯವಸ್ಥೆಯಿಂದ ವಂಚಿತವಾಗಿವೆ. ಇನ್ನು ಕೆಲವೆಡೆ ಶೌಚಾಲಯಗಳಿದ್ದರೂ ಬಳಕೆಯಾಗುತ್ತಿಲ್ಲ. ನೀರಿನ ಕೊರತೆ, ನಿರ್ವಹಣೆ ಸರಿಯಾಗಿ ಇಲ್ಲದೇ ಇರುವಂತಹ ಅನೇಕ ಸಮಸ್ಯೆಗಳಿವೆ. ಕೆಲವು ಶಾಲೆಗಳಲ್ಲಿ ಬಾಲಕ- ಬಾಲಕಿಯರಿಗೆ ಪ್ರತ್ಯೇಕ ಶೌಚಾಲಯಗಳು ಇರುವುದಿಲ್ಲ. ಕೆಲವು ಬಾಲಕಿಯರು ಶಾಲೆ ತೊರೆಯುತ್ತಿರುವುದಕ್ಕೆ ಅವರಿಗಾಗಿ ಪ್ರತ್ಯೇಕ ಶೌಚಾಲಯ ಇಲ್ಲದಿರುವುದು ಸಹ ಒಂದು ಕಾರಣ. ಪರಿಸ್ಥಿತಿ ಹೀಗಿರುವಾಗ ಹೈಟೆಕ್ ಶೌಚಾಲಯಗಳ ಅಗತ್ಯವಿದೆಯೇ?

ತಲಾ ₹ 12 ಲಕ್ಷದಿಂದ ₹ 13 ಲಕ್ಷ ಖರ್ಚು ಮಾಡಿ ಹೈಟೆಕ್ ಶೌಚಾಲಯಗಳನ್ನು ನಿರ್ಮಿಸುವ ಬದಲು, ರಾಜ್ಯದ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಬಾಲಕ-ಬಾಲಕಿಯರಿಗೆ ಸಾಮಾನ್ಯವಾದ ಪ್ರತ್ಯೇಕ ಶೌಚಾಲಯಗಳನ್ನು ನಿರ್ಮಿಸುವುದು, ಅವುಗಳಿಗೆ ನಿರಂತರವಾಗಿ ನೀರು ಸರಬರಾಜು ವ್ಯವಸ್ಥೆ ಮಾಡುವುದು, ಸರಿಯಾದ ಬಾಗಿಲುಗಳನ್ನು ಅಳವಡಿಸುವುದು, ಸಮರ್ಪಕ ನಿರ್ವಹಣೆಗೆ ಹಣ ವಿನಿಯೋಗಿಸುವುದು ಅತ್ಯಂತ ಸೂಕ್ತ. ಇನ್ನುಳಿದಂತೆ, ಬಸ್ ನಿಲ್ದಾಣಗಳಲ್ಲಿ ಸಹ ಈಗ ಇರುವ ಶೌಚಾಲಯಗಳನ್ನು ಸ್ವಚ್ಛವಾಗಿ, ಸಮರ್ಪಕವಾಗಿ ನಿರ್ವಹಿಸಲು ಸಾಧ್ಯವಾದರೆ ಅದರಿಂದ ಪ್ರಯಾಣಿಕರಿಗೆ ಎಷ್ಟೋ ಅನುಕೂಲ ಮಾಡಿದಂತೆ ಆಗುತ್ತದೆ.

ಕೆ.ಪ್ರಭಾಕರ ರಾಜು, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಹೈಕೋರ್ಟ್‌ಗಳ ನ್ಯಾಯಮೂರ್ತಿ ಹುದ್ದೆಗೆ ನಿವೃತ್ತ ನ್ಯಾಯಮೂರ್ತಿಗಳ ನೇಮಕ ನಿರ್ಣಯ ಸರಿಯೇ?

ತ್ವರಿತ ನ್ಯಾಯದಾನಕ್ಕಾಗಿ ನೇಮಕಾತಿ ಅನಿವಾರ್ಯ





ತ್ವರಿತ ನ್ಯಾಯದಾನವನ್ನು, ನಮ್ಮ ಸಂವಿಧಾನದ ಮೂಲ ಸ್ವರೂಪದ ಲಕ್ಷಣವಾಗಿ ಅಂದರೆ, **basic feature** ಆಗಿ ಪರಿಗಣಿಸಬೇಕಾಗಿದೆ. ಹಾಗಾದರೆ, ಇದಕ್ಕೆಲ್ಲಾ ಏನು ಮಾಡಬೇಕೆಂಬ ಪ್ರಶ್ನೆ ಕರಗುವುದೇ ಇಲ್ಲ. ಈ ದಿಸೆಯಲ್ಲಿ ಡಾ.ಉಪೇಂದ್ರ ಬಕ್ಷಿ, ಎನ್.ಆರ್.ಮಾಧವ ಮೆನನ್, ತೆಹಮತನ್ ಆರ್. ಅಂಧ್ಯಾರುಜಿನ, ಪ್ರೊ.ಪಿ.ಕೆ.ತ್ರಿಪಾಠಿ ಅವರಂತಹ ಕಾನೂನು ಪ್ರಭೃತಿಗಳು ಕೊಟ್ಟ ಸಲಹೆಗಳು ಅನೂಚಾನವಾಗಿ ಜಾರಿಯಾಗಿಲ್ಲ. ಜಾರಿ ಮಾಡುವ ಇಚ್ಛಾಶಕ್ತಿ ಸಾಂಸ್ಥಿಕವಾಗಿ ಕ್ಷೀಣಿಸುತ್ತಿದೆ. ಇದು ವಿಷಾದನೀಯ

ಪ್ರಜಾವಾಣಿ ಚರ್ಚೆ

● ನ್ಯಾ. ಕೃಷ್ಣ ಎಸ್.ದೀಕ್ಷಿತ್

ಶೀಘ್ರ ನ್ಯಾಯದಾನ ಶಿಷ್ಟ ಸಮಾಜದ ಸಾತ್ವಿಕ ಅಭಿಲಾಷೆ. ನ್ಯಾಯಿಕ ಪ್ರಕ್ರಿಯೆ ವಿಳಂಬವಾಗಬಾರದು ಎಂಬ ಕೂಗು ಇತಿಹಾಸದುದ್ದಕ್ಕೂ ಎಲ್ಲ ರಾಷ್ಟ್ರಗಳಲ್ಲಿ ಇದ್ದದ್ದೇ.

ಕ್ರಿ.ಶ 1215ರ ಮೊದಲನೇ ಮ್ಯಾಗ್ನಕಾರ್ಟದ ಒಂದು ಉಕ್ತಿ ಹೀಗಿದೆ:– 'ನಾವು ಯಾರಿಗೂ ನ್ಯಾಯದಾನವನ್ನು ನಿರಾಕರಿಸುವುದಿಲ್ಲ, ಮಾರುವುದಿಲ್ಲ ಮತ್ತು ವಿಳಂಬಿಸುವುದೂ ಇಲ್ಲ'. ಇದು 800 ವರ್ಷಕ್ಕೂ ಹಿಂದೆ ಪ್ರತಿಷ್ಠಿತ ಜಹಗೀರುದಾರರು ಅಂದಿನ ಇಂಗ್ಲಿಷ್ ರಾಜನಿಗೆ ಹೆದರಿಸಿ ಪಡೆದ ವಾಗ್ದಾನ. ಅಂದು ಕೂಡಾ ನ್ಯಾಯ ಪ್ರಕ್ರಿಯೆಯಲ್ಲಿ ವಿಳಂಬವಾಗುತ್ತಿತ್ತು, ಜನರು ಬೇಸತ್ತಿದ್ದರು ಎಂಬುದಕ್ಕೆ ಇದು ಮುಕ್ತ ಸಾಕ್ಷಿ. ತದನಂತರದಲ್ಲಿ Royal Commission on Legal Reforms ಆಯೋಗಗಳೂ ನ್ಯಾಯಿಕ ಪ್ರಕ್ರಿಯೆಯಲ್ಲಿ ಉಂಟಾಗುವ ವಿಳಂಬದ ಬಗ್ಗೆ ಬೆಳಕು ಚೆಲ್ಲಿವೆ.

ಫ್ರೆಂಚ್ ರಾಜಕೀಯ ವ್ಯವಸ್ಥೆಯಲ್ಲಿ ನ್ಯಾಯದಾನ ವಿಳಂಬಿತವಾಗದಂತೆ ನೆಪೋಲಿಯನ್ ಅನೇಕ ನಿಯಮಗಳನ್ನು ರೂಪಿಸಿದ್ದ. ಇದೇ ತರಹ ಯುರೋಪಿನ ಇತರ ದೇಶಗಳೂ ಕಾನೂನು ಮಾಡಿದ್ದವು. ವಿಳಂಬಿತ ಹಾಗೂ ಸಂಕೀರ್ಣ ನ್ಯಾಯ ಪ್ರಕ್ರಿಯೆ ಅಮೆರಿಕ ಮತ್ತು ಆಸ್ಟ್ರೇಲಿಯಾದಂತಹ ರಾಷ್ಟ್ರಗಳಿಗೂ ತಲೆನೋವಾಗಿತ್ತು. ಆಸ್ಟ್ರೇಲಿಯ ಸುಪ್ರೀಂ ಕೋರ್ಟ್‌ನ ನ್ಯಾ.ಮೈಕೆಲ್ ಕರ್ಬಿ ಕರ್ನಾಟಕ ಹೈಕೋರ್ಟ್‌ಗೆ ಬಂದಿದ್ದರು. ನಾನು ಅವರಿಗೆ, 'ನಿಮ್ಮ ನ್ಯಾಯ ವ್ಯವಸ್ಥೆಯಲ್ಲಿ ಶೀಘ್ರ ನ್ಯಾಯದಾನವಾಗುತ್ತದೆಯೇ' ಎಂದು ಕೇಳಿದ್ದೆ. ಅದಕ್ಕವರು, 'ಅದು ಹೇಗೆ ಸಾಧ್ಯ' ಎಂದು ನಗು ಚೆಲ್ಲಿದ್ದರು.

ಅಮೆರಿಕದ ಸುಪ್ರೀಂ ಕೋರ್ಟ್ ಬಾರ್ಕರ್ ವಿಂಗೋ ಎಂಬ ಪ್ರಕರಣದಲ್ಲಿ, 'ಶೀಘ್ರ ನ್ಯಾಯ ಸಾಂವಿಧಾನಿಕ ಹಕ್ಕು' ಎಂದು ಘೋಷಿಸಿತು. ಈ ಹಿನ್ನೆಲೆಯಲ್ಲೇ Speedy Trail Act-1974 ಜಾರಿಯಾಗುವ ಮೂಲಕ ಅಪರಾಧಿಕ ಪ್ರಕರಣಗಳಲ್ಲಿ ಶೀಘ್ರ ವಿಲೇವಾರಿಗೆ ಅನುವಾಯಿತು. ಡೊನಾಲ್ಡ್ ಟ್ರಂಪ್ ಅವರ ನಿಕಟಪೂರ್ವ ಚುನಾವಣಾ ಮೊಕದ್ದಮೆಯಲ್ಲಿ ಉಂಟಾದ ವಿಳಂಬಕ್ಕೆ ಅಲ್ಲಿಯ ವಕೀಲರ ಸಂಘಗಳು ಮುನಿಸಿಕೊಂಡಿದ್ದವು.

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು 2024ರ ಸೆಪ್ಟೆಂಬರ್‌ನಲ್ಲಿ ಬಹಿರಂಗವಾಗಿ ನೀಡಿರುವ ಅಧಿಕೃತ ಅಂಕಿ ಅಂಶಗಳ ಪ್ರಕಾರ, ಎಲ್ಲಾ ಹೈಕೋರ್ಟ್‌ಗಳಲ್ಲಿ ಒಟ್ಟಾಗಿ 30 ವರ್ಷಗಳಿಂದ ಬಾಕಿ ಇರುವ ಮೊಕದ್ದಮೆಗಳ ಸಂಖ್ಯೆ 62 ಸಾವಿರ. ಜಮಾವಣೆಗೊಂಡು ಬಾಕಿ ಇರುವ ಮೊಕದ್ದಮೆಗಳ ಸಂಖ್ಯೆ 60 ಲಕ್ಷ. ಅವುಗಳಲ್ಲಿ ಸುಮಾರು 42.5 ಲಕ್ಷ ದಿವಾಣಿ (ಸಿವಿಲ್) ಸ್ವರೂಪದವು. ಉಳಿದವು ಅಪರಾಧಿಕ. 'ನ್ಯಾಷನಲ್ ಜ್ಯುಡಿಷಿಯಲ್ ಗ್ರಿಡ್' ನೀಡಿರುವ ಅಂಕಿ ಅಂಶಗಳ ಪ್ರಕಾರ, 20 ವರ್ಷಗಳಿಗಿಂತ ಹಳೆಯ ಪ್ರಕರಣಗಳ ಸಂಖ್ಯೆ 2.45 ಲಕ್ಷ. ಹೈಕೋರ್ಟ್‌ಗಳಲ್ಲಿ 1,114 ಮಂಜೂರಾದ ನ್ಯಾಯಮೂರ್ತಿಗಳ ಹುದ್ದೆಗಳಲ್ಲಿ ಖಾಲಿ ಹುದ್ದೆಗಳ ಸಂಖ್ಯೆ 327. ಅಂದರೆ ಶೇ 34ರಷ್ಟು ನ್ಯಾಯಮೂರ್ತಿಗಳು ನೇಮಕಗೊಂಡಿಲ್ಲ. 'ನ್ಯಾಯಾಲಯಗಳಲ್ಲಿ ನ್ಯಾಯ ಪಡೆಯಲು ಬ್ರಹ್ಮನಷ್ಟು ಆಯುಸ್ಸು ಮತ್ತು ಕುಬೇರನಷ್ಟು ಐಶ್ವರ್ಯ ಬೇಕು' ಎಂಬ ಮಾತಿದೆ. ಇದು ನ್ಯಾಯಾಲಯಗಳ ಕ್ಷಮತಾಹೀನತೆಗೆ ಹಿಡಿವ ಕನ್ನಡಿ.

ವಿಳಂಬದ ಸಮಸ್ಯೆಯನ್ನು ತೊಡೆದುಹಾಕಲು ರಾಷ್ಟ್ರೀಯ ಹಾಗೂ ರಾಜ್ಯ ಕಾನೂನು ಆಯೋಗಗಳು ಕೆಲವು ಶಿಫಾರಸುಗಳನ್ನು ಮಾಡಿವೆ. ನ್ಯಾಯಮೂರ್ತಿಗಳ ತ್ವರಿತ ನೇಮಕಾತಿಗಾಗಿ ಸುಪ್ರೀಂ ಕೋರ್ಟ್ ಒಂದು ಡಜನ್ ತೀರ್ಪುಗಳನ್ನು ನೀಡಿದೆ. ಹಲವು ಸಾಂವಿಧಾನಿಕ ಸಂಸ್ಥೆಗಳು ಜೊತೆಗೂಡಿ ಈ ಪ್ರಕ್ರಿಯೆಯನ್ನು ಕೈಗೊಳ್ಳಬೇಕಾಗುವುದರಿಂದ ವಿಳಂಬವನ್ನು ತಗ್ಗಿಸುವುದು ಕಷ್ಟಸಾಧ್ಯ. ನ್ಯಾಯಾಲಯಗಳು ಸಮಾಜದ ನಿರೀಕ್ಷೆಗೆ ಸಮನಾಗಿ ಕೆಲಸ ಮಾಡುವಲ್ಲಿ ವಿಫಲವಾಗಿದ್ದರಿಂದ ಪರ್ಯಾಯ ನ್ಯಾಯಿಕ ಸಂಸ್ಥೆಗಳಾದ ಸಂಧಾನ, ರಾಜಿ ಮತ್ತು ಮಧ್ಯಸ್ಥಿಕೆ ಕಡೆ ಕಕ್ಷಿದಾರರು ದೌಡಾಯಿಸುತ್ತಿದ್ದಾರೆ. ಆದರೆ, ಆ ಸೌಲಭ್ಯ ಅಪರಾಧಿಕ ಪ್ರಕರಣಗಳಿಗೆ ಪೂರ್ಣವಾಗಿ ಲಭ್ಯವಿಲ್ಲ. ಹಾಗಾಗಿ, ವಿಚಾರಣಾಧೀನ ಆರೋಪಿಗಳು ಹಾಗೂ ಅಪೀಲು ಮಾಡಿರುವ ಕೈದಿಗಳು ಸಾವಿರ ಸಾವಿರ ಸಂಖ್ಯೆಯಲ್ಲಿ ಜೈಲು ಪಾಲಾಗಿದ್ದಾರೆ. ತ್ವರಿತ ನ್ಯಾಯದ ನಿರೀಕ್ಷೆ ಅವರ ಪಾಲಿಗೆ ಮರೀಚಿಕೆಯಾಗಿದೆ. ಇದು ಸಮಾಜದ ಸ್ವಾಸ್ಥ್ಯಕ್ಕೆ ಪೂರಕವಲ್ಲ.


ನಮ್ಮ ಸಂವಿಧಾನದ 224ಎ ವಿಧಿಯಡಿ ನಿವೃತ್ತ ನ್ಯಾಯಮೂರ್ತಿಗಳನ್ನು ಪುನರ್ ನೇಮಕ ಮಾಡಿಕೊಳ್ಳಲು ಅವಕಾಶವಿದೆ. ಈ ವಿಧಿ 1963ರ ತಿದ್ದುಪಡಿ. ಈ ತಿದ್ದುಪಡಿಯಾಗಿ 62 ವರ್ಷಗಳೇ ಕಳೆದಿವೆ. ಅದೇ ರೀತಿ, 124 (3)ನೇ ವಿಧಿಯ ಅಡಿ ಸುಪ್ರೀಂ ಕೋರ್ಟ್‌ಗೆ 'ಜ್ಯೂರಿಸ್ಟ್' ಅನ್ನು ನೇರವಾಗಿ ನೇಮಕ ಮಾಡಲು ಅವಕಾಶ ಕಲ್ಪಿಸಲಾಗಿದೆ. ಆದರೆ, ಈತನಕ ಈ ಎರಡೂ ವಿಧಿಗಳನ್ವಯ ಯಾವೊಬ್ಬರನ್ನೂ ನೇಮಕ ಮಾಡಿಲ್ಲ. ಈ ಹಿಂದೆ ಪ್ರೊ.ಉಪೇಂದ್ರ ಬಕ್ಷಿ ಹಾಗೂ ಡಾ.ನಾಗೇಂದ್ರ ಸಿಂಗ್ ಅವರನ್ನು ಜ್ಯೂರಿಸ್ಟ್‌ಗಳಾಗಿ ನೇಮಿಸುವ ಬಗ್ಗೆ ಸ್ವಲ್ಪ ಚರ್ಚೆಯಾಗಿತ್ತು. ಆದರೆ, ಅದು ಫಲ ಕೊಡಲಿಲ್ಲ. ಇದನ್ನು ನೋಡಿದರೆ, ಭರತಭೂಮಿಯಲ್ಲಿ ಅಂತಹ ಯಾವ ಅಭ್ಯರ್ಥಿಯೂ ಇಲ್ಲವೇ ಎಂಬ ಅಚ್ಚರಿ ಕಾಡುತ್ತದೆ.

ತ್ವರಿತ ನ್ಯಾಯದಾನವನ್ನು, ನಮ್ಮ ಸಂವಿಧಾನದ ಮೂಲ ಸ್ವರೂಪದ ಲಕ್ಷಣವಾಗಿ ಅಂದರೆ, basic feature ಆಗಿ ಪರಿಗಣಿಸಬೇಕಾಗಿದೆ. ಹಾಗಾದರೆ, ಇದಕ್ಕೆಲ್ಲಾ ಏನು ಮಾಡಬೇಕೆಂಬ ಪ್ರಶ್ನೆ ಕರಗುವುದೇ ಇಲ್ಲ. ಈ ದಿಸೆಯಲ್ಲಿ ಡಾ.ಉಪೇಂದ್ರ ಭಕ್ಷಿ, ಎನ್.ಆರ್. ಮಾಧವ ಮೆನನ್, ತೆಹಮತನ್ ಆರ್.ಅಂಧ್ಯಾರುಜಿನ, ಪ್ರೊ.ಪಿ.ಕೆ.ತ್ರಿಪಾಠಿ ಅವರಂತಹ ಕಾನೂನು ಪ್ರಭೃತಿಗಳು ಕೊಟ್ಟ ಸಲಹೆಗಳು ಅನೂಚಾನವಾಗಿ ಜಾರಿಯಾಗಿಲ್ಲ. ಜಾರಿ ಮಾಡುವ ಇಚ್ಛಾಶಕ್ತಿ ಸಾಂಸ್ಥಿಕವಾಗಿ ಕ್ಷೀಣಿಸುತ್ತಿದೆ. ಇದು ವಿಷಾದನೀಯ.

ಈ ಹಿನ್ನೆಲೆಯಲ್ಲೇ ಇತ್ತೀಚಿನ ಲೋಕ ಪ್ರಹರಿ ಮೊಕದ್ದಮೆಯಲ್ಲಿ ಆದ ನಿರ್ಣಯ ನಿಜಕ್ಕೂ ಸ್ವಾಗತಾರ್ಹ. ನಿವೃತ್ತ ನ್ಯಾಯಮೂರ್ತಿಗಳನ್ನು ಅಪರಾಧಿಕ ಪ್ರಕರಣಗಳ ವಿಲೇವಾರಿಗಾಗಿ ನೇಮಿಸುವುದು ಅನಿವಾರ್ಯ. ಇಂತಹ ನೇಮಕಾತಿ ಮಾಡುವಾಗ ಅಭ್ಯರ್ಥಿಯ ಪೂರ್ವಾಪರ, ಸಾಮರ್ಥ್ಯ ಹಾಗೂ ಆರೋಗ್ಯವನ್ನು ಗಮನಿಸುವುದು ಸಂಸ್ಥೆಗೆ ಹಿತಕರ. ಈ ಪ್ರಕ್ರಿಯೆ ಹಲವು ಷರತ್ತುಗಳಿಗೆ ಒಳಪಟ್ಟು ಪ್ರಾಯೋಗಿಕವಾಗಿಯಾದರೂ ಶೀಘ್ರ ಕಾರ್ಯಗತ ಆಗಬೇಕು. ಕಾಲಕ್ರಮೇಣ ಅದರ ಸಾಧಕ –ಬಾಧಕಗಳನ್ನು ಪರಿಗಣಿಸಲು ಆಗುತ್ತದೆ.

ಲೇಖಕರು: ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿ

ಹುದ್ದೆಗಳ ಭರ್ತಿ; ನೇರ ನೇಮಕವೇ ಸಮಂಜಸ



ಹಂಗಾಮಿ ನ್ಯಾಯಮೂರ್ತಿಗಳನ್ನು ನೇಮಕ ಮಾಡುವುದರಿಂದ ನೇರ ನೇಮಕಾತಿ ವಿಳಂಬವಾಗುತ್ತದೆ. ಹಂಗಾಮಿ ನ್ಯಾಯಮೂರ್ತಿಗಳು ಕೇವಲ ವಿಭಾಗೀಯ ಪೀಠದಲ್ಲಿ ಕಾರ್ಯನಿರ್ವಹಿಸುವುದರಿಂದ ಮೊಕದ್ದಮೆಗಳನ್ನು ಶೀಘ್ರಗತಿಯಲ್ಲಿ ತೀರ್ಮಾನಿಸಲು ಸಾಧ್ಯವಿಲ್ಲ. ಒಬ್ಬ ಹಿರಿಯ ನ್ಯಾಯಮೂರ್ತಿ ನಿವೃತ್ತಿ ಹೊಂದಿದ ನಂತರ ಕಿರಿಯ ನ್ಯಾಯಮೂರ್ತಿಗಳ ಜೊತೆ ಕುಳಿತು ವಿಭಾಗೀಯ ಪೀಠದಲ್ಲಿ ಮೊಕದ್ದಮೆಗಳನ್ನು ತೀರ್ಮಾನ ಮಾಡಲು ಮುಂದೆ ಬರುವರೇ ಎನ್ನುವುದು ಪ್ರಶ್ನಾರ್ಹ

● ಅಶೋಕ ಹಾರನಹಳ್ಳಿ

ಕಾರ್ಯಾಂಗ, ಶಾಸಕಾಂಗ ಹಾಗೂ ನ್ಯಾಯಾಂಗ, ಸಮಾಜದ ಅಭಿವೃದ್ಧಿಗೆ ಅತ್ಯಂತ ಅವಶ್ಯಕವಾದ ಸಂಸ್ಥೆಗಳು. ಶಾಸಕಾಂಗ ರಚನೆ ಮಾಡಿದ ಕಾನೂನುಗಳ ವಿಮರ್ಶೆಯ ಅಧಿಕಾರ ನ್ಯಾಯಾಂಗಕ್ಕಿದೆ. ಸಂವಿಧಾನದ ಆಶಯ ಪೂರೈಸುವಲ್ಲಿ ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್ ಮಹತ್ವದ ಪಾತ್ರ ವಹಿಸುತ್ತವೆ. ಈ ನ್ಯಾಯಾಲಯಗಳು ಶಾಸಕಾಂಗ ಮತ್ತು ಕಾರ್ಯಾಂಗದ ಅಧಿಕಾರ ವ್ಯಾಪ್ತಿಯ ನಿಷ್ಕರ್ಷೆ ಮಾಡಬಹುದು.

ಸಾರ್ವಜನಿಕರಿಗೆ ನ್ಯಾಯಾಂಗದ ಮೇಲೆ ವಿಶ್ವಾಸವಿದೆ. ಜನರು ನ್ಯಾಯಾಂಗದ ಮೇಲೆ ವಿಶ್ವಾಸ ಕಳೆದುಕೊಳ್ಳದ ರೀತಿಯಲ್ಲಿ ನ್ಯಾಯ ವಿತರಣೆ ಮಾಡುವ ಅವಶ್ಯಕತೆ ಇದೆ. ನ್ಯಾಯಾಲಯಗಳಲ್ಲಿ ದಿನೇ ದಿನೇ ದಾಖಲಾಗುವ ಮೊಕದ್ದಮೆಗಳ ಸಂಖ್ಯೆ ಹೆಚ್ಚುತ್ತಿದೆ. ನ್ಯಾಯಾಲಯಗಳಲ್ಲಿ ತೀರ್ಮಾನವಾಗುವ ಮೊಕದ್ದಮೆಗಳ ಸಂಖ್ಯೆಗಿಂತ ದಾಖಲಾಗುವ ಸಂಖ್ಯೆಗಳೇ ಹೆಚ್ಚಿದೆ. ಕಳೆದ ವರ್ಷದ ಕಾನೂನು ಇಲಾಖೆಯ ಅಂಕಿಅಂಶಗಳ ಪ್ರಕಾರ, ವಿವಿಧ ನ್ಯಾಯಾಲಯಗಳಲ್ಲಿ ಸುಮಾರು ಐದು ಕೋಟಿಗೂ ಹೆಚ್ಚು ಮೊಕದ್ದಮೆಗಳು ಬಾಕಿ ಇವೆ. ಜನವರಿ 2024ರ 'ನ್ಯೂಯಾರ್ಕ್ ಟೈಮ್ಸ್' ವರದಿಯ ಪ್ರಕಾರ, ಈ 5 ಕೋಟಿ ಮೊಕದ್ದಮೆಗಳು ಈಗಿನ ಸರಾಸರಿಯ ವೇಗದಲ್ಲೇ ತೀರ್ಮಾನವಾದರೆ ಈಗ ಬಾಕಿ ಉಳಿದಿರುವ ಪ್ರಕರಣಗಳನ್ನು ವಿಲೇವಾರಿ ಮಾಡಲು 300 ವರ್ಷಗಳು ಬೇಕಾಗುತ್ತವೆ.

ಹೈಕೋರ್ಟ್‌ಗಳಲ್ಲಿ ಬಾಕಿ ಇರುವ ಪ್ರಕರಣಗಳನ್ನು ತ್ವರಿತಗತಿಯಲ್ಲಿ ತೀರ್ಮಾನ ಮಾಡಲು ಪರಿಹಾರ ಕಂಡು ಹಿಡಿಯಬೇಕಾಗಿದೆ. ಅದಕ್ಕಾಗಿ ಬಾಕಿ ಇರುವ ನ್ಯಾಯಮೂರ್ತಿಗಳ ಹುದ್ದೆಗಳನ್ನು ಶೀಘ್ರವಾಗಿ ಭರ್ತಿ ಮಾಡಬೇಕಾಗಿದೆ. 2025ರ ಫೆಬ್ರುವರಿ 1ರಂದು ಕೇಂದ್ರ ಕಾನೂನು ಇಲಾಖೆ ಬಿಡುಗಡೆ ಮಾಡಿರುವ ಅಂಕಿಅಂಶಗಳ ಪ್ರಕಾರ, ಎಲ್ಲಾ ರಾಜ್ಯಗಳ ಹೈಕೋರ್ಟ್‌ಗಳಲ್ಲಿ ತೆರವಾಗಿರುವ ನ್ಯಾಯಮೂರ್ತಿಗಳ ಸಂಖ್ಯೆ 327 ಇದೆ. ಅಲಹಾಬಾದ್ (ಪ್ರಯಾಗರಾಜ್) ಹೈಕೋರ್ಟ್‌ನಲ್ಲಿ 81 ಮತ್ತು ಕರ್ನಾಟಕದ ಹೈಕೋರ್ಟ್‌ನಲ್ಲಿ 13 ಹುದ್ದೆಗಳು ಖಾಲಿ ಇವೆ.

ಖಾಲಿ ಇರುವ ನ್ಯಾಯಮೂರ್ತಿಗಳ ಹುದ್ದೆ ಭರ್ತಿ ಮಾಡದೆ ಇರುವುದೇ ನ್ಯಾಯ ವಿತರಣೆ ವಿಳಂಬಕ್ಕೆ ಮುಖ್ಯ ಕಾರಣ ಎಂದರೆ ತಪ್ಪಲ್ಲ. ಆದ್ದರಿಂದ, ಈ ನೇಮಕಾತಿಗಳು ತ್ವರಿತಗತಿಯಲ್ಲಿ ಆಗಬೇಕು. ಆಗಮಾತ್ರವೇ ಮೊಕದ್ದಮೆಗಳನ್ನು ಶೀಘ್ರವಾಗಿ ತೀರ್ಮಾನ ಮಾಡಲು ಅನುಕೂಲವಾಗುತ್ತದೆ. ಸಂವಿಧಾನದ 224 (ಎ) ವಿಧಿಯ ಪ್ರಕಾರ ಹಂಗಾಮಿ ನ್ಯಾಯಮೂರ್ತಿಗಳನ್ನು ಭರ್ತಿ ಮಾಡಿಕೊಳ್ಳಲು ಅವಕಾಶವೇನೋ ಇದೆ. ಆದರೆ, ಈ ಹಂಗಾಮಿ ನ್ಯಾಯಮೂರ್ತಿಗಳು ಉಳಿದ ಹಾಲಿ ನ್ಯಾಯಮೂರ್ತಿಗಳ ಹಾಗೆ ಅಧಿಕಾರ ಹೊಂದಿದ್ದರೂ ಹೈಕೋರ್ಟ್‌ನ ನ್ಯಾಯಮೂರ್ತಿಗಳೆಂದು ಪರಿಗಣಿಸಲು ಆಗುವುದಿಲ್ಲ.



ಹೈಕೋರ್ಟ್‌ಗಳಲ್ಲಿ ನ್ಯಾಯಮೂರ್ತಿಗಳ ಹುದ್ದೆಗೆ ಬದಲಾಗಿ ಹಂಗಾಮಿ ನ್ಯಾಯಮೂರ್ತಿಗಳನ್ನು ನೇಮಕ ಮಾಡುತ್ತಿರುವುದು ಅನೇಕ ವಲಯಗಳಲ್ಲಿ ಪ್ರಶ್ನೆಗೆ ಗ್ರಾಸವಾಗಿದೆ. ಸುಪ್ರೀಂ ಕೋರ್ಟ್ 2025ರ ಜನವರಿ 30ರಂದು ಲೋಕ ಪ್ರಹರಿ ಮೊಕದ್ದಮೆಯಲ್ಲಿ ಈ ಕುರಿತಂತೆ ಆದೇಶಿಸಿದೆ. ಆದರೆ, ನೇರ ನೇಮಕಾತಿ ಮಾಡದೆ ಹಂಗಾಮಿ ನ್ಯಾಯಮೂರ್ತಿಗಳನ್ನು ನೇಮಕ ಮಾಡುವುದು ಎಷ್ಟರಮಟ್ಟಿಗೆ ಸರಿ? ಇದರಿಂದ ಮೊಕದ್ದಮೆಗಳನ್ನು ಶೀಘ್ರವಾಗಿ ತೀರ್ಮಾನ ಮಾಡಲು ಸಾಧ್ಯವೇ? ನೇರ ನೇಮಕಾತಿಗೆ ಅರ್ಹ ಯುವ ವಕೀಲರನ್ನು ಪರಿಗಣಿಸದೆ, ವಿಳಂಬವಾಗಿರುವ ನೇರ ನೇಮಕಾತಿ ಪ್ರಕ್ರಿಯೆಗೆ ಪರಿಹಾರ ಕಂಡುಕೊಳ್ಳದೆ ನಿವೃತ್ತ ನ್ಯಾಯಮೂರ್ತಿಗಳನ್ನು ಹಂಗಾಮಿ ನ್ಯಾಯಮೂರ್ತಿಗಳನ್ನಾಗಿ ನೇಮಕ ಮಾಡುವ ಅವಶ್ಯಕತೆ ಏನಿದೆ? ಈ ಹಂಗಾಮಿ ನ್ಯಾಯಮೂರ್ತಿಗಳನ್ನು ನೇಮಕ ಮಾಡಿಕೊಳ್ಳಲು ಇರುವ ಮಾನದಂಡಗಳೇನು?

ಈ ಹಂಗಾಮಿ ನ್ಯಾಯಮೂರ್ತಿಗಳಿಗೆ ಯಾವುದೇ ಕೆಳ ನ್ಯಾಯಾಲಯಗಳ ಮೇಲೆ ಅಧಿಕಾರ ಇರುವುದಿಲ್ಲ ಮತ್ತು ಅವರು ಒಟ್ಟು ನ್ಯಾಯಮೂರ್ತಿಗಳ (ಫುಲ್ ಕೋರ್ಟ್ ಮೀಟಿಂಗ್) ಸಭೆಯಲ್ಲಿ ಭಾಗವಹಿಸುವಂತಿಲ್ಲ. ಒಬ್ಬ ಹಿರಿಯ ನ್ಯಾಯಮೂರ್ತಿ ನಿವೃತ್ತಿ ಹೊಂದಿದ ನಂತರ ಕಿರಿಯ ನ್ಯಾಯಮೂರ್ತಿಗಳ ಜೊತೆ ಕುಳಿತು ವಿಭಾಗೀಯ ಪೀಠದಲ್ಲಿ ಮೊಕದ್ದಮೆಗಳನ್ನು ತೀರ್ಮಾನ ಮಾಡಲು ಮುಂದೆ ಬರುವರೇ ಎನ್ನುವುದು ಪ್ರಶ್ನಾರ್ಹ.

ಹೈಕೋರ್ಟ್‌ಗಳು 2ರಿಂದ 5 ಹಂಗಾಮಿ ನ್ಯಾಯಮೂರ್ತಿಗಳನ್ನು ನೇಮಕ ಮಾಡುವ ಅವಕಾಶ ಹೊಂದಿವೆ. ಈ ಹಂಗಾಮಿ ನ್ಯಾಯಮೂರ್ತಿಗಳು ವಿಭಾಗೀಯ ಪೀಠದಲ್ಲಿ ಹಿರಿಯ ನ್ಯಾಯಮೂರ್ತಿಗಳ ಜೊತೆ ಕುಳಿತು ಮೊಕದ್ದಮೆಗಳನ್ನು ತೀರ್ಮಾನಿಸಬಹುದು. ನೇರ ನೇಮಕಾತಿ ಪ್ರಕ್ರಿಯೆ ಮುಗಿಸಿ ಎಲ್ಲಾ ಹುದ್ದೆಗಳಿಗೆ ನೇಮಕಗೊಂಡ ನಂತರ ಅವಶ್ಯಕತೆ ಇದ್ದಲ್ಲಿ ಹಂಗಾಮಿ ನ್ಯಾಯಮೂರ್ತಿಗಳನ್ನು ಭರ್ತಿ ಮಾಡಿಕೊಳ್ಳುವುದು ಸಮಂಜಸವಾಗಿರುತ್ತದೆ.

ಅಲ್ಲದೆ, ಈ ಹಂಗಾಮಿ ನ್ಯಾಯಮೂರ್ತಿಗಳನ್ನು ನೇಮಕ ಮಾಡಿಕೊಳ್ಳುವುದಕ್ಕೆ ಪ್ರಾಶಸ್ತ್ಯ ನೀಡುವುದರಿಂದ ನೇರ ನೇಮಕಾತಿ ಪ್ರಕ್ರಿಯೆ ವಿಳಂಬವಾಗುತ್ತದೆ. ಇದಲ್ಲದೆ ಈ ಹಂಗಾಮಿ ನ್ಯಾಯಮೂರ್ತಿಗಳು ಕೇವಲ ವಿಭಾಗೀಯ ಪೀಠದಲ್ಲಿ ಕಾರ್ಯನಿರ್ವಹಿಸುವುದರಿಂದ ಮೊಕದ್ದಮೆಗಳನ್ನು ಶೀಘ್ರಗತಿಯಲ್ಲಿ ತೀರ್ಮಾನಿಸಲು ಸಾಧ್ಯವಿಲ್ಲ. ಹೆಚ್ಚಿನ ಮೊಕದ್ದಮೆಗಳು ಏಕಸದಸ್ಯ ನ್ಯಾಯಪೀಠದ ಮುಂದೆಯೇ ಬರುವುದರಿಂದ ಈ ಹಂಗಾಮಿ ನ್ಯಾಯಮೂರ್ತಿಗಳಿಗೆ ಆ ಮೊಕದ್ದಮೆಗಳನ್ನು ತೀರ್ಮಾನ ಮಾಡುವ ಅಧಿಕಾರ ಇರುವುದಿಲ್ಲ. ಅತ್ಯುತ್ತಮವಾಗಿ ಕಾರ್ಯನಿರ್ವಹಣೆ ಮಾಡುವ ನ್ಯಾಯಮೂರ್ತಿಗಳು ಈ ರೀತಿ ಹಂಗಾಮಿ ನ್ಯಾಯಮೂರ್ತಿಗಳಾಗಿ ನೇಮಕಗೊಳ್ಳಲು ಇಚ್ಛಿಸುವುದೂ ಇಲ್ಲ.

ನೇರ ನೇಮಕಾತಿ ಮಾಡದೆ ಇರುವ ಕಾರಣ ಹಂಗಾಮಿ ನ್ಯಾಯಮೂರ್ತಿಗಳ ನೇಮಕಾತಿ ಮಾಡಬೇಕು ಎನ್ನುವ ವಾದದಲ್ಲಿ ಹುರುಳಿಲ್ಲ. ನೇರ ನೇಮಕಾತಿ ಮಾಡದೆ ಈ ರೀತಿ ಹಂಗಾಮಿ ನ್ಯಾಯಮೂರ್ತಿಗಳನ್ನು ನೇಮಕ ಮಾಡುವುದರಿಂದ ನ್ಯಾಯ ವಿತರಣೆಯಲ್ಲಿ ಹೆಚ್ಚಿನ ಪ್ರಗತಿ ಸಾಧ್ಯವಿಲ್ಲ. ಬದಲಾಗಿ, ಮಂಜೂರಾಗಿರುವ ನ್ಯಾಯಮೂರ್ತಿಗಳ ಹುದ್ದೆಗಳ ಸಂಖ್ಯೆಯನ್ನು ಹೆಚ್ಚಿಸಿ ಹಾಗೂ ಆ ಹುದ್ದೆಗಳಿಗೆ ಶೀಘ್ರವಾಗಿ ನೇಮಕಾತಿ ಮಾಡುವುದರಿಂದ ಬಾಕಿ ಇರುವ ಮೊಕದ್ದಮೆಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಲು ಸಾಧ್ಯ.

ಲೇಖಕರು: ಕರ್ನಾಟಕ ಹೈಕೋರ್ಟ್‌ನ ಪದಾಂಕಿತ ಹಿರಿಯ ವಕೀಲ


ನಾವು ನೋಡಿದ ಸಿನಿಮಾ

ಕುತೂಹಲಕಾರಿ ಅನಾಮಧೇಯ

ಅನಾಮಧೇಯ ಅಶೋಕ್ ಕುಮಾರ್

- **ನಿರ್ಮಾಣ:** ನಿರ್ಮಲಾ ಕುಮಾರ್, ರಮ್ಯ ಸಾಗರ್‌ಕುಮಾರ್, ಕಿಶೋರ್ ಕುಮಾರ್
- **ನಿರ್ದೇಶನ:** ಸಾಗರ್ ಕುಮಾರ್
- **ತಾರಾಗಣ:** ಕಿಶೋರ್ ಕುಮಾರ್, ಹರ್ಷಿಲ್ ಕೌಶಿಕ್, ಸುಧೀಂದ್ರನ್ ನಾಯರ್ ಮತ್ತಿತರರು

ಹಲವು ವರ್ಷಗಳ ಹಿಂದೆ ಕಾಲಿವುಡ್‌ನಲ್ಲಿ 'ವಿಕ್ರಂ ವೇದ' ಎಂಬ ಸಿನಿಮಾ ತೆರೆಕಂಡಿತ್ತು. ಶರಣಾದ ಆರೋಪಿಯೊಬ್ಬನನ್ನು ಪೊಲೀಸ್ ಅಧಿಕಾರಿಯೊಬ್ಬ ವಿಚಾರಣೆ ನಡೆಸುವಲ್ಲಿಂದ ಆ ಚಿತ್ರದ ಕಥೆ ತೆರೆದುಕೊಳ್ಳಲಾರಂಭಿಸುತ್ತದೆ. 'ಅನಾಮಧೇಯ ಅಶೋಕ್ ಕುಮಾರ್' ಸಿನಿಮಾ ಕೂಡಾ ಇದೇ ಜಾನರ್‌ನಲ್ಲಿದೆ. ಆದರೆ ಇದು ರಿಮೇಕ್ ಅಲ್ಲ.



ಕಿಶೋರ್ ಕುಮಾರ್

ಕುತೂಹಲಕಾರಿಯಾದ ಒಂದು ಭಿನ್ನ ಕಥೆಯುಳ್ಳ ಸಸ್ಪೆನ್ಸ್ ಥ್ರಿಲ್ಲರ್ ಸಿನಿಮಾವನ್ನು ಸಾಗರ್ ಕುಮಾರ್ ಕೊಟ್ಟಿದ್ದಾರೆ. ಆ ಕಥೆಯಲ್ಲಿ ಕಿಶೋರ್ ಕುಮಾರ್ ಜೀವಿಸಿದ್ದಾರೆ.

ಪ್ರಜ್ಞೆತಪ್ಪಿ ಬಿದ್ದ ಪತ್ರಕರ್ತ ಪ್ರವೀಣ್ ರಾಜಶೇಖರ್ ಎದ್ದುನೋಡುವಾಗ, ಆತ ಸಂದರ್ಶನ ಮಾಡಲು ಬಂದಿದ್ದ ಖ್ಯಾತ ಕ್ರಿಮಿನಲ್ ವಕೀಲ ಆನಂದ್ ಭಟ್ ಕೊಲೆಯಾಗಿದೆ. ಆನಂದ್ ಭಟ್ ಮನೆಯಲ್ಲಿ ಇನ್ಯಾರೋ ಇರುವ ಅನುಮಾನ. ಆತ್ಮರಕ್ಷಣೆಗಾಗಿ ಆ ವ್ಯಕ್ತಿಯನ್ನು ಪ್ರವೀಣ್ ಕೊಲ್ಲುತ್ತಾನೆ. ಪೊಲೀಸರೆದುರು ಶರಣಾಗುವ ಪ್ರವೀಣ್ ಸಂತ್ರಸ್ತನೋ, ಆರೋಪಿಯೋ ಅಥವಾ ಸಾಕ್ಷಿಯೋ ಎನ್ನುವುದು ಚಿತ್ರದ ಮುಂದಿನ ಕಥೆ.

ಈ ಚಿತ್ರದ ಕಥೆಗೆ ಹಲವು ದೃಷ್ಟಿಕೋನ, ತಿರುವುಗಳಿವೆ. ಅದನ್ನು ಸಿನಿಮಾ ನೋಡಿಯೇ ತಿಳಿಯಬೇಕು. ಸಿನಿಮಾದ ಶೀರ್ಷಿಕೆಯಷ್ಟೇ ಕುತೂಹಲಕಾರಿಯಾಗಿ ಚಿತ್ರದ ಕಥೆಯನ್ನು ನಿರ್ದೇಶಕರು ಹೆಣೆದಿದ್ದಾರೆ. ಒಂದೇ ರಾತ್ರಿಯಲ್ಲಿ ನಡೆಯುವ ಕಥೆಯನ್ನು ಹೊತ್ತ ಈ ಸಿನಿಮಾವನ್ನು ಅನನುಕ್ರಮಣಿಕೆ(non linear) ಮಾದರಿಯ ಚಿತ್ರಕಥೆಯಲ್ಲಿ ಕಟ್ಟಿಕೊಡಲಾಗಿದೆ. ಈ ಮಾದರಿ ಕುತೂಹಲ ಹುಟ್ಟಿಸುವಂತಿದೆ. ಸಿನಿಮಾದ ಅವಧಿ 104 ನಿಮಿಷವಿದ್ದು, ಎಲ್ಲೂ ಎಳೆದಾಡದೆ ಚೊಕ್ಕವಾಗಿ ಕಟ್ಟಿಕೊಟ್ಟಿದ್ದಾರೆ ಸಾಗರ್. ಅನಗತ್ಯ ಸನ್ನಿವೇಶಗಳನ್ನು ಸೃಷ್ಟಿಸದೆ ಒಂದು ಚೌಕಟ್ಟಿನಲ್ಲಿ ಕಥೆ ಹೇಳಿದ್ದಾರೆ. ಚಿತ್ರೀಕರಣ ನಡೆಸಿದ ಸ್ಥಳವೂ ಸೀಮಿತವಾಗಿದೆ. ಚೊಚ್ಚಲ ನಿರ್ದೇಶನದಲ್ಲೇ ವೀಕ್ಷಕರನ್ನು ಸೆಳೆದಿಟ್ಟುಕೊಳ್ಳಬಲ್ಲ ಅಂಶಗಳನ್ನು ಅವರು ಅರಿತಿದ್ದಾರೆ. ಸಿನಿಮಾದಲ್ಲಿ ಸಂಭಾಷಣೆಯೇ ಪ್ರಮುಖ ಪಾತ್ರ ವಹಿಸಿದ್ದು, ಕಿಶೋರ್ ಹಾಗೂ ಹರ್ಷಿಲ್ ನಡುವಿನ ವಿಚಾರಣೆ ದೃಶ್ಯ ಸಿನಿಮಾದ ಕೇಂದ್ರ ಬಿಂದು. ಅಲ್ಲಿನ ಪ್ರಶ್ನೆ ಹಾಗೂ ಪ್ರತ್ಯುತ್ತಗಳ ಮೇಲೆಯೇ ಚಿತ್ರದ ಕಥೆ ನಿಂತಿದೆ. ಕ್ಲೈಮ್ಯಾಕ್ಸ್ ಬರವಣಿಗೆ ನಿರ್ದೇಶಕರ ಮೇಲೆ ಭರವಸೆ ಮೂಡಿಸುತ್ತದೆ.

ಮಲಯಾಳ ಹಾಗೂ ಕನ್ನಡ ಚಿತ್ರರಂಗದಲ್ಲಿ ಸಸ್ಪೆನ್ಸ್, ಥ್ರಿಲ್ಲರ್ ಜಾನರ್‌ನಲ್ಲಿ ಹಲವು ಪ್ರಯೋಗಗಳು ನಡೆಯುತ್ತಿವೆ. ಇವುಗಳ ಪೈಕಿ ಈ ಸಿನಿಮಾ ಭಿನ್ನವಾಗಿ ನಿಲ್ಲುತ್ತದೆ. ಸಿನಿಮಾದಲ್ಲಿರುವುದು ಬೆರಳೆಣಿಕೆಯಷ್ಟೇ ಪಾತ್ರಗಳು. ಕಿಶೋರ್ ಹಾಗೂ ಹರ್ಷಿಲ್ ನಡುವಿನ ವಿಚಾರಣೆಯ ಜುಗಲ್‌ಬಂದಿ ಪತ್ರಿಕೋದ್ಯಮ ಮತ್ತು ಪೊಲೀಸ್ ವ್ಯವಸ್ಥೆಯಲ್ಲಿನ ಹಲವು ವಾಸ್ತವಗಳನ್ನು ಬಿಚ್ಚಿಟ್ಟಿದೆ. ಇವರಿಬ್ಬರ ಸುತ್ತಲೇ ಹೆಚ್ಚಿನ ಕಥೆಯಿದ್ದು, ಆ ಪಾತ್ರಗಳನ್ನು ಅವರು ಅಚ್ಚುಕಟ್ಟಾಗಿ ನಿಭಾಯಿಸಿದ್ದಾರೆ. ಅನಾಮಧೇಯನನ್ನು ಕೊನೆಯ ಹಂತದವರೆಗೂ ಅನಾಮಧೇಯನಾಗಿ ಉಳಿಸಿಕೊಳ್ಳುವಲ್ಲಿ ಕಥೆ ಯಶಸ್ವಿಯಾಗಿದೆ. ಚಿತ್ರದ ಹಿನ್ನೆಲೆ ಸಂಗೀತದ ಬಗ್ಗೆ ಇನ್ನಷ್ಟು ಗಮನಹರಿಸಿದ್ದರೆ ಉತ್ತಮವಿತ್ತು.

ಅಭಿಲಾಷ್ ಪಿ.ಎಸ್.

ಪದಬಂಧ 5947


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಬಹಳ ಆಶ್ಚರ್ಯಕರವಾದ ಸಂಗತಿ (3)
3.ನೆರಳ ಹತ್ತಿರ ಕಾಣಿಸಿದ ತಟ್ಟೆ (3)
5.ಗಡಿ ಬಳಿ ಖರೀದಿಸಿದ ದೊಡ್ಡ ಹಾರೆ (3)
6.ಅಗುಳು ನುಂಗುವಾಗ ಉದುರಿದ ಅಶ್ರು (2)
7.ಕರದಲ್ಲಿರುವುದು ನೀರು ತುಂಬಿದ ಕಳಶ (3)
9.ಹಾಸ್ಯ ಈ ವಿಧವಾಗಿ ಬಂದಿದೆ (3)
10.ಮಾತು ಕೇಳುತ್ತಿರುವ ಸೋದರಮಾವ (3)
12.ನರನು ನೋಡಿರುವ ಪಟ್ಟಣ (3)
15.ದಿಟ್ಟತನದಿಂದ ನುಡಿದ ಸತ್ಯ (2)
17.ಭಾರ ಹೊರುವ ಕೂಲಿ ಆಳು (3)
19.ಬಯ್ಯಲು ಸೂಕ್ತವೆನಿಸಿದ ವಿಸ್ತಾರವಾದ ಜಾಗ (3)
20.ಜನರು ಸಲ್ಲಿಸಿದ ಕಾಣಿಕೆ (3)

ಮೇಲಿಂದ ಕೆಳಕ್ಕೆ

1.ಒಪ್ಪಂದ ಅಥವಾ ಕರಾರು ಎಂದರೂ ಸರಿ (2)
2.ಕರುವಿನ ಪಚನಾಂಗ (3)
3.ಸೀರೆ ಅಥವಾ ಧೋತಿಯ ಉದ್ದನೆಯ ಮಡಿಕೆ (3)
4.ಕೆಸರಲ್ಲಿರುವ ಎಕ್ಕಡ (2)
5.ಟಾರ್ ರಸ್ತೆಯ ಬಳಿಯಲ್ಲಿರುವ ಮೋರಿ (3)
6.ಅಡಗಿಕೊಳ್ಳಲು ಸೂಕ್ತವಾದ ಕಾಡು (3)
7.ದನಕ್ಕಾಗಿ ನಡೆದ ಕಾಳಗ (3)
8.ಈತ ಪಕ್ಕಾ ಹಳ್ಳಿಯವ! (3)
11.ಲಟಕ್ಕನೆ ಮುತ್ತಿಕ್ಕಿದ ಹಣೆ (3)
13.ರಸ್ತೆಯ ಉದ್ದಗಲ ನಡೆಯುತ್ತಿರುವ ಗಲಾಟೆ (3)
14.ಮಹನೀಯ ಕಟ್ಟಿಸಿರುವ ಭವ್ಯ ಸೌಧ (3)
15.ದಿನದಲ್ಲೇ ಮಂತ್ರಿ ಬಂದಿರುವನಲ್ಲಾ! (3)
16.ಪಡಿನೆಳಲು ಇಲ್ಲಿ ಕಾಣುತ್ತಿದೆ (2)
18.ನಾಗರಿಕರು ಹಿಡಿದಿರುವ ಗುಂಜು (2)



5946ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಗುರುಕುಲ 3.ಬಾಣಸಿಗ
5.ಬರಲು 6.ಹಳವಂಡ
7.ವರಮಾನತೆರಿಗೆ
10.ಅವಧಾನಿ 11.ವಿಜ್ಞಾನ
14.ಗಮನಾರ್ಹ
15.ಪೀಕದಾನಿ

ಮೇಲಿಂದ ಕೆಳಕ್ಕೆ:
1.ಗುಲ್ಮ 2.ಕುವರ
4.ಗರುಡ 5.ಬಸವ
6.ಹಣತೆ 8.ಮಾನಿನಿ 9.ಗೆಡನ
10.ಅಪಾಂಗ 12.ಜ್ಞಾಪಕ
13.ಗ್ಲಾನಿ

ಸುಡೊಕು 6332

6		4	9		7	3		8
				4				
	7	8	2			4		6
7					8		6	
	8		4			7	3	
		5		7				
4	9		3	8		6		1
	6						8	
8		7			4	2		3


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6331 ಸುಡೊಕು

9	1	7	3	5	8	6	2	4
8	4	6	9	2	7	5	1	3
2	5	3	4	1	6	9	7	8
5	3	8	1	6	2	7	4	9
4	2	9	7	3	5	1	8	6
6	7	1	8	4	9	2	3	5
3	8	5	6	7	1	4	9	2
7	9	2	5	8	4	3	6	1
1	6	4	2	9	3	8	5	7

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶನಿವಾರ ಫೆಬ್ರುವರಿ 8, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಶುಕ್ಲ ಏಕಾದಶಿ ಗಂ. 20-16 ನಕ್ಷತ್ರ: ಮೃಗಶಿರ ಗಂ. 18-07 ಯೋಗ: ವೈಧೃತಿ ಗಂ. 14-04 ಕರಣ: ವಣಿಜ ಗಂ. 08-49, ಮಕರ ಮಾಸದ 25 ನೇ ದಿನ, ಮಳೆನಕ್ಷತ್ರ: ಧನಿಷ್ಠಾ 1.
ರಾಹುಕಾಲ : ಬೆಳಿಗ್ಗೆ 09-00 – 10-30
ಸೂರ್ಯೋದಯ : 06-59 ಸೂರ್ಯಾಸ್ತ : 06-30
ಮುಸ್ಲಿಂ ದಿನಾಂಕ : 09 ಶಬನ್
ಅದೃಷ್ಟ ಸಂಖ್ಯೆ : 11, 3

ಮೇಷ: ಮಗಳ ಮುಂದಿನ ಭವಿಷ್ಯದ ಬಗ್ಗೆ ಇಂದಿನ ಘಟನೆಗಳು ತಲೆ ಕೆಡಿಸಿಕೊಳ್ಳುವಂತೆ ಮಾಡುತ್ತವೆ. ಕೆಲವೊಂದಷ್ಟು ಪ್ರಶ್ನೆಗಳಿಗೆ ತಂದೆ ತಾಯಿಯಿಂದ ಬೇಕಾದಂಥ ಉತ್ತರಗಳು ದೊರಕುವುದಿಲ್ಲ.

ವೃಷಭ: ಯಾರ ಸಹಾಯವೂ ಇಲ್ಲದೇ ನಿಮ್ಮ ಕೆಲಸಗಳನ್ನು ನೀವೇ ಮಾಡಿಕೊಳ್ಳುವ ಸಾಮರ್ಥ್ಯ ಇದ್ದರೂ ನಿಮ್ಮ ಮೇಲೆ ನಿಮಗೆ ಅನುಮಾನ ಉಂಟಾಗುವುದು. ವಿವಿಧ ಮೂಲಗಳಿಂದ ಧನ ಸಂಪಾದನೆ ಆಗುವುದು.

ಮಿಥುನ: ಅರಿಶಿನ, ಕುಂಕುಮ ಇತ್ಯಾದಿ ಮಂಗಳದ್ರವ್ಯಗಳ ಮಾರಾಟದಿಂದ ಲಾಭ ಉಂಟಾಗುವುದು. ಸುಪ್ತವಾದ ಕಲೆಗೆ ಪ್ರೋತ್ಸಾಹ ಸಿಗಲಿದೆ. ಅನಿವಾರ್ಯವಾಗಿ ಸಾಮಾಜಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕಾಗಲಿದೆ.

ಕರ್ಕಾಟಕ: ವ್ಯಾಪಾರ ವ್ಯವಹಾರದಲ್ಲಿ ಪ್ರತಿ ಹೆಜ್ಜೆಯನ್ನು ಎದುರಾಳಿಯು ಗಮನಿಸುತ್ತಿರುವ ಕಾರಣ ಬಹಳಷ್ಟು ಎಚ್ಚರದಿಂದ ವ್ಯವಹರಿಸಿ. ಮಗಳ ವಿವಾಹ ಪ್ರಸ್ತಾಪ ನಡೆದು ಶುಭದಲ್ಲಿ ಮುಕ್ತಾಯವಾಗಲಿದೆ.

ಸಿಂಹ: ರಾಜಕಾರಣದ ರಹಸ್ಯ ಬಯಲಾಗಬಹುದು. ಅದು ನಿಮ್ಮ ಮೇಲೆ ಅಧಿಕ ಮಟ್ಟಿಗೆ ಪರಿಣಾಮ ಬೀರಲಿದೆ. ಹಂತ ಹಂತವಾಗಿ ಹಣದ ಪರಿಸ್ಥಿತಿ ಸುಧಾರಿಸಿ ಮನಸ್ಸಿಗೆ ನೆಮ್ಮದಿ ಇರುವುದು. ಪತ್ನಿಯ ಆರೋಗ್ಯ ಸುಧಾರಿಸುವುದು.

ಕನ್ಯಾ: ಸಾಮಾಜಿಕ ಚಟುವಟಿಕೆಗಳಲ್ಲಿ ಕೊಡುಗೆಯು ಎಲ್ಲರ ಪ್ರಶಂಸೆಗೆ ಪಾತ್ರವಾಗುವುದು. ನಿಮ್ಮ ಯೋಜನೆಗಳನ್ನು ಕದಿಯುವವರು ಇರುವುದರಿಂದ ನಿಮ್ಮ ಆಲೋಚನೆಯನ್ನು ಇನ್ನೊಬ್ಬರಲ್ಲಿ ಹಂಚಿಕೊಳ್ಳಬೇಡಿ.

ತುಲಾ: ಕೈಗೊಂಡ ನಿರ್ಧಾರಗಳಲ್ಲಿ ಕೆಲ ಬದಲಾವಣೆಗಳನ್ನು ಮಾಡಿಕೊಳ್ಳುವುದರಿಂದ ವ್ಯವಹಾರಗಳಲ್ಲಿ ಧನಲಾಭ ಕಾಣುವಿರಿ. ಅಗತ್ಯದ ಹಣ ಕೈಸೇರುವುದರಿಂದ ಮಾಡಿದ ಸಾಲವನ್ನು ತೀರಿಸಲು ಸಾಧ್ಯವಾಗಲಿದೆ.

ವೃಶ್ಚಿಕ: ಚರ್ಮದ ವಸ್ತುಗಳ ತಯಾರಿ ಅಥವಾ ಮಾರಾಟದಿಂದ ಲಾಭ ಬರಲಿದೆ. ಅತೀವ ಪ್ರಯತ್ನದಿಂದ ಈ ದಿನ ನಿಮ್ಮ ಕೆಲಸ ಪೂರ್ಣಗೊಳಿಸುವಲ್ಲಿ ಯಶಸ್ವಿಯಾಗುವಿರಿ. ವೈವಾಹಿಕ ಜೀವನವು ಸಿಹಿಯ ಅನುಭವ ನೀಡುತ್ತದೆ.

ಧನು: ಮಾತಿನ ಚತುರತೆಯು ಸಂಘಟನೆ ಮಾಡಲು ಉಪಯೋಗಕ್ಕೆ ಬರುತ್ತದೆ. ಕುಟುಂಬದಲ್ಲಿ ಶುಭಕಾರ್ಯಗಳ ಸಂಭ್ರಮದಿಂದ ಹಿರಿಯರ ಮನಸ್ಸಿಗೆ ನೆಮ್ಮದಿ ಉಂಟಾಗುವುದು. ಆಕಸ್ಮಿಕ ಧನಲಾಭ ಉಂಟಾಗಲಿದೆ.

ಮಕರ: ತೆಗೆದುಕೊಂಡಿರುವ ನಿರ್ಧಾರ ಸರಿಯಾದುದೆಂದು ಮನವರಿಕೆಯಾಗುವುದು. ಜಾಹೀರಾತು ಕ್ಷೇತ್ರದ ಕೆಲಸಗಳಿಂದ ಉತ್ತಮ ಅವಕಾಶಗಳು ಸಿಗಲಿವೆ. ಇಂದು ಹಣದ ಅಡಚಣೆ ಇರುವುದಿಲ್ಲ.

ಕುಂಭ: ಇನ್ನೊಬ್ಬರಿಗೆ ಮಾರ್ಗದರ್ಶನ ಮಾಡುವ ಸಮಯದಲ್ಲಿ ಸ್ವಾರ್ಥವನ್ನು ಯೋಚಿಸಬೇಡಿ. ಸಹಜ ಜೀವನ ಶೈಲಿಯಲ್ಲಿ ಸಣ್ಣಪುಟ್ಟ ಸಂತಸದ ಕ್ಷಣಗಳನ್ನು ಕಾಣುವಿರಿ. ಕಾಫಿ ಬೆಳೆಗಾರರಿಗೆ ಲಾಭ ಸಿಗುವುದು.

ಮೀನ: ಗೃಹಿಣಿಯರಿಗೆ ವಿಶೇಷ ದಿನವಾಗಿದ್ದು, ಆಕಸ್ಮಿಕ ಧನಲಾಭ ಅಥವಾ ತವರು ಮನೆಯವರಿಂದ ಉಡುಗೊರೆ ಸಿಗಲಿದೆ. ಒಣಪ್ರತಿಷ್ಠೆಯಿಂದಾಗಿ ಸಂಬಂಧಗಳು ನುಚ್ಚುನೂರಾಗುವ ಪರಿಸ್ಥಿತಿಯನ್ನು ತಂದುಕೊಳ್ಳಬೇಡಿ.

ಫ್ರೀಡಂ ಆಯಿಲ್: ವಿಜೇತರಿಗೆ ಸನ್ಮಾನ

ಪ್ರಜಾವಾಣಿ ವಾರ್ತೆ


‘ಗೋ ಫಾರ್ ಫ್ರೀಡಂ ಗೋಲ್ಡ್ ಆಫರ್’ನ ಬಂಪರ್ ಡ್ರಾ ವಿಜೇತರಿಗೆ ನಟಿ ಆಶಿಕಾ ರಂಗನಾಥ್ ಬಹುಮಾನ ವಿತರಿಸಿದರು. ಕಂಪನಿಯ ಅಧಿಕಾರಿಗಳು ಇದ್ದರು

ಬೆಂಗಳೂರು: ಫ್ರೀಡಂ ಹೆಲ್ದಿ ಕುಕಿಂಗ್ ಆಯಿಲ್ಸ್‌ನಿಂದ ಹಮ್ಮಿಕೊಂಡಿದ್ದ ‘ಗೋ ಫಾರ್ ಫ್ರೀಡಂ ಗೋಲ್ಡ್ ಆಫರ್’ನ ಬಂಪರ್ ಡ್ರಾ ವಿಜೇತರಿಗೆ, ನಟಿ ಆಶಿಕಾ ರಂಗನಾಥ್ ಬಹುಮಾನ ವಿತರಿಸಿ, ಸನ್ಮಾನಿಸಿದರು.

ಪ್ರತಿ ರಾಜ್ಯದಿಂದ ಒಬ್ಬ ವಿಜೇತರಿಗೆ 50 ಗ್ರಾಂ ಚಿನ್ನದ ನಾಣ್ಯ ಮತ್ತು ಇಬ್ಬರು ವಿಜೇತರಿಗೆ ತಲಾ 10 ಗ್ರಾಂ ಚಿನ್ನದ ನಾಣ್ಯ ನೀಡಲಾಗಿದೆ ಎಂದು ಜೆಮಿನಿ ಎಡಿಬಲ್ಸ್ ಆ್ಯಂಡ್ ಫ್ಯಾಟ್ಸ್ ಇಂಡಿಯಾ ಲಿಮಿಟೆಡ್ ತಿಳಿಸಿದೆ.

ಹಬ್ಬದ ಋತುವಿನ ಅಂಗವಾಗಿ ಕಂಪನಿಯು ‘ಗೋ ಫಾರ್ ಫ್ರೀಡಂ ಗೋಲ್ಡ್ ಆಫರ್ 2024’ ಅನ್ನು ಆರಂಭಿಸಿತ್ತು. ಕರ್ನಾಟಕ, ಆಂಧ್ರಪ್ರದೇಶ, ತೆಲಂಗಾಣ, ಒಡಿಶಾ ಮತ್ತು ಛತ್ತೀಸಗಢದಲ್ಲಿ ಈ ಸ್ಪರ್ಧೆ ಆರಂಭಿಸಲಾಗಿತ್ತು. ಇದರಲ್ಲಿ ಭಾಗವಹಿಸುವವರು 1 ಲೀಟರ್‌ನ ಎರಡು ಪ್ಯಾಕೆಟ್ ಫ್ರೀಡಂ ರಿಫೈನ್ಡ್ ಸೂರ್ಯಕಾಂತಿ ಎಣ್ಣೆ ಖರೀದಿಸಬೇಕಿತ್ತು ಎಂದು ತಿಳಿಸಿದೆ.

‘ಸ್ಪರ್ಧೆಯ ಭಾಗವಾಗಿ ಈ ರಾಜ್ಯಗಳಲ್ಲಿ ಮೊದಲ ಐವರು ವಿಜೇತರು (ಪ್ರತಿ ರಾಜ್ಯದಿಂದ ಒಬ್ಬರು) ಮತ್ತು 10 ವಿಜೇತರು (ಪ್ರತಿ ರಾಜ್ಯದಿಂದ ಇಬ್ಬರು) ಚಿನ್ನದ ನಾಣ್ಯ ಪಡೆದಿದ್ದಾರೆ. ರಾಜ್ಯದಾದ್ಯಂತ ಒಟ್ಟು 5,500 ವಿಜೇತರು 1 ಗ್ರಾಂ ಚಿನ್ನದ ನಾಣ್ಯ ಪಡೆದಿದ್ದಾರೆ’ ಎಂದು ಕಂಪನಿಯ ಮಾರಾಟ ವಿಭಾಗದ ಹಿರಿಯ ಉಪಾಧ್ಯಕ್ಷ ಪಿ. ಚಂದ್ರಶೇಖರ ರೆಡ್ಡಿ ತಿಳಿಸಿದ್ದಾರೆ.

‘ಫ್ರೀಡಂ ಸೂರ್ಯಕಾಂತಿ ಎಣ್ಣೆಯು ಪ್ರಮುಖ ಬ್ರ್ಯಾಂಡ್ ಆಗಿದೆ. ದೇಶದಲ್ಲಿ ಸೂರ್ಯಕಾಂತಿ ಎಣ್ಣೆ ವಿಭಾಗದಲ್ಲಿ ಮೊದಲ ಸ್ಥಾನದಲ್ಲಿದೆ’ ಎಂದು ಕಂಪನಿಯ ಮಾರುಕಟ್ಟೆ ವಿಭಾಗದ ಪ್ರಧಾನ ವ್ಯವಸ್ಥಾಪಕ ಚೇತನ್ ಪಿಂಪಲ್ಖುಟೆ ತಿಳಿಸಿದ್ದಾರೆ.

5 ವರ್ಷದ ಬಳಿಕ ರೆಪೊ ದರ ಕಡಿತ • ಇಎಂಐ ಇಳಿಕೆ • ಗೃಹ, ಇತರೆ ಸಾಲ ಅಗ್ಗ ಸಾಧ್ಯತೆ

ಸಾಲದ ಹೊರೆ ಇಳಿಸಿದ ಆರ್‌ಬಿಐ

ಮುಂಬೈ (ಪಿಟಿಐ): 2025–26ನೇ ಸಾಲಿನ ಕೇಂದ್ರ ಬಜೆಟ್‌ನಲ್ಲಿ ಘೋಷಿಸಿರುವ ಆದಾಯ ತೆರಿಗೆ ಕಡಿತದ ಕ್ರಮವು ದೇಶದ ಮಧ್ಯಮ ವರ್ಗದ ಜನರಲ್ಲಿ ನಿರಾಳತೆ ಮೂಡಿಸಿದೆ. ಇದರ ಬೆನ್ನಲ್ಲೇ ಭಾರತೀಯ ರಿಸರ್ವ್ ಬ್ಯಾಂಕ್ ಶುಕ್ರವಾರ ರೆಪೊ ದರ ಇಳಿಕೆ ಮಾಡುವ ಮೂಲಕ ಈ ವರ್ಗದ ಜನರ ಬಹುದಿನಗಳ ಬೇಡಿಕೆಯನ್ನು ಈಡೇರಿಸಿದೆ.


ಸಂಜಯ್ ಮಲ್ಹೋತ್ರಾ

2023ರ ಫೆಬ್ರುವರಿಯಿಂದಲೂ ಶೇ 6.50ರಷ್ಟಿದ್ದ ರೆಪೊ ದರದಲ್ಲಿ ಶೇ 0.25ರಷ್ಟು ಕಡಿತಗೊಳಿಸಿದೆ. ಇದರಿಂದ ಬ್ಯಾಂಕ್‌ಗಳಲ್ಲಿ ಈ ಬಡ್ಡಿದರ ಆಧರಿತ ಗೃಹ, ಕಾರು ಹಾಗೂ ವೈಯಕ್ತಿಕ ಸಾಲ ಪಡೆದವರಿಗೆ ಇಎಂಐ ಹೊರೆ ತಗ್ಗಲಿದೆ.

ಜಡತ್ವಗೊಂಡಿರುವ ದೇಶದ ಆರ್ಥಿಕತೆ ಬೆಳವಣಿಗೆಗೆ ಉತ್ತೇಜನ ನೀಡಲು ಆರ್‌ಬಿಐ 5 ವರ್ಷದ ಬಳಿಕ ಈ ಕ್ರಮ ಕೈಗೊಂಡಿದೆ. ಇದರಿಂದ ಗೃಹ ಹಾಗೂ ಇತರೆ ಸಾಲಗಳು ಅಗ್ಗವಾಗಲಿವೆ ಎಂದು ಆರ್ಥಿಕ ತಜ್ಞರು ಹೇಳಿದ್ದಾರೆ.

ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ ಅವರ ಅಧ್ಯಕ್ಷತೆಯಲ್ಲಿ ಮುಕ್ತಾಯಗೊಂಡ ಹಣಕಾಸು ನೀತಿ ಸಮಿತಿ ಸಭೆಯಲ್ಲಿ ಎಲ್ಲಾ ಸದಸ್ಯರು, ರೆಪೊ ದರ ಇಳಿಕೆ ಬಗ್ಗೆ ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿದರು.

ವಾಣಿಜ್ಯ ಬ್ಯಾಂಕ್‌ಗಳ ಹಣಕಾಸಿನ ಕೊರತೆ ನೀಗಿಸಲು ಆರ್‌ಬಿಐ ಅವುಗಳಿಗೆ ಸಾಲ ನೀಡುತ್ತದೆ. ಈ ಸಾಲಕ್ಕೆ ವಿಧಿಸುವ ಬಡ್ಡಿಯನ್ನು ರೆಪೊ ದರ ಎಂದು ಕರೆಯಲಾಗುತ್ತದೆ. ಇದು ಏರಿಕೆಯಾದರೆ ಸಹಜವಾಗಿ ಬ್ಯಾಂಕ್‌ಗಳ ಸಾಲದ ವೆಚ್ಚವೂ ಹೆಚ್ಚಳವಾಗುತ್ತದೆ. ಈ ಹೊರೆಯನ್ನು ಬ್ಯಾಂಕ್‌ಗಳು ಗ್ರಾಹಕರಿಗೆ ವರ್ಗಾಯಿಸುತ್ತವೆ. ಇದರಿಂದ ಗೃಹ, ಕಾರು ಹಾಗೂ ವೈಯಕ್ತಿಕ ಸಾಲದ ಇಎಂಐ ಹೆಚ್ಚಳವಾಗುತ್ತದೆ.

ರೆಪೊ ದರವು ಗ್ರಾಹಕರ ಉಳಿತಾಯ ಮತ್ತು ಹೂಡಿಕೆ ಮೇಲೂ ಪರಿಣಾಮ ಬೀರುತ್ತದೆ. ಬ್ಯಾಂಕ್‌ಗಳು ಹೆಚ್ಚಿನ ಮೊತ್ತದ ಠೇವಣಿ ಆಕರ್ಷಿಸಲು ಮುಂದಾಗುತ್ತವೆ. ಹಾಗಾಗಿ, ರೆಪೊ ದರ ಏರಿಕೆಯಾದರೆ ಸ್ಥಿರ ಠೇವಣಿ ಮತ್ತು ಇತರೆ ಉಳಿತಾಯದ ಮೊತ್ತಕ್ಕೆ ಹೆಚ್ಚಿನ ಬಡ್ಡಿ ಲಭಿಸುತ್ತದೆ. ಒಂದು ವೇಳೆ ಕಡಿಮೆಯಾದರೆ ಉಳಿತಾಯ ಯೋಜನೆಗಳ ಮೇಲೆ ಲಭಿಸುವ ಬಡ್ಡಿ ಕಡಿಮೆಯಾಗುತ್ತದೆ ಎಂದು ಆರ್ಥಿಕ ತಜ್ಞರು ಹೇಳಿದ್ದಾರೆ.

‘ಪ್ರತಿದಿನವೂ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಇಳಿಕೆ ಆಗುತ್ತಿದೆ. ಆರ್‌ಬಿಐನ ಈ ನಿರ್ಧಾರದಿಂದ ಚಿಲ್ಲರೆ ಹಣದುಬ್ಬರ ಮತ್ತು ರೂಪಾಯಿ ಮೇಲೆ ಮತ್ತಷ್ಟು ಒತ್ತಡ ಸೃಷ್ಟಿಯಾಗುವ ಸಾಧ್ಯತೆಯಿದೆ. ಈಕ್ವಿಟಿ ಮಾರುಕಟ್ಟೆಯಲ್ಲಿ ವಿದೇಶಿ ಬಂಡವಾಳದ ಹೊರಹರಿವಿನ ಪ್ರಮಾಣ ಹೆಚ್ಚಳವಾಗುವ ಸಾಧ್ಯತೆಯಿದೆ’ ಎಂದು ಹೇಳಿದ್ದಾರೆ.

ಹಣದುಬ್ಬರ ನಿಯಂತ್ರಿಸುವ ಮೂಲಕ ದೇಶದ ಆರ್ಥಿಕ ಬೆಳವಣಿಗೆಯ ಸ್ಥಿರತೆಗೆ ಒತ್ತು ನೀಡಲು ಸಭೆಯು ನಿರ್ಧರಿಸಿದೆ. ಈ ನಿಟ್ಟಿನಲ್ಲಿ ‘ತಟಸ್ಥ’ ನೀತಿಯನ್ನು ಮುಂದುವರಿಸಲು ಒಪ್ಪಿಗೆ ನೀಡಿದೆ ಎಂದು ಗವರ್ನರ್ ಮಲ್ಹೋತ್ರಾ ಹೇಳಿದ್ದಾರೆ.

ಚಿಲ್ಲರೆ ಹಣದುಬ್ಬರವು ನವೆಂಬರ್‌ನಲ್ಲಿ ಶೇ 5.48ರಷ್ಟು ದಾಖಲಾಗಿತ್ತು. ಡಿಸೆಂಬರ್‌ನಲ್ಲಿ ಶೇ 5.22ಕ್ಕೆ ಇಳಿಕೆಯಾಗಿತ್ತು.

ಬ್ಯಾಂಕ್‌ಗಳಿಗೆ ಪ್ರತ್ಯೇಕ ಡೊಮೇನ್ ರಚನೆ

ಸೈಬರ್ ಭದ್ರತೆ ದೃಷ್ಟಿಯಿಂದ ದೇಶದ ಬ್ಯಾಂಕ್‌ಗಳು ಹಾಗೂ ಬ್ಯಾಂಕೇತರ ಹಣಕಾಸು ಸಂಸ್ಥೆಗಳಿಗೆ ಪ್ರತ್ಯೇಕ ಡೊಮೇನ್ ರಚನೆಗೆ ಆರ್‌ಬಿಐ ನಿರ್ಧರಿಸಿದೆ.

ಏಪ್ರಿಲ್‌ನಿಂದ ‘ಬ್ಯಾಂಕ್ ಡಾಟ್ ಇನ್’ ಜಾಲತಾಣದಲ್ಲಿ ನೋಂದಣಿ ಆರಂಭವಾಗಲಿದೆ. ಆ ನಂತರ ‘ಫಿನ್ ಡಾಟ್ ಇನ್’ ಆರಂಭಿಸಲಾಗುವುದು ಎಂದು ತಿಳಿಸಿದೆ.

ಡಿಜಿಟಲ್ ಪಾವತಿಯಲ್ಲಿನ ವಂಚನೆ ತಡೆಗಟ್ಟುವುದು ಇದರ ಪ್ರಮುಖ ಉದ್ದೇಶವಾಗಿದೆ. ಈ ಕ್ರಮವು ಬ್ಯಾಂಕಿಂಗ್ ವಲಯದ ಮೇಲೆ ಜನರ ನಂಬಿಕೆ ಮತ್ತು ವಿಶ್ವಾಸವನ್ನು ಬಲಗೊಳಿಸಲು ನೆರವಾಗಲಿದೆ ಎಂದು ಹೇಳಿದೆ.

ಬ್ಯಾಂಕಿಂಗ್ ತಂತ್ರಜ್ಞಾನದ ಅಭಿವೃದ್ಧಿ ಮತ್ತು ಸಂಶೋಧನಾ ಸಂಸ್ಥೆಯು (ಐಡಿಆರ್‌ಬಿಟಿ) ವಿಶೇಷ ರಿಜಿಸ್ಟ್ರಾರ್ ಆಗಿ ಕಾರ್ಯ ನಿರ್ವಹಿಸಲಿದೆ ಎಂದು ಹೇಳಿದೆ.

2025–26ರಲ್ಲಿ ಜಿಡಿಪಿ ಶೇ 6.7ರಷ್ಟು ಪ್ರಗತಿ

2025–26ನೇ ಆರ್ಥಿಕ ವರ್ಷದಲ್ಲಿ ಒಟ್ಟು ಆಂತರಿಕ ಉತ್ಪನ್ನವು (ಜಿಡಿಪಿ) ಶೇ 6.7ರಷ್ಟು ಪ್ರಗತಿ ಕಾಣಲಿದೆ ಎಂದು ಆರ್‌ಬಿಐ ಅಂದಾಜಿಸಿದೆ.

ಕೇಂದ್ರ ಸರ್ಕಾರವು ಬಜೆಟ್‌ನಲ್ಲಿ ಆದಾಯ ತೆರಿಗೆ ಕಡಿತಗೊಳಿಸುವ ಮೂಲಕ ಮಧ್ಯಮ ವರ್ಗದವರ ಮೇಲಿನ ತೆರಿಗೆ ಹೊರೆ ಇಳಿಸಿದೆ. ಹಿಂಗಾರು ಅವಧಿಯಲ್ಲಿ ಆಹಾರ ಧಾನ್ಯಗಳ ಉತ್ಪಾದನೆ ಹೆಚ್ಚಿದೆ. ಇದು ಆರ್ಥಿಕ ಬೆಳವಣಿಗೆ ದರ ಏರಿಕೆಗೆ ನೆರವಾಗಲಿದೆ ಎಂದು ಹೇಳಿದೆ.

2024–25ನೇ ಆರ್ಥಿಕ ವರ್ಷದಲ್ಲಿ ಜಿಡಿಪಿಯು ಶೇ 6.4ರಷ್ಟು ಬೆಳವಣಿಗೆ ಕಾಣುವ ನಿರೀಕ್ಷೆಯಿದೆ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿ ಅಂದಾಜಿಸಿದೆ.


ಚಿಲ್ಲರೆ ಹಣದುಬ್ಬರ ಇಳಿಕೆ ನಿರೀಕ್ಷೆ

ಪ್ರಸಕ್ತ ಆರ್ಥಿಕ ವರ್ಷದಲ್ಲಿ ಚಿಲ್ಲರೆ ಹಣದುಬ್ಬರವು ಶೇ 4.8ರಷ್ಟು ದಾಖಲಾಗಲಿದೆ. 2025–26ನೇ ಆರ್ಥಿಕ ವರ್ಷದಲ್ಲಿ ಶೇ 4.2ರಷ್ಟು ಇರಲಿದೆ ಎಂದು ಆರ್‌ಬಿಐ ಅಂದಾಜಿಸಿದೆ.

‘ದೇಶದಲ್ಲಿ ಆಹಾರ ಧಾನ್ಯಗಳ ಉತ್ಪಾದನೆ ಹೆಚ್ಚಳವಾಗಿದೆ. ಹಿಂದಿನ ಹಣಕಾಸು ನೀತಿ ಸಮಿತಿ ಸಭೆಗಳಲ್ಲಿ ಕೈಗೊಂಡ ನಿರ್ಧಾರದಿಂದ ಹಣದುಬ್ಬರ ಇಳಿಕೆಯಾಗಿದೆ’ ಎಂದು ಗವರ್ನರ್ ಮಲ್ಹೋತ್ರಾ ಹೇಳಿದ್ದಾರೆ.

ಸರಕು ಮತ್ತು ಸೇವೆಗಳ ವೆಚ್ಚದಲ್ಲಿನ ಬದಲಾವಣೆಯ ಸಂಕೇತವಾಗಿರುವ ಕೋರ್ ಹಣದುಬ್ಬರ ಏರಿಕೆಯಾದರೂ ಮುಂದಿನ ದಿನಗಳಲ್ಲಿ ಮಂದಗತಿಯಲ್ಲಿ ಇರಲಿದೆ. ಜಾಗತಿಕ ಬಿಕ್ಕಟ್ಟುಗಳು ಹಣದುಬ್ಬರದ ಮೇಲೆ ಪರಿಣಾಮ ಬೀರಲಿವೆ ಎಂದು ಹೇಳಿದ್ದಾರೆ.


ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	23,603
ಇಂದಿನ ಅಂತ್ಯ	23,559
▼	43
ದಿನದ ಕನಿಷ್ಠ	23,443

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹495
12 ಕ್ಕೆ	₹66
ಮೈಸೂರು	
100ಕ್ಕೆ	₹497

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)	₹411-658
ದ್ವಿತಳಿ (ಬಿ.ವಿ)	₹171-821

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹188
ಆರ್‌ಎಸ್‌ಎಸ್-5	₹183
ಗುಡ್ ಲಾಟ್	₹178

(ಪ್ರತಿ ಕೆ.ಜಿಗೆ)

ಇ–ಸ್ಕೂಟರ್ ಮಾರಾಟ ಓಲಾ ಎಲೆಕ್ಟ್ರಿಕ್‌ಗೆ ಅಗ್ರಪಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯುತ್‌ಚಾಲಿತ ದ್ವಿಚಕ್ರ ವಾಹನ ತಯಾರಿಕಾ ಕಂಪನಿ ಓಲಾ ಎಲೆಕ್ಟ್ರಿಕ್, 2024–25ನೇ ಆರ್ಥಿಕ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ₹1,069 ಕೋಟಿ ವರಮಾನ ಗಳಿಸಿದೆ. ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹1,336 ಕೋಟಿ ಗಳಿಸಲಾಗಿತ್ತು ಎಂದು ಕಂಪನಿ ತಿಳಿಸಿದೆ.

ಮೂರನೇ ತ್ರೈಮಾಸಿಕದಲ್ಲಿಯೂ ಮಾರುಕಟ್ಟೆಯಲ್ಲಿ ಕಂಪನಿಯ ಪ್ರಾಬಲ್ಯ ಮುಂದುವರಿದಿದೆ. ವಾಹನ್ ವರದಿ ಪ್ರಕಾರ ಡಿಸೆಂಬರ್ ತ್ರೈಮಾಸಿಕದಲ್ಲಿ ಶೇ 25.5ರಷ್ಟು ಪಾಲು ಹೊಂದಿದ್ದು, ಅಗ್ರಸ್ಥಾನ ಕಾಯ್ದುಕೊಂಡಿದೆ. ಉತ್ಪಾದನೆ ಮತ್ತು ತಂತ್ರಜ್ಞಾನದ ಅಭಿವೃದ್ಧಿಯಲ್ಲಿ ಮುಂಚೂಣಿ ಸ್ಥಾನದಲ್ಲಿದೆ ಎಂದು ತಿಳಿಸಿದೆ.

ಜೆನ್3 ಎಸ್1 ಸ್ಕೂಟರ್ ಅನ್ನು ಮಾರುಕಟ್ಟೆಗೆ ಪರಿಚಯಿಸಿದ್ದು, ಇದೇ ತಿಂಗಳ ಎರಡನೇ ವಾರದಿಂದ ಗ್ರಾಹಕರ ಖರೀದಿಗೆ ಲಭ್ಯವಿದೆ ಎಂದು ಹೇಳಿದೆ.

ರೋಡ್‌ಸ್ಟಾರ್ ಎಕ್ಸ್ ಮತ್ತು ರೋಡ್‌ಸ್ಟಾರ್ ಎಕ್ಸ್ ಪ್ಲಸ್ ಬಿಡುಗಡೆ ಮೂಲಕ ಮೋಟರ್ ಸೈಕಲ್ ವಿಭಾಗಕ್ಕೂ ಓಲಾ ಪ್ರವೇಶಿಸಿದೆ. ಇದೇ 25ರಿಂದ ಈ ದ್ವಿಚಕ್ರವಾಹನಗಳ ಮಾರಾಟ ಆರಂಭವಾಗಲಿದೆ ಎಂದು ವಿವರಿಸಿದೆ.

ಡಿಸೆಂಬರ್ ತ್ರೈಮಾಸಿಕದಲ್ಲಿ ಒಟ್ಟು 84,029 ದ್ವಿಚಕ್ರವಾಹನಗಳನ್ನು ಗ್ರಾಹಕರಿಗೆ ವಿತರಿಸಿದೆ. ಹಾಲಿ ಇರುವ ಮಳಿಗೆಗಳು ಸೇರಿದಂತೆ ದೇಶದಾದ್ಯಂತ ಮಾರಾಟ ಸೇವೆಯನ್ನು 4 ಸಾವಿರಕ್ಕೂ ಹೆಚ್ಚು ಮಳಿಗೆಗಳಿಗೆ ವಿಸ್ತರಿಸುವ ಗುರಿ ಹೊಂದಲಾಗಿದೆ ಎಂದು ತಿಳಿಸಿದೆ.

ಇನ್ಫೊಸಿಸ್: 300 ಟ್ರೈನಿಗಳು ವಜಾ

ನವದೆಹಲಿ (ಪಿಟಿಐ): ಇನ್ಫೊಸಿಸ್ ಕಂಪನಿಯು ತರಬೇತಿ ಅವಧಿಯಲ್ಲಿದ್ದ 300ಕ್ಕೂ ಹೆಚ್ಚು ಉದ್ಯೋಗಿಗಳನ್ನು (ಟ್ರೈನಿ) ಕೆಲಸದಿಂದ ವಜಾಗೊಳಿಸಿದೆ.

ಕಳೆದ ವರ್ಷ ಇವರನ್ನು ನೇಮಿಸಿಕೊಳ್ಳಲಾಗಿದ್ದು, ಮೈಸೂರು ಕ್ಯಾಂಪಸ್‌ನಲ್ಲಿ ಪ್ರಾಥಮಿಕ ತರಬೇತಿ ಪಡೆದಿದ್ದಾರೆ.

ಟ್ರೈನಿಗಳು ತರಬೇತಿ ಬಳಿಕ ಆಂತರಿಕ ಮೌಲ್ಯಮಾಪನದಲ್ಲಿ ಉತ್ತೀರ್ಣರಾಗಬೇಕಿದೆ. ಉತ್ತೀರ್ಣರಾಗಲು ಮೂರು ಬಾರಿ ಅವಕಾಶ ನೀಡಲಾಗುತ್ತದೆ. ಆದರೆ, ಅವರು ಅನುತ್ತೀರ್ಣರಾಗಿದ್ದಾರೆ. ಒಪ್ಪಂದದ ಪ್ರಕಾರ ಕಂಪನಿಯಲ್ಲಿ ಮುಂದುವರಿಯಲು ಅವರಿಗೆ ಅವಕಾಶ ಇರುವುದಿಲ್ಲ. ಈ ನೇಮಕಾತಿ ಪದ್ಧತಿಯು ಕಂಪನಿಯಲ್ಲಿ ಎರಡು ದಶಕದಿಂದಲೂ ಚಾಲ್ತಿಯಲ್ಲಿದೆ ಎಂದು ಇನ್ಫೊಸಿಸ್ ತಿಳಿಸಿದೆ.

ಎಲ್‌ಐಸಿಗೆ ₹11,056 ಕೋಟಿ ಲಾಭ

ನವದೆಹಲಿ (ಪಿಟಿಐ): 2024–25ನೇ ಆರ್ಥಿಕ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಭಾರತೀಯ ಜೀವ ವಿಮಾ ನಿಗಮವು (ಎಲ್‌ಐಸಿ) ₹11,056 ಕೋಟಿ ನಿವ್ವಳ ಲಾಭ ಗಳಿಸಿದೆ.

ಹಿಂದಿನ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ಕಂಪನಿಯು ₹9,444 ಕೋಟಿ ಲಾಭ ಗಳಿಸಿತ್ತು. ಈ ಲಾಭಕ್ಕೆ ಹೋಲಿಸಿದರೆ ಶೇ 17ರಷ್ಟು ಏರಿಕೆ ಆಗಿದೆ ಎಂದು ನಿಗಮವು ಷೇರುಪೇಟೆಗೆ ಶುಕ್ರವಾರ ತಿಳಿಸಿದೆ.


ಕಳೆದ ಆರ್ಥಿಕ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ನಿವ್ವಳ ಪ್ರೀಮಿಯಂ ಮೂಲಕ ₹1.17 ಲಕ್ಷ ಕೋಟಿ ಗಳಿಸಿತ್ತು. ಈ ಬಾರಿ ₹1.06 ಲಕ್ಷ ಕೋಟಿ ಗಳಿಸಿದೆ. ಒಟ್ಟು ವರಮಾನವು ₹2.01 ಲಕ್ಷ ಕೋಟಿ ಆಗಿದೆ ಎಂದು ತಿಳಿಸಿದೆ.

ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿಕೆ

ಹೊಸ ದಿಕ್ಕಿನತ್ತ ಕರ್ನಾಟಕದ ಭವಿಷ್ಯ

ಪ್ರಜಾವಾಣಿ ಸಂದರ್ಶನ

• ಚಂದ್ರಹಾಸ ಹಿರೇಮಳಲಿ



ಬೆಂಗಳೂರಿನ ಅರಮನೆ ಮೈದಾನದಲ್ಲಿ ಇದೇ 11ರಿಂದ 14ರವರೆಗೆ ನಡೆಯಲಿರುವ ಜಾಗತಿಕ ಹೂಡಿಕೆದಾರರ ಸಮಾವೇಶದ (ಇನ್‌ವೆಸ್ಟ್ ಕರ್ನಾಟಕ) ಮೂಲಕ ರಾಜ್ಯ ಸರ್ಕಾರ ₹10 ಲಕ್ಷ ಕೋಟಿ ಬಂಡವಾಳ ಹೂಡಿಕೆ ಸೆಳೆಯುವ ಗುರಿ ಇಟ್ಟುಕೊಂಡಿದೆ. ಕೆಲ ತಿಂಗಳಿನಿಂದ ನಿರಂತರವಾಗಿ ಹಲವು ದೇಶಗಳಿಗೆ ಭೇಟಿ ನೀಡಿ, ದೊಡ್ಡ ಮೊತ್ತದ ಬಂಡವಾಳ ಹೂಡಿಕೆಯ ಭರವಸೆ ಪಡೆಯುವಲ್ಲಿ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಯಶಸ್ವಿಯಾಗಿದ್ದಾರೆ. ಅವರ ಜತೆ ‘ಪ್ರಜಾವಾಣಿ’ ನಡೆಸಿದ ಮಾತುಕತೆಯ ಆಯ್ದ ಭಾಗ ಇಲ್ಲಿದೆ.

• 2025ರ ಸಮಾವೇಶ ಹಿಂದಿಗಿಂತ ಹೇಗೆ ಭಿನ್ನ?

ಬದಲಾದ ಜಾಗತಿಕ ನಿಲುವುಗಳಿಂದ ಜಾಗತಿಕ ಬಂಡವಾಳ ಭಾರತದತ್ತ ಹರಿಯುತ್ತಿದೆ. ಬಂಡವಾಳ ಹೂಡಿಕೆಗೆ ಕರ್ನಾಟಕ ಪ್ರಶಸ್ತ ಸ್ಥಳ ಎನ್ನುವುದನ್ನು ವಿದೇಶದ ಹೆಸರಾಂತ ಕಂಪನಿಗಳಿಗೆ ಮನವರಿಕೆ ಮಾಡಿಕೊಡಲಾಗಿದೆ. ಹೊಸ ಚಿಂತನೆಯ ನಾಯಕತ್ವ, ಉದ್ಯಮ ಮತ್ತು ರಾಜ್ಯ ಸರ್ಕಾರದ ಮಧ್ಯೆ ಪಾಲುದಾರಿಕೆ ಹೆಚ್ಚಿಸುವ ವೇದಿಕೆಯಾಗಿ ಕಾರ್ಯನಿರ್ವಹಿಸುವಂತೆ ಸಮಾವೇಶ ವಿನ್ಯಾಸಗೊಳಿಸಲಾಗಿದೆ. ಸಂಶೋಧನೆ, ಸಹಯೋಗಗಳು ಹೆಚ್ಚಲಿವೆ. ತಯಾರಿಕಾ ಚಟುವಟಿಕೆಗಳು ಗಮನಾರ್ಹವಾಗಿ ವಿಸ್ತಾರಗೊಳ್ಳಲಿವೆ. ಸಮಾವೇಶದ ಮುಖ್ಯ ಧ್ಯೇಯ ಪ್ರಗತಿಯ ಮರುಪರಿಕಲ್ಪನೆ’ ತಂತ್ರಜ್ಞಾನ ಆಧಾರಿತ, ಪರಿಸರ ಸ್ನೇಹಿ, ಸುಸ್ಥಿರ ಹಾಗೂ ಸಮತೋಲನದ ಬೆಳವಣಿಗೆ ಉತ್ತೇಜಿಸುವ ರಾಜ್ಯ ಸರ್ಕಾರದ ಬದ್ಧತೆ ಪ್ರತಿಬಿಂಬಿಸಲಿದೆ. ಸಮಾವೇಶದ ನಂತರ ಕರ್ನಾಟಕದ ಭವಿಷ್ಯ ಹೊಸ ದಿಕ್ಕಿನತ್ತ ಸಾಗಲಿದೆ.

• ಸಿದ್ಧತೆ ಹೇಗಿದೆ, ಎಷ್ಟು ದೇಶಗಳು ಭಾಗವಹಿಸುತ್ತಿವೆ?

ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ. ಸಮಗ್ರವಾಗಿ ರಾಜ್ಯದ ಕೈಗಾರಿಕಾ ಚಿತ್ರಣ ಬದಲಾಯಿಸಲು ನೆರವಾಗಲಿರುವ ಭೂಮಿಕೆಯಾಗಿ ಸಜ್ಜುಗೊಳಿಸಲಾಗಿದೆ. ಈ ಬಾರಿಯ ಸಮಾವೇಶದಲ್ಲಿ ಫ್ರಾನ್ಸ್, ನೆದರ್‌ಲೆಂಡ್, ಜಪಾನ್, ಥಾಯ್ಲೆಂಡ್, ಮಲೇಷ್ಯಾ, ದಕ್ಷಿಣ ಕೊರಿಯಾ, ಇಸ್ರೇಲ್, ನಾರ್ವೆ, ಸ್ವಿಟ್ಜರ್‌ಲೆಂಡ್, ತೈವಾನ್, ಜರ್ಮನಿ, ಆಸ್ಟ್ರೇಲಿಯಾ, ಡೆನ್ಮಾರ್ಕ್, ಪೋಲೆಂಡ್, ಇಟಲಿ, ಬ್ರಿಟನ್, ಸ್ಲೊವೇನಿಯಾ, ಬಹರೇನ್ ಮತ್ತು ಸಿಂಗಪುರ ಸೇರಿ 19 ದೇಶಗಳು ಭಾಗವಹಿಸುತ್ತಿವೆ. ಸಮಾವೇಶದಲ್ಲಿ ಒಂಬತ್ತು ‘ಕಂಟ್ರಿ ಪೆವಿಲಿಯನ್’ ಇರಲಿವೆ.

• ಹೂಡಿಕೆದಾರರಿಗೆ ಕರ್ನಾಟಕ ನೆರೆ ರಾಜ್ಯಗಳಿಗಿಂತ ಹೇಗೆ ಭಿನ್ನ?

ಕರ್ನಾಟಕ ಸ್ವಾತಂತ್ರ್ಯ ಪೂರ್ವದಿಂದಲೂ ಕೈಗಾರಿಕಾ ಹಬ್ ಆಗಿ ಗುರುತಿಸಿಕೊಂಡಿದೆ. ಮೈಸೂರು ಅರಸರು ಹಲವು ಉದ್ದಿಮೆಗಳಿಗೆ ಅಡಿಪಾಯ ಹಾಕಿದ್ದರು. ಇಸ್ರೊ, ಎಚ್‌ಎಎಲ್ ಸೇರಿದಂತೆ ಬಾಹ್ಯಾಕಾಶ, ರಕ್ಷಣಾ ವಲಯದಲ್ಲೂ ಕರ್ನಾಟಕ ಮುಂಚೂಣಿಯಲ್ಲಿದೆ. ವೈದ್ಯಕೀಯ, ಎಂಜಿನಿಯರಿಂಗ್ ಹಬ್ ಆಗಿ ಬೆಳೆದಿದೆ. ಬ್ರ್ಯಾಂಡ್ ಬೆಂಗಳೂರು, ಸಿಲಿಕಾನ್ ಸಿಟಿ ಎಂಬ ಖ್ಯಾತಿ ಗಳಿಸಿದೆ. ಮಾಹಿತಿ ತಂತ್ರಜ್ಞಾನ ವರಮಾನ ಮತ್ತು ರಫ್ತು ವಹಿವಾಟಿನಲ್ಲಿ ಕರ್ನಾಟಕ ದೇಶಕ್ಕೇ ಮೊದಲ ಸ್ಥಾನದಲ್ಲಿದೆ ಈಚೆಗೆ ಕಾಂಗ್ರೆಸ್ ಸರ್ಕಾರ ರೂಪಿಸಿದ ಉದ್ಯಮಿ ಸ್ನೇಹಿ ನಿಯಮಗಳು, ನಿಲುವುಗಳಿಂದಾಗಿ ಕರ್ನಾಟಕ ನವೋದ್ಯಮಗಳ ಹೊಸ ಮನ್ವಂತರಕ್ಕೆ ನಾಂದಿ ಹಾಡಿದೆ.

• ಹೂಡಿಕೆಗೆ ಗುರುತಿಸಿರುವ ಆದ್ಯತಾ ವಲಯಗಳು ಯಾವವು?

ವೈಮಾಂತರಿಕ್ಷ ಮತ್ತು ರಕ್ಷಣೆ, ಎಲೆಕ್ಟ್ರಾನಿಕ್ ಬಿಡಿಭಾಗಗಳು, ವಿದ್ಯುನ್ಮಾನ ವ್ಯವಸ್ಥೆಯ ವಿನ್ಯಾಸ ಹಾಗೂ ತಯಾರಿಕೆ, ಉಗ್ರಾಣ ಹಾಗೂ ಸರಕು ಸಾಗಣೆ, ವಿದ್ಯುತ್ ಚಾಲಿತ ವಾಹನ, ಜವಳಿ, ಸೆಮಿಕಂಡಕ್ಟರ್, ವೈದ್ಯಕೀಯ ತಂತ್ರಜ್ಞಾನ, ಸಂಶೋಧನೆ ಹಾಗೂ ಅಭಿವೃದ್ಧಿ, ಸಣ್ಣ ಮತ್ತು ಮಧ್ಯಮ ಉದ್ಯಮಗಳ (ಎಸ್‌ಎಂಇ) ವಹಿವಾಟು ವಿಸ್ತರಣೆ.

• ಕೈಗಾರಿಕಾ ಸ್ನೇಹಿ ಕಾಗದದಲ್ಲಷ್ಟೇ ಉಳಿದಿದೆಯಲ್ಲ?

ಹೌದು ಈವರೆಗೆ ಅಂತಹ ಸ್ಥಿತಿ ಇತ್ತು. ಈಗ ಎಲ್ಲ ತೊಡಕುಗಳನ್ನು ನಿವಾರಿಸಲಾಗಿದೆ. ‘ಇನ್ವೆಸ್ಟ್ ಕರ್ನಾಟಕ ಫೋರಂ’ಗೆ ಹೊಸ ರೂಪ ನೀಡಲಾಗಿದೆ. ಮುಖ್ಯಸ್ಥರನ್ನಾಗಿ ಐಎಎಸ್ ಅಧಿಕಾರಿ ನೇಮಿಸಲಾಗಿದೆ. ಈ ಫೋರಂ ಹೂಡಿಕೆದಾರರ ಎಲ್ಲ ಅಗತ್ಯಗಳನ್ನು ಪೂರೈಸಲು ಶ್ರಮಿಸಲಿದೆ. ಭೂಮಿ ತಕ್ಷಣಕ್ಕೆ ಸಿಗುವಂತೆ ಮಾಡಲು ಕೈಗಾರಿಕಾ ಪಾರ್ಕ್‌ಗಳನ್ನು (ಭೂ ಬ್ಯಾಂಕ್) ಸಿದ್ಧಗೊಳಿಸಲಾಗಿದೆ. ‘ವಿಷನ್ ಗ್ರೂಪ್’ ರಚಿಸಲಾಗಿದೆ. ಏಕ ಗವಾಕ್ಷಿ ಮೂಲಕ ಎಲ್ಲ ಮೂಲಸೌಕರ್ಯಗಳಿಗೂ ಕಾಲಮಿತಿಯ ಒಳಗೆ ಅನುಮತಿ ದೊರಕಲಿದೆ.

ಸಂಕ್ಷಿಪ್ತ ಸುದ್ದಿ

ಲಾಭಕ್ಕಾಗಿ ಯೂರಿಯಾ ಕೊರತೆ ಸೃಷ್ಟಿ: ಸಚಿವ ನಡ್ಡಾ

ನವದೆಹಲಿ (ಪಿಟಿಐ): ‘ದೇಶದಲ್ಲಿ ಯೂರಿಯಾ ಕೊರತೆ ಇಲ್ಲ’ ಎಂದು ಕೇಂದ್ರ ಸರ್ಕಾರ ಶುಕ್ರವಾರ ತಿಳಿಸಿದೆ.

‘ಮಾರುಕಟ್ಟೆಯ ಮೇಲೆ ಪ್ರಭಾವ ಬೀರಿ, ಲಾಭ ಪಡೆಯಲಿಕ್ಕಾಗಿ ಅನಗತ್ಯ ಕೊರತೆಯನ್ನು ಸೃಷ್ಟಿಸುವವರ ವಿರುದ್ಧ ರಾಜ್ಯ ಸರ್ಕಾರಗಳು ಕ್ರಮ ಕೈಗೊಳ್ಳಬೇಕು’ ಎಂದಿದೆ.

ಉತ್ತರ ಪ್ರದೇಶದ ಧೌರಾಹ್ರಾದಲ್ಲಿ ಯೂರಿಯಾ ಕೊರತೆ ಇದೆ ಎಂದು ಲೋಕಸಭೆಯಲ್ಲಿ ಸಮಾಜವಾದಿ ಪಕ್ಷದ ಸಂಸದ ಆನಂದ್ ಭದೌರಿಯಾ ಅವರು ಪ್ರಸ್ತಾಪಿಸಿದ್ದಕ್ಕೆ, ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರಗಳ ಸಚಿವ ಜೆ.ಪಿ. ನಡ್ಡಾ ಈ ಪ್ರತಿಕ್ರಿಯೆ ನೀಡಿದರು.

ಸೂಚ್ಯಂಕ ಇಳಿಕೆ

ಮುಂಬೈ (ಪಿಟಿಐ): ಸತತ ಮೂರನೇ ದಿನವಾದ ಶುಕ್ರವಾರವೂ ದೇಶದ ಷೇರುಪೇಟೆಯಲ್ಲಿ ಕರಡಿ ಕುಣಿತ ಮುಂದುವರಿದಿದ್ದು, ಷೇರು ಸೂಚ್ಯಂಕಗಳು ಇಳಿಕೆ ಕಂಡಿವೆ.

ರೆಪೊ ದರ ಕಡಿತವು ಹೂಡಿಕೆದಾರರಲ್ಲಿ ಭರವಸೆ ಮೂಡಿಸಿಲ್ಲ. ಹಾಗಾಗಿ, ನಕಾರಾತ್ಮಕ ವಹಿವಾಟು ನಡೆದಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 197 ಅಂಶ ಇಳಿಕೆ ಕಂಡು, 77,860 ಅಂಶಗಳಲ್ಲಿ ಮುಕ್ತಾಯಗೊಂಡಿತು. ವಹಿವಾಟಿನ ಒಂದು ಹಂತದಲ್ಲಿ 582 ಅಂಶ ಇಳಿಕೆಯಾಗಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 43 ಅಂಶ ಇಳಿಕೆಯಾಗಿ, 23,559 ಅಂಶಗಳಲ್ಲಿ ಸ್ಥಿರಗೊಂಡಿತು.

ಅಡಿಕೆ ಧಾರಣೆ (₹ಗಳಲ್ಲಿ)

ಕುಮಟ	
ಚಾಲಿ	31089-36899
ಚಿಪ್ಪು	15599-25899
ಕೋಕ	6099-20109
ಫ್ಯಾಕ್ಟರಿ	3089-22699
ಹಳೆಚಾಲಿ	35899-36619
ಹೊಸಚಾಲಿ	26589-32691
ಶಿವಮೊಗ್ಗ	
ಬೆಟ್ಟೆ	40199-57000
ಗೊರಬಲು	18009-25399
ರಾಶಿ	30199-51899
ಸರಕು	56009-84640
ಸಿದ್ದಾಪುರ	
ಬಿಳಿಗೋಟು	18112-23312
ಚಾಲಿ	34609-37900
ಕೋಕ	11699-18899
ಹೊಸಚಾಲಿ	25699-31599
ಕೆಂಪುಗೋಟು	17112-21412
ರಾಶಿ	41699-46889
ತಟ್ಟಿಬೆಟ್ಟೆ	28899-39899
ಶಿರಸಿ	
ಬೆಟ್ಟೆ	29389-43561
ಬಿಳಿಗೋಟು	15699-29699
ಚಾಲಿ	35108-39401
ಕೆಂಪುಗೋಟು	10609-22799
ರಾಶಿ	43089-48799

ಸಿಯಾಟಲ್‌ನ ಫೆಡರಲ್ ನ್ಯಾಯಾಲಯದಿಂದ ಆದೇಶ

ಪೌರತ್ವ: ಟ್ರಂಪ್ ಆದೇಶಕ್ಕೆ ತಡೆ

ಬೂಸ್ಟನ್ (ಎಪಿ): ಅಮೆರಿಕದಲ್ಲಿ ನೆಲಸಿರುವ ಅಕ್ರಮ ವಲಸಿಗರ ಮಕ್ಕಳಿಗೆ ಜನ್ಮದತ್ತವಾಗಿ ಪೌರತ್ವ ಸಿಗುವುದನ್ನು ನಿರ್ಬಂಧಿಸುವ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಕಾರ್ಯಕಾರಿ ಆದೇಶಕ್ಕೆ ಸಿಯಾಟಲ್‌ನ ಫೆಡರಲ್ ನ್ಯಾಯಾಲಯವು ರಾಷ್ಟ್ರದಾದ್ಯಂತ ಅನಿರ್ದಿಷ್ಟಾವಧಿವರೆಗೆ ಗುರುವಾರ ತಡೆ ನೀಡಿದೆ.

ನಾಲ್ಕು ರಾಜ್ಯಗಳು ಮತ್ತು ವಲಸಿಗರ ಹಕ್ಕುಗಳ ಸಂಘಟನೆಯೊಂದು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಾಧೀಶ ಜಾನ್ ಕೂನೌರ್ ಅವರು, ಟ್ರಂಪ್ ಅವರು ಈ ಆದೇಶದ ಮೂಲಕ ಸಂವಿಧಾನವನ್ನು ಬದಲಾಯಿಸಲು ಯತ್ನಿಸುತ್ತಿದ್ದಾರೆ ಎಂದು ಟೀಕಿಸಿದರು.

ಇದಕ್ಕೂ ಮುನ್ನ ಬುಧವಾರ, ಮೇರಿಲ್ಯಾಂಡ್ ಫೆಡರಲ್ ನ್ಯಾಯಾಧೀಶರು ಇಂಥದ್ದೇ ಪ್ರತ್ಯೇಕ ಪ್ರಕರಣವೊಂದರ ಕುರಿತ ಆದೇಶಕ್ಕೆ ರಾಷ್ಟ್ರದಾದ್ಯಂತ ತಡೆ ನೀಡಿದ್ದರು.

ಬೂಸ್ಟನ್‌ನ ಫೆಡರಲ್ ನ್ಯಾಯಾಧೀಶರು ಸಹ ಟ್ರಂಪ್ ಅವರ ಆದೇಶಕ್ಕೆ ತಡೆಯಾಜ್ಞೆ ಕೋರಿ ಸಲ್ಲಿಸಿರುವ ಅರ್ಜಿಯನ್ನು ಪುರಸ್ಕರಿಸುವ ಸಾಧ್ಯತೆ ಇದೆ. ಸ್ಯಾನ್ ಫ್ರಾನ್ಸಿಸ್ಕೊ, ವಾಷಿಂಗ್ಟನ್ ಸೇರಿದಂತೆ ಹಲವು ನಗರಗಳ ಅಟಾರ್ನಿ ಜನರಲ್‌ಗಳು, ಟ್ರಂಪ್ ಅವರ ಆದೇಶಕ್ಕೆ ತಡೆಯಾಜ್ಞೆ ನೀಡಬೇಕೆಂದು ನ್ಯಾಯಾಧೀಶರಾದ ಲಿಯೊ ಸೊರೊಕಿನ್ ಅವರಿಗೆ ಮನವಿ ಮಾಡಿದ್ದಾರೆ.

ಸಂವಿಧಾನವೇ ಜನ್ಮದತ್ತ ಪೌರತ್ವಕ್ಕೆ ಅನುವು ಮಾಡಿಕೊಡುತ್ತದೆ. ಇದನ್ನು ರದ್ದುಪಡಿಸುವ ಆದೇಶ ನೀಡುವ ಹಕ್ಕು ಟ್ರಂಪ್ ಅವರಿಗೆ ಇಲ್ಲ ಎಂದು ಅವರು ವಾದಿಸಿದ್ದಾರೆ.

ಐಸಿಸಿ ಮೇಲೆ ನಿರ್ಬಂಧ ಹೇರಿಕೆ

ವಾಷಿಂಗ್ಟನ್ (ಎಎಫ್‌ಪಿ): ಅಮೆರಿಕ ಹಾಗೂ ಮಿತ್ರರಾಷ್ಟ್ರಗಳನ್ನು ಗುರಿಯಾಗಿರಿಸಿಕೊಂಡು ಅಂತರರಾಷ್ಟ್ರೀಯ ನ್ಯಾಯಾಲಯ (ಐಸಿಸಿ) ತನಿಖೆ ನಡೆಸುತ್ತಿದೆ ಎಂದು ಆರೋಪಿಸಿರುವ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಅದರ ಮೇಲೆ ನಿರ್ಬಂಧ ಹೇರಿದ್ದಾರೆ.

‘ಜಗತ್ತಿನಾದ್ಯಂತ ‘ನ್ಯಾಯ ಹಾಗೂ ಭರವಸೆ’ಗಾಗಿ ನಿರಂತರ ಕೆಲಸ ಮಾಡಲಾಗುವುದು’ ಎಂದು ಐಸಿಸಿ ತಿರುಗೇಟು ನೀಡಿದೆ.

ಹೇಗ್‌ನಲ್ಲಿರುವ ಐಸಿಸಿ ತನ್ನ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳುವ ಮೂಲಕ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ವಿರುದ್ಧ ಬಂಧನ ವಾರಂಟ್ ಹೊರಡಿಸಲಾಗಿದೆ ಎಂದು ಟ್ರಂಪ್ ಅವರು ಮಂಗಳವಾರ ತಿಳಿಸಿದ್ದರು. ಇದರ ಬೆನ್ನಲ್ಲೇ, ಐಸಿಸಿಗೆ ನಿರ್ಬಂಧ ಹೇರುವ ಕಾರ್ಯಕಾರಿ ಆದೇಶಕ್ಕೆ ಟ್ರಂಪ್ ಗುರುವಾರ ಸಹಿ ಹಾಕಿದ್ದಾರೆ.

ಮಹಾರಾಷ್ಟ್ರ ವಿಧಾನಸಭೆ ಚುನಾವಣೆಗೆ ಮುನ್ನ 39 ಲಕ್ಷ 'ಮತದಾರರ' ಸೇರ್ಪಡೆ: ರಾಹುಲ್ ಗಾಂಧಿ ಆರೋಪ

'ಮತದಾರರ ಪಟ್ಟಿಯಲ್ಲಿ ಮಹಾ ಅಕ್ರಮ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಮಹಾರಾಷ್ಟ್ರದಲ್ಲಿ ಲೋಕಸಭೆ, ವಿಧಾನಸಭೆ ಚುನಾವಣೆಗಳ ನಡುವಿನ ಐದು ತಿಂಗಳ ಅವಧಿಯಲ್ಲಿ ಸುಮಾರು 39 ಲಕ್ಷ ಹೆಸರುಗಳನ್ನು ಮತದಾರರ ಪಟ್ಟಿಗೆ ಸೇರಿಸಲಾಗಿತ್ತು' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಗಂಭೀರ ಆರೋಪ ಮಾಡಿದ್ದಾರೆ.

'ಪಟ್ಟಿಯಲ್ಲಿ ದೋಷವಿದೆ ಎಂದು ತಿಳಿದಿರುವುದರಿಂದಲೇ ಚುನಾವಣೆಗೆ ಬಳಸಿದ ಮತದಾರರ ಪಟ್ಟಿಯನ್ನು ಮಹಾವಿಕಾಸ ಆಘಾಡಿ (ಎಂವಿಎ) ಮೈತ್ರಿ ಪಕ್ಷಗಳಿಗೆ ನೀಡಲು ಆಯೋಗವು ನಿರಾಕರಿಸುತ್ತಿದೆ' ಎಂದು ಅವರು ಜಂಟಿ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

'ಪಟ್ಟಿಯಲ್ಲಿ ದೋಷವಿದೆ ಎಂಬ ಅರಿವು ಆಯೋಗಕ್ಕಿದೆ. ಸೌಮ್ಯವಾಗಿ ಹೇಳುವುದಾದರೆ, ಆಯೋಗಕ್ಕೆ ಮತದಾರರ ಪಟ್ಟಿಯ ಮೇಲೆ ಹಿಡಿತ ಇರಲಿಲ್ಲ. ಕಟುವಾಗಿ ಹೇಳುವುದಾದರೆ ಆಯೋಗವೇ ಮತದಾರರ ಪಟ್ಟಿಗಳನ್ನು ತಿರುಚಿದೆ' ಎಂದು ವಾಗ್ದಾಳಿ ನಡೆಸಿದರು.

ಎಂವಿಎ ಮೈತ್ರಿಪಕ್ಷಗಳಾದ ಎನ್‌ಸಿಪಿ (ಶರದ್ ಪವಾರ್ ಬಣ) ನಾಯಕಿ ಸುಪ್ರಿಯಾ ಸುಳೆ ಮತ್ತು ಶಿವಸೇನಾ (ಉದ್ಧವ್ ಠಾಕ್ರೆ ಬಣ) ನಾಯಕ ಸಂಜಯ್ ರಾವುತ್ ಅವರು ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

'ಚುನಾವಣೆಯಲ್ಲಿ ಬಳಸಿದ್ದ ಮತದಾರರ ಕ್ರೋಡೀಕೃತ ಪಟ್ಟಿಗಳನ್ನು ಪ್ರತಿಪಕ್ಷಗಳಿಗೆ ಒದಗಿಸಲು ಆಯೋಗವು ನಿರಾಕರಿಸಿದರೆ, ನಾವು ನ್ಯಾಯಾಲಯದ ಮೆಟ್ಟಿಲು ಏರಲಿದ್ದೇವೆ' ಎಂದರು.

'2019 ಮತ್ತು 2024ರ ಸಾರ್ವತ್ರಿಕ ಚುನಾವಣೆಗಳ ನಡುವೆ ರಾಜ್ಯದಲ್ಲಿ 32 ಲಕ್ಷ ಮತದಾರರ ಹೆಸರುಗಳು ಸೇರ್ಪಡೆ ಆಗಿವೆ. ಆದರೆ, 2024ರಲ್ಲಿ ಈ ಲೋಕಸಭೆ ಹಾಗೂ ವಿಧಾನಸಭೆ ಚುನಾವಣೆ ನಡೆದ ದಿನಗಳ ನಡುವಿನ ಐದು ತಿಂಗಳಲ್ಲಿ 39 ಲಕ್ಷ ಮತದಾರರ ಹೆಸರುಗಳು ಸೇರ್ಪಡೆಯಾಗಿವೆ' ಎಂದು ಹೇಳಿದರು.

'ಮತದಾರರ ಪಟ್ಟಿ ಪ್ರಜಾಪ್ರಭುತ್ವದ ಮೂಲಭೂತ ಅಗತ್ಯ' ಎಂಬ ಡಾ. ಅಂಬೇಡ್ಕರ್ ಅವರ ಹೇಳಿಕೆಯನ್ನು ಉಲ್ಲೇಖಿಸಿದ ರಾಹುಲ್ ಗಾಂಧಿ, 'ಆಯೋಗವು ಮತದಾರರ ವಿವರಗಳನ್ನು ಫೋಟೊ, ವಿಳಾಸ, ಹೆಸರುಗಳ ಸಮೇತ ನೀಡದಿದ್ದರೆ, ಅದರ ನೇರ ಅರ್ಥ 'ಸಂವಿಧಾನವನ್ನು ಪೂರ್ಣವಾಗಿ ಅಸ್ತವ್ಯಸ್ತಗೊಳಿಸುವತ್ತ ದೇಶ ಮುನ್ನಡೆಯುತ್ತಿದೆ ಎಂಬುದೇ ಆಗಿದೆ' ಎಂದು ವ್ಯಾಖ್ಯಾನಿಸಿದರು.

'ಹಿಮಾಚಲ ಪ್ರದೇಶ ರಾಜ್ಯದ ಮತದಾರರ ಸಂಖ್ಯೆಗೆ ಸಮನಾದ ಮತದಾರರನ್ನು ಮಹಾರಾಷ್ಟ್ರದಲ್ಲಿ ಸೇರ್ಪಡೆ ಮಾಡಲಾಗಿದೆ. ಹೀಗೆ ಸೇರಿಸಲಾದವರ ಮತಗಳು ಬಹುತೇಕ ಎಲ್ಲವೂ ಬಿಜೆಪಿಗೇ ಹೋಗಿವೆ' ಎಂದೂ ರಾಹುಲ್ ದೂರಿದರು.

'ಇದರ ಜೊತೆಗೆ ವಿಧಾನಸಭೆ ಚುನಾವಣೆಗೆ ಪೂರ್ವದಲ್ಲಿ ಹಲವು ಮತದಾರರ ಹೆಸರುಗಳನ್ನು ಕೈಬಿಡಲಾಗಿತ್ತು ಅಥವಾ ವರ್ಗಾಯಿಸಲಾಗಿತ್ತು. ಇವು ಬಹುತೇಕ ದಲಿತರು, ಬುಡಕಟ್ಟು ಜನರು, ಅಲ್ಪಸಂಖ್ಯಾತ ಸಮುದಾಯದ ಮತದಾರರದ್ದಾಗಿದ್ದವು' ಎಂದು ಹೇಳಿದರು.

'ಕಾಮಟಿ ವಿಧಾನಸಭಾ ಕ್ಷೇತ್ರದ ಉದಾಹರಣೆ ನೀಡಿದ ಅವರು, ಕಾಂಗ್ರೆಸ್ ಪಕ್ಷ ಇಲ್ಲಿ ಲೋಕಸಭೆ ಚುನಾವಣೆಯಲ್ಲಿ 1.36 ಲಕ್ಷ ಮತಗಳನ್ನು ಪಡೆದಿದ್ದು, ವಿಧಾನಸಭೆ ಚುನಾವಣೆಯಲ್ಲೂ ಅದೇ ಸಂಖ್ಯೆಯ ಮತಗಳನ್ನು ಪಡೆದಿದೆ. ಆದರೆ, ಬಿಜೆಪಿ ಪಡೆದ ಮತಗಳು 1.19 ಲಕ್ಷದಿಂದ 1.75 ಲಕ್ಷಕ್ಕೆ ಏರಿವೆ. ಎರಡೂ ಚುನಾವಣೆಗಳ ನಡುವೆ ಕಾಂಗ್ರೆಸ್ ಪಡೆದ ಮತಗಳು ಸ್ಥಿರವಾಗಿದ್ದರೆ, ಬಿಜೆಪಿ ಪಡೆದಿರುವ ಮತಗಳು 35 ಸಾವಿರ ಮತಗಳಷ್ಟು ಹೆಚ್ಚಾಗಿವೆ' ಎಂದರು.



ರಾಹುಲ್ ಗಾಂಧಿ ನವದೆಹಲಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಶಿವಸೇನಾ ನಾಯಕ (ಉದ್ಧವ್ ಬಣ)ಸಂಜಯ್ ರಾವುತ್, ಎನ್‌ಸಿಪಿ ನಾಯಕಿ (ಶರದ್ ಪವಾರ್ ಬಣ) ಸುಪ್ರಿಯಾ ಸುಳೆ ಉಪಸ್ಥಿತರಿದ್ದರು —ಪಿಟಿಐ ಚಿತ್ರ

ಮುಖ್ಯಾಂಶಗಳು

- ಕೇಂದ್ರ ಚುನಾವಣಾ ಆಯೋಗದ ವಿರುದ್ಧ ನೇರ ವಾಗ್ದಾಳಿ
- ಕೈಬಿಡಲಾಗಿದ್ದ ಮತದಾರರಲ್ಲಿ ದಲಿತರೇ ಹೆಚ್ಚು
- ಮಿತ್ರ ಪಕ್ಷಗಳ ನಾಯಕರಾದ ಸುಪ್ರಿಯಾ ಸುಳೆ, ಸಂಜಯ್ ರಾವುತ್ ಸಾಥ್

ಚುನಾವಣೆಯಲ್ಲಿ ಮತದಾರರ ಪಟ್ಟಿಯಲ್ಲಿದ್ದ ಒಟ್ಟು ಸಂಖ್ಯೆ ರಾಜ್ಯದ ವಯಸ್ಕರ ಜನಸಂಖ್ಯೆಗಿಂತ ಹೆಚ್ಚಿದೆ. ಆಯೋಗ ವಿವರ ನೀಡದಿದ್ದರೆ ಕೋರ್ಟ್ ಮೆಟ್ಟಿಲೇರುತ್ತೇವೆ

ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕ

'ಲಿಖಿತವಾಗಿ, ವಾಸ್ತವಾಂಶಗಳೊಂದಿಗೆ ಪ್ರತಿಕ್ರಿಯಿಸುತ್ತೇವೆ'

ನವದೆಹಲಿ (ಪಿಟಿಐ): 'ಮಹಾರಾಷ್ಟ್ರ ವಿಧಾನಸಭೆ ಚುನಾವಣೆಯಲ್ಲಿ ಬಳಸಿದ ಮತದಾರರ ಪಟ್ಟಿ ಕುರಿತು ವಾಸ್ತವಾಂಶದ ಜೊತೆಗೆ ಲಿಖಿತವಾಗಿ ಪ್ರತಿಕ್ರಿಯಿಸುತ್ತೇವೆ' ಎಂದು ಚುನಾವಣಾ ಆಯೋಗವು ಪ್ರತಿಕ್ರಿಯಿಸಿದೆ.

ರಾಹುಲ್‌ಗಾಂಧಿ ಅವರ ಆರೋಪದ ಬೆನ್ನಲ್ಲೇ, ಅವರ ಹೆಸರನ್ನು ಉಲ್ಲೇಖಿಸದೇ ಆಯೋಗವು 'ಎಕ್ಸ್'ನಲ್ಲಿ ಪ್ರತಿಕ್ರಿಯಿಸಿದೆ.


'ಮತದಾರರು ಮುಖ್ಯ ಎಂಬುದು ನಿಜ. ರಾಜಕೀಯ ಪಕ್ಷಗಳನ್ನೂ ಪ್ರಮುಖ ಭಾಗೀದಾರರಾಗಿ ಆಯೋಗ ಪರಿಗಣಿಸಲಿದೆ. ಪಕ್ಷಗಳ ನಿಲುವು, ಸಲಹೆ, ಪ್ರಶ್ನೆಗಳನ್ನು ಪ್ರಮುಖವಾಗಿ ಪರಿಗಣಿಸಲಿದೆ' ಎಂದು ಹೇಳಿದೆ.

'ವಸ್ತುಸ್ಥಿತಿ ವಿವರ, ಮತದಾರರ ಪಟ್ಟಿ ರೂಪಿಸಲು ದೇಶದಾದ್ಯಂತ ಬಳಸಲಾಗುವ ಕ್ರಮ ಕುರಿತು ಲಿಖಿತವಾಗಿ ಪ್ರತಿಕ್ರಿಯಿಸಲಿದೆ' ಎಂದು ಹೇಳಿದೆ.



'ಪ್ರಜಾಪ್ರಭುತ್ವ ತಿರುಚಲು ಬಿಡುವುದಿಲ್ಲ'

ನವದೆಹಲಿ (ಪಿಟಿಐ): 'ಮಹಾರಾಷ್ಟ್ರ ವಿಧಾನಸಭೆ ಚುನಾವಣೆಗೆ ಬಳಸಿದ್ದ ಮತದಾರರ ಕ್ರೋಡೀಕೃತ ಪಟ್ಟಿಯನ್ನು ಭಾವಚಿತ್ರದ ಸಮೇತ ಎಕ್ಸೆಲ್‌ನಲ್ಲಿ ಒದಗಿಸಲಿ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಆಗ್ರಹಿಸಿದ್ದಾರೆ.



'ಮಹಾರಾಷ್ಟ್ರ ಮತದಾರರ ಪಟ್ಟಿಯಲ್ಲಿ ದೊಡ್ಡ ವ್ಯತ್ಯಾಸ ಬಯಲಾಗಿದೆ. 'ಪ್ರಜಾಪ್ರಭುತ್ವದ ತಾಯಿ'ಯನ್ನು 'ತಿರುಚಿದ ಪ್ರಜಾಪ್ರಭುತ್ವ'ವಾಗಿಸಲು ಬಿಡುವುದಿಲ್ಲ' ಎಂದೂ ಅವರು 'ಎಕ್ಸ್'ನಲ್ಲಿ ಹೇಳಿದ್ದಾರೆ.

ಆರೋಪ ನಿರಾಧಾರ: ಫಡಣವೀಸ್

ನಾಗ್ಪುರ (ಪಿಟಿಐ): ಮಹಾರಾಷ್ಟ್ರದ ಮತದಾರರ ಪಟ್ಟಿ ಪರಿಷ್ಕರಣೆಯಲ್ಲಿ ಅಕ್ರಮಗಳು ನಡೆದಿವೆ ಎಂಬ ಆರೋಪವನ್ನು ಬಿಜೆಪಿ ನಾಯಕ, ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ತಳ್ಳಿಹಾಕಿದ್ದಾರೆ.

ದೆಹಲಿ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಪರಾಭವಗೊಳ್ಳುವುದರ ಸುಳಿವು ಸಿಕ್ಕಿರುವಂತೆಯೇ, ಅದನ್ನು ಮರೆಮಾಚಲು ಅವರೀಗ ಆರೋಪ ಹೊರಿಸುತ್ತಿದ್ದಾರೆ ಎಂದೂ ಫಡಣವೀಸ್ ಇಲ್ಲಿ ಪ್ರತಿಕ್ರಿಯಿಸಿದರು. ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಲೋಕಸಭೆ ವಿರೋಧಪಕ್ಷದ ನಾಯಕ ರಾಹುಲ್‌ಗಾಂಧಿ ಅವರಿಗೆ ಈಗ ಆತ್ಮಾವಲೋಕನದ ಅಗತ್ಯವಿದೆ. ಇಲ್ಲದಿದ್ದರೆ ಕಾಂಗ್ರೆಸ್ ಪಕ್ಷದ ಪುನಃಶ್ಚೇತನವಾಗದು' ಎಂದು ಹೇಳಿದರು.



12ರಿಂದ ಮೋದಿ ಅಮೆರಿಕ ಪ್ರವಾಸ

ನವದೆಹಲಿ (ಪಿಟಿಐ): 'ಪ್ರಧಾನಿ ನರೇಂದ್ರ ಮೋದಿ ಅವರು ಫೆಬ್ರುವರಿ 12ರಿಂದ ಎರಡು ದಿನ ಅಮೆರಿಕ ಪ್ರವಾಸ ಕೈಗೊಳ್ಳಲಿದ್ದು, ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಜತೆ ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆ' ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಪ್ರಕಟಿಸಿದೆ.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವಿದೇಶಾಂಗ ಕಾರ್ಯದರ್ಶಿ ವಿಕ್ರಂ ಮಿಸ್ರಿ ಅವರು, ಮೋದಿ ಅವರ ಭೇಟಿಯು ಭಾರತ ಮತ್ತು ಅಮೆರಿಕ ನಡುವಣ ದ್ವಿಪಕ್ಷೀಯ ಬಾಂಧವ್ಯವನ್ನು ಇನ್ನಷ್ಟು ಬಲಪಡಿಸಲಿದೆ ಎಂದು ಆಶಿಸಿದರು.

ಅಮೆರಿಕ ಭೇಟಿಗೂ ಮುನ್ನ ಪ್ರಧಾನಿ ಅವರು ಫೆಬ್ರುವರಿ 10ರಿಂದ ಫ್ರಾನ್ಸ್ ಪ್ರವಾಸ ಕೈಗೊಳ್ಳಲಿದ್ದು, ಅಲ್ಲಿ ನಡೆಯುವ 'ಎ.ಐ ಆ್ಯಕ್ಷನ್' ಶೃಂಗದಲ್ಲಿ ಅಧ್ಯಕ್ಷ ಎಮಾನ್ಯುಯೆಲ್ ಮ್ಯಾಕ್ರನ್ ಜೊತೆಗೂಡಿ ಭಾಗವಹಿಸುವರು ಎಂದು ತಿಳಿಸಿದರು.



ನರೇಂದ್ರ ಮೋದಿ

'ಡೊನಾಲ್ಡ್ ಟ್ರಂಪ್ ಅವರು ಎರಡನೇ ಅವಧಿಗೆ ಅಮೆರಿಕದ ಅಧ್ಯಕ್ಷರಾದ ಬಳಿಕ ಪ್ರಧಾನಿ ಮೋದಿ ಅವರು ಅಮೆರಿಕಕ್ಕೆ ನೀಡಲಿರುವ ಮೊದಲ ಭೇಟಿ ಇದು' ಎಂದು ಹೇಳಿದರು.

'ಹೊಸ ಆಡಳಿತ ಅಧಿಕಾರಕ್ಕೆ ಬಂದ ಕೇವಲ ಮೂರು ವಾರಗಳಲ್ಲಿ ಪ್ರಧಾನಿ ಅವರನ್ನು ಅಮೆರಿಕಕ್ಕೆ ಭೇಟಿ ನೀಡುವಂತೆ ಆಹ್ವಾನಿಸಿರುವುದು, ಉಭಯ ದೇಶಗಳ ನಡುವಣ ಪಾಲುದಾರಿಕೆಯ ಮಹತ್ವವನ್ನು ಮತ್ತು ಈ ಪಾಲುದಾರಿಕೆಗೆ ಅಮೆರಿಕದಲ್ಲಿ ಇರುವ ಬೆಂಬಲವನ್ನು ತೋರಿಸುತ್ತದೆ' ಎಂದು ತಿಳಿಸಿದರು.

ಪಟ್ಟಿಯಲ್ಲಿ 487 ಭಾರತೀಯರು

'ಅಮೆರಿಕದ ಅಧಿಕಾರಿಗಳು ದೇಶವನ್ನು ತೊರೆಯುವಂತೆ ಸೂಚಿಸಿರುವ ವಲಸಿಗರಲ್ಲಿ ಭಾರತದ 487 ಪ್ರಜೆಗಳು ಇದ್ದಾರೆ ಎಂಬ ಮಾಹಿತಿ ಇದೆ. ಅದರಲ್ಲಿ 298 ಜನರ ವಿವರಗಳನ್ನು ಭಾರತದೊಂದಿಗೆ ಹಂಚಿಕೊಳ್ಳಲಾಗಿದೆ. ಅಮೆರಿಕವು ಹಂಚಿಕೊಂಡಿರುವ ಮಾಹಿತಿಯನ್ನು ಪರಿಶೀಲಿಸಲಾಗುತ್ತಿದೆ' ಎಂದು ವಿಕ್ರಂ ಮಿಸ್ರಿ ಹೇಳಿದರು.

'ಭಾರತಕ್ಕೆ ವಾಪಸ್ ಕಳುಹಿಸಿದ ವಲಸಿಗರನ್ನು ಅಮಾನವೀಯವಾಗಿ ನಡೆಸಿಕೊಂಡದ್ದರ ಬಗ್ಗೆ ಅಮೆರಿಕಕ್ಕೆ ನಮ್ಮ ಕಳವಳ ತಿಳಿಸಿದ್ದೇವೆ. ಕೈಕೋಳ ತೊಡಿಸುವುದನ್ನು ತಪ್ಪಿಸಬಹುದಿತ್ತು ಎಂದು ಹೇಳಿದ್ದೇವೆ' ಎಂದರು.

'ವಲಸಿಗರನ್ನು ವಾಪಸ್ ಕಳುಹಿಸುವಾಗ ಕೈಕೋಳ ತೊಡಿಸುವುದು ಸೇರಿದಂತೆ ಇತರ ನಿರ್ಬಂಧ ವಿಧಿಸುವ ನಿಯಮವನ್ನು ಅಮೆರಿಕವು 2012ರಿಂದಲೂ ಪಾಲಿಸಿಕೊಂಡು ಬರುತ್ತಿದೆ. ಈ ಹಿಂದೆ ಕೂಡಾ ವಲಸಿಗರನ್ನು ಇದೇ ರೀತಿ ವಾಪಸ್ ಕಳುಹಿಸಲಾಗಿತ್ತು. ಆದರೆ ಆ ಕುರಿತು ಪ್ರತಿಭಟನೆ ದಾಖಲಿಸಿದ್ದರ ಬಗ್ಗೆ ನಮ್ಮ ಬಳಿ ಯಾವುದೇ ದಾಖಲೆಗಳಿಲ್ಲ' ಎಂದು ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ಕುಂಭಮೇಳ: ಹಲವು ಡೇರೆಗಳು ಬೆಂಕಿಗಾಹುತಿ

ಮಹಾಕುಂಭ ನಗರ (ಪಿಟಿಐ): ಪ್ರಯಾಗರಾಜ್‌ನಲ್ಲಿ ನಡೆಯುತ್ತಿರುವ ಮಹಾಕುಂಭ ಮೇಳದಲ್ಲಿ ಶುಕ್ರವಾರ ಅಗ್ನಿ ಅವಘಡ ಸಂಭವಿಸಿದ್ದು, ಹತ್ತಾರು ಡೇರೆಗಳು ಸುಟ್ಟು ಕರಕಲಾಗಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

18ನೇ ಸೆಕ್ಟರ್‌ನ ಇಸ್ಕಾನ್ ಡೇರೆಯಲ್ಲಿ ಮೊದಲು ಕಾಣಿಸಿಕೊಂಡಿದ್ದ ಬೆಂಕಿ ನಂತರ ಸಮೀಪದ ಡೇರೆಗಳಿಗೂ ಹಬ್ಬಿದೆ. ಅರ್ಧ ಗಂಟೆಯಲ್ಲಿ ಬೆಂಕಿಯನ್ನು ಸಂಪೂರ್ಣವಾಗಿ ನಂದಿಸಲಾಯಿತು ಘಟನೆಯಲ್ಲಿ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ ಎಂದು ಅಗ್ನಿಶಾಮಕ ದಳದ ಹಿರಿಯ ಅಧಿಕಾರಿ ಪ್ರಮೋದ್ ಶರ್ಮಾ ತಿಳಿಸಿದರು.

ಮಹಾಕುಂಭ ಮೇಳದಲ್ಲಿ ನಡೆದ ಮೂರನೇ ಅಗ್ನಿ ಅವಘಡ ಘಟನೆ ಇದಾಗಿದೆ.

'ಸ್ಕಿಲ್ ಇಂಡಿಯಾ ಯೋಜನೆ' ಮುಂದುವರಿಕೆಗೆ ಸಂಪುಟ ಅನುಮೋದನೆ

ನವದೆಹಲಿ: ಕೇಂದ್ರ ಸಚಿವ ಸಂಪುಟವು ₹8,800 ಕೋಟಿ ಯೋಜನಾ ಗಾತ್ರದ 'ಸ್ಕಿಲ್ ಇಂಡಿಯಾ ಯೋಜನೆ' ಪುನರ್‌ರಚನೆ ಹಾಗೂ ಮುಂದುವರಿಸುವುದಕ್ಕೆ ಶುಕ್ರವಾರ ಅನುಮೋದನೆ ನೀಡಿದೆ.

'ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಭೆಯು, ಈ ಯೋಜನೆನ್ನು 2026ರ ವರೆಗೆ ಮುಂದುವರಿಸುವುದಕ್ಕೆ ಅನುಮೋದನೆ ನೀಡಿದೆ' ಎಂದು ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವ ಅಶ್ವಿನಿ ವೈಷ್ಣವ್ ಸಭೆ ಬಳಿಕ ಸುದ್ದಿಗಾರರಿಗೆ ತಿಳಿಸಿದ್ದಾರೆ.

ಈ ಯೋಜನೆಯು ಪಿಎಂಕೆವಿವೈ 4.0, ಪಿಎಂ–ಎನ್‌ಎಪಿಎಸ್ ಹಾಗೂ ಜನ ಶಿಕ್ಷಣ ಸಂಸ್ಥಾನ ಯೋಜನೆ (ಜೆಎಸ್‌ಎಸ್) ಒಳಗೊಂಡಿದೆ.

ನಾಲ್ವರು ನಕ್ಸಲರು ಸೆರೆ

ಹೈದರಾಬಾದ್ (ಪಿಟಿಐ): ಇಬ್ಬರು ಮಹಿಳೆಯರು ಸೇರಿದಂತೆ ನಾಲ್ವರು ನಕ್ಸಲರನ್ನು ತೆಲಂಗಾಣದ ಭದ್ರಾದ್ರಿ ಕೊತ್ತಗೊಂಡಂ ಜಿಲ್ಲೆಯಲ್ಲಿ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

ಬಂಧಿತ ನಕ್ಸಲರು ಛತ್ತೀಸಗಢ ಮೂಲದವರಾಗಿದ್ದು, 19ರಿಂದ 45 ವರ್ಷದವರಾಗಿದ್ದಾರೆ. ಚೆರ್ಲಾ ಮಂಡಲದಲ್ಲಿ ಪೊಲೀಸರು ಮತ್ತು ಸಿಆರ್‌ಪಿಎಫ್ ಸಿಬ್ಬಂದಿ ವಾಹನ ತಪಾಸಣೆ ನಡೆಸುತ್ತಿದ್ದಾಗ ಅವರನ್ನು ಬಂಧಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

'ಈ ನಾಲ್ವರ ಬಳಿ ಮಾವೋವಾದಿ ಸಿದ್ಧಾಂತ ಹರಡುವ 30 ಕರಪತ್ರಗಳಿದ್ದವು, ಅವುಗಳನ್ನು ವಶಕ್ಕೆ ಪಡೆದಿದ್ದೇವೆ' ಎಂದು ಪೊಲೀಸರು ಹೇಳಿದ್ದಾರೆ.

ತೆಲಂಗಾಣದ ಸಾರ್ವಜನಿಕ ಭದ್ರತಾ ಕಾಯ್ದೆಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಈ ನಾಲ್ವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಕಾಮೇಶ್ವರ ಚೌಪಾಲ ನಿಧನ



ನವದೆಹಲಿ/ಲಖನೌ (ಪಿಟಿಐ): ಬಿಜೆಪಿ ಮುಖಂಡ, ವಿಶ್ವ ಹಿಂದೂ ಪರಿಷತ್‌ನ ಪದಾಧಿಕಾರಿ ಕಾಮೇಶ್ವರ ಚೌಪಾಲ ಅವರು ದೀರ್ಘಕಾಲದ ಅನಾರೋಗ್ಯದಿಂದ ನಿಧನರಾದರು. ದೆಹಲಿಯ ಸರ್ ಗಂಗಾರಾಮ್ ಆಸ್ಪತ್ರೆಯಲ್ಲಿ ಕೊನೆ ಉಸಿರೆಳೆದಿದ್ದಾರೆ ಎಂದು ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಮಾಧ್ಯಮ ಕೇಂದ್ರ ತಿಳಿಸಿದೆ.

ಅಯೋಧ್ಯೆಯಲ್ಲಿ ಶ್ರೀರಾಮಮಂದಿರ ನಿರ್ಮಾಣಕ್ಕೆ 1989ರಲ್ಲಿ ನಡೆದ ಸಮಾರಂಭದಲ್ಲಿ ಚೌಪಾಲ ಅವರು ಮೊದಲ ಇಟ್ಟಿಗೆ ಯನ್ನಿಟ್ಟಿದ್ದರು. ರಾಷ್ಟ್ರೀಯ ಸ್ವಯಂ ಸೇವಕ ಸಂಘವು (ಆರ್‌ಎಸ್‌ಎಸ್) ಅವರನ್ನು ಮೊದಲ 'ಕರ ಸೇವಕ' ಎಂದು ಕರೆದಿತ್ತು.

ಮೇ 4ಕ್ಕೆ 'ನೀಟ್–ಯುಜಿ'

ನವದೆಹಲಿ (ಪಿಟಿಐ): ವೈದ್ಯಕೀಯ ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ನಡೆಯುವ 'ರಾಷ್ಟ್ರೀಯ ಅರ್ಹತೆ ಮತ್ತು ಪ್ರವೇಶ ಪರೀಕ್ಷೆ'ಯನ್ನು (ನೀಟ್–ಯುಜಿ) ಮೇ 4ರಂದು ನಡೆಸಲಾಗುವುದು ಎಂದು ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ಶುಕ್ರವಾರ ಹೇಳಿದೆ.

'ನೀಟ್–ಯುಜಿ'ಗಾಗಿ ಅರ್ಜಿ ಸಲ್ಲಿಸುವ ಪ್ರಕ್ರಿಯೆ ಶುಕ್ರವಾರದಿಂದಲೇ ಆರಂಭವಾಗಿದ್ದು, ಮಾರ್ಚ್ 7 ಕೊನೆಯ ದಿನ ಎಂದು ಎನ್‌ಟಿಎ ಪ್ರಕಟಣೆ ತಿಳಿಸಿದೆ. ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳ ಸಂಖ್ಯೆಯ ದೃಷ್ಟಿಯಿಂದ ಇದು ದೇಶದ ಅತಿದೊಡ್ಡ ಪ್ರವೇಶ ಪರೀಕ್ಷೆಯಾಗಿದೆ.

ಎಂಬಿಬಿಎಸ್ ಕೋರ್ಸ್‌ನಲ್ಲಿ ದೇಶದಾದ್ಯಂತ ಲಭ್ಯವಿರುವ 1,08,000 ಸೀಟುಗಳ ಭರ್ತಿ ಈ ಪರೀಕ್ಷೆ ಮೂಲಕ ನಡೆಯಲಿದೆ. ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ 56,000 ಸೀಟುಗಳಿದ್ದರೆ, ಖಾಸಗಿ ಕಾಲೇಜುಗಳಲ್ಲಿ 52,000 ಸೀಟುಗಳಿವೆ. 2024ನೇ ಸಾಲಿನಲ್ಲಿ 24 ಲಕ್ಷಕ್ಕೂ ಹೆಚ್ಚು ಅಭ್ಯರ್ಥಿಗಳು 'ನೀಟ್–ಯುಜಿ' ತೆಗೆದುಕೊಂಡಿದ್ದರು.

ಈ ಪರೀಕ್ಷೆಯ ಫಲಿತಾಂಶ ಗಳನ್ನು ಆಧರಿಸಿ ದಂತ, ಆಯುರ್ವೇದ, ಯುನಾನಿ ಮತ್ತು ಸಿದ್ಧ ಕೋರ್ಸ್‌ಗಳಿಗೆ ಪ್ರವೇಶ ಪ್ರಕ್ರಿಯೆಯೂ ನಡೆಯುತ್ತದೆ. 'ನೀಟ್–ಯುಜಿ' ಅನ್ನು ಪೇಪರ್ ಮತ್ತು ಪೆನ್ ವಿಧಾನದಲ್ಲಿ ನಡೆಸಲಾಗುವುದು ಎಂದು ಎನ್‌ಟಿಎ ಕಳೆದ ತಿಂಗಳು ಘೋಷಿಸಿತ್ತು.

ಅರ್ಜಿ ವಜಾ

ನೀಟ್ –ಪಿಜಿ 2024ರ ಅಖಿಲ ಭಾರತ ಕೋಟಾದ (ಎಐಕ್ಯೂ) ಮೂರನೇ ಸುತ್ತಿನ ಸೀಟುಗಳಿಗೆ ನಡೆಸಿರುವ ಕೌನ್ಸೆಲಿಂಗ್ ರದ್ದುಪಡಿಸಿ, ಹೊಸದಾಗಿ ಕೌನ್ಸೆಲಿಂಗ್ ನಡೆಸಲು ನಿರ್ದೇಶನ ಕೋರಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಶುಕ್ರವಾರ ವಜಾಗೊಳಿಸಿದೆ.

ಮಣಿಪುರ: ಅವಿಶ್ವಾಸ ನಿರ್ಣಯಕ್ಕೆ ಕಾಂಗ್ರೆಸ್ ಸಿದ್ಧತೆ

ಪ್ರಜಾವಾಣಿ ವಾರ್ತೆ

ಗುವಾಹಟಿ: ಮಣಿಪುರದಲ್ಲಿ ಬಿರೇನ್ ಸಿಂಗ್ ನೇತೃತ್ವದ ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಲು ನಿರ್ಧರಿಸಲಾಗಿದೆ ಎಂದು ಪ್ರತಿಪಕ್ಷ ಕಾಂಗ್ರೆಸ್ ಹೇಳಿದೆ.

'ಡಬಲ್ ಎಂಜಿನ್ ಸರ್ಕಾರದ ಒಂದು ಎಂಜಿನ್‌ಗೆ ಖಂಡಿತವಾಗಿಯೂ 'ಬ್ರಹ್ಮಾಸ್ತ್ರ ಕ್ಷಿಪಣಿ' ಅಪ್ಪಳಿಸಲಿದೆ. ಕಾಂಗ್ರೆಸ್ ಪಕ್ಷವು ಶೀಘ್ರದಲ್ಲೇ ಅವಿಶ್ವಾಸ ನಿರ್ಣಯ ಮಂಡಿಸಲಿದೆ' ಎಂದು ಕಾಂಗ್ರೆಸ್ ಮಣಿಪುರ ಘಟಕದ ಅಧ್ಯಕ್ಷ ಕೇಶಮ್ ಮೇಘಚಂದ್ರ ಸಿಂಗ್ ಶುಕ್ರವಾರ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.



ಆದರೆ 60 ಸದಸ್ಯ ಬಲದ ಸದನದಲ್ಲಿ ಕೇವಲ ಐದು ಶಾಸಕರನ್ನು ಹೊಂದಿರುವ ಕಾಂಗ್ರೆಸ್ ಯಾವ ರೀತಿ ಅವಿಶ್ವಾಸ ನಿರ್ಣಯ ಮಂಡಿಸಲಿದೆ ಎಂಬ ಬಗ್ಗೆ ಅವರು ಹೆಚ್ಚಿನ ವಿವರಗಳನ್ನು ನೀಡಿಲ್ಲ.

32 ಶಾಸಕರನ್ನು ಹೊಂದಿರುವ ಬಿಜೆಪಿಯು ನಾಗಾ ಪೀಪಲ್ಸ್ ಫ್ರಂಟ್‌ನ 5 ಹಾಗೂ ಜೆಡಿಯುನ 6 ಶಾಸಕರ ಬೆಂಬಲವನ್ನೂ ಹೊಂದಿದೆ.

ವಂದೇ ಭಾರತ್: ಪ್ರಯಾಣದ ವೇಳೆ ಆಹಾರ ಖರೀದಿಗೆ ಅವಕಾಶ

ನವದೆಹಲಿ (ಪಿಟಿಐ): ವಂದೇ ಭಾರತ್ ರೈಲಿನಲ್ಲಿ ಪ್ರಯಾಣಿಸುವವರು ಟಿಕೆಟ್ ಕಾಯ್ದಿರಿಸುವಾಗ ಆಹಾರ ಬೇಕೆಂದು ಮೊದಲೇ ಆಯ್ಕೆ ಮಾಡಿರದಿದ್ದರೂ ಪ್ರಯಾಣದ ವೇಳೆ ರೈಲಿನಲ್ಲಿ ಆಹಾರ ಖರೀದಿಸಲು ಅವಕಾಶವಿದೆ ಎಂದು ರೈಲ್ವೆ ಮಂಡಳಿ ಶುಕ್ರವಾರ ಹೇಳಿದೆ.

ವಂದೇ ಭಾರತ್ ರೈಲಿನಲ್ಲಿ ಪ್ರಯಾಣಿಸುವ ಎಲ್ಲರೂ ಪ್ರಯಾಣದ ವೇಳೆ ಬೇಯಿಸಿದ ಆಹಾರ (ಮೀಲ್ಸ್) ಖರೀದಿಸಲು ಅವಕಾಶವಿದೆ. ಜತೆಗೆ, ಸಿದ್ಧ (ರೆಡಿ ಟು ಈಟ್) ಆಹಾರವನ್ನೂ ಖರೀದಿಸಬಹುದಾಗಿದೆ. ಪೂರ್ವ ಪಾವತಿಯ ಆಹಾರವನ್ನು ಪ್ರಯಾಣಿಕರಿಗೆ ನಿಗದಿತ ಸಮಯದೊಳಗೆ ವಿತರಿಸಬೇಕು. ಪ್ರಯಾಣಿಕರಿಗೆ ಕಿರಿಕಿರಿಯಾಗಬಾರದು ಎಂಬ ಕಾರಣಕ್ಕೆ ರಾತ್ರಿ 9 ಗಂಟೆಯ ನಂತರ ಆಹಾರ ಪೂರೈಕೆ, ಮಾರಾಟ ಮಾಡಲು ವೆಂಡರ್‌ಗಳಿಗೆ ಅವಕಾಶವಿರುವುದಿಲ್ಲ ಎಂದೂ ಹೇಳಿದೆ.



ಟಿಕೆಟ್ ಕಾಯ್ದಿರಿಸುವಾಗ ಆಹಾರ ಆಯ್ಕೆ ಮಾಡಿರದವರಿಗೆ, ಹಣ ಪಾವತಿಸು ತ್ತೇವೆ ಎಂದರೂ ಐಆರ್‌ಸಿಟಿಸಿ ಸಿಬ್ಬಂದಿ ಪ್ರಯಾಣದ ವೇಳೆ ಆಹಾರ ನೀಡಲು ನಿರಾಕರಿಸುತ್ತಿದ್ದಾರೆಂದು ಅನೇಕ ಪ್ರಯಾಣಿಕರು ಹಲವು ಬಾರಿ ದೂರು ನೀಡಿದ್ದರು.

'ಆನ್‌ಲೈನ್ ಟಿಕೆಟ್‌ಗೆ ಹೆಚ್ಚು ಶುಲ್ಕ': ರೈಲು ನಿಲ್ದಾಣಗಳ ಕೌಂಟರ್‌ಗಳಲ್ಲಿ ಖುದ್ದಾಗಿ ಟಿಕೆಟ್ ಖರೀದಿಸುವವರಿಗಿಂತ ಐಆರ್‌ಸಿಟಿಸಿ ಆ್ಯಪ್ ಮೂಲಕ ಆನ್‌ಲೈನ್‌ನಲ್ಲಿ ಟಿಕೆಟ್ ಖರೀದಿಸುವವರು ಹೆಚ್ಚು ಹಣ ಪಾವತಿಸುತ್ತಾರೆ. ಅನುಕೂಲ ಸೇವಾ ಶುಲ್ಕ, ವಹಿವಾಟು ಶುಲ್ಕದ ಕಾರಣದಿಂದ ಹೆಚ್ಚು ಹಣ ಪಾವತಿಸುತ್ತಾರೆ ಎಂದು ಸರ್ಕಾರ ತಿಳಿಸಿದೆ.

ರಾಷ್ಟ್ರೀಯ ಕ್ರೀಡಾಕೂಟ: ಪದಕ ಪಟ್ಟಿಯಲ್ಲಿ ಕರ್ನಾಟಕವನ್ನು ಹಿಂದಿಕ್ಕಿದ ಸರ್ವಿಸಸ್

ಬಾಕ್ಸಿಂಗ್: ಲವ್ಲಿನಾಗೆ ಚಿನ್ನದ ಪದಕ

ಡೆಹ್ರಾಡೂನ್ (ಪಿಟಿಐ): ಟೋಕಿಯೊ ಒಲಿಂಪಿಕ್ಸ್ ಕಂಚಿನ ಪದಕ ವಿಜೇತೆ ಲವ್ಲಿನಾ ಬೊರ್ಗೊಹೈನ್ ಇಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಕ್ರೀಡಾಕೂಟದ ಬಾಕ್ಸಿಂಗ್‌ನ ಮಹಿಳೆಯರ 75 ಕೆಜಿ ವಿಭಾಗದಲ್ಲಿ ಚಿನ್ನದ ಪದಕ ಗೆದ್ದರು.

ಪ್ಯಾರಿಸ್ ಒಲಿಂಪಿಕ್ಸ್ ಬಳಿಕ ಮೊದಲ ಬಾರಿ ಸ್ಪರ್ಧಾ ಕಣಕ್ಕೆ ಮರಳಿದ ಅಸ್ಸಾಂನ 27 ವರ್ಷ ವಯಸ್ಸಿನ ಲವ್ಲಿನಾ ಶುಕ್ರವಾರ ನಡೆದ ಫೈನಲ್ ಹಣಾಹಣಿಯಲ್ಲಿ 5-0ಯಿಂದ ಚಂಡೀಗಢದ ಪ್ರಾಂಶು ರಾಥೋಡ್ ಅವರನ್ನು ಸೋಲಿಸಿದರು.

ಥಾಪಾಗೆ ಬೆಳ್ಳಿ: ಆರು ಬಾರಿಯ ಏಷ್ಯನ್ ಚಾಂಪಿಯನ್ ಶಿವ ಥಾಪಾ ಅವರಿಗೆ ಪುರುಷರ 63.5 ಕೆಜಿ ವಿಭಾಗದ ಫೈನಲ್‌ನಲ್ಲಿ ನಿರಾಸೆಯಾಯಿತು. ಸರ್ವಿಸಸ್ ಕ್ರೀಡಾ ನಿಯಂತ್ರಣ ಮಂಡಳಿಯ (ಎಸ್‌ಎಸ್‌ಸಿಬಿ) ವಾನ್‌ಶಾಜ್ ಅವರು 4-3ರಿಂದ ಅಸ್ಸಾಂನ ಥಾಪಾ ಅವರನ್ನು ಮಣಿಸಿ ಚಿನ್ನ ಗೆದ್ದರು.

ಪುರುಷರ ಫ್ಲೈವೇಟ್ (51 ಕೆಜಿ) ಸ್ಪರ್ಧೆಯಲ್ಲಿ ಎಸ್‌ಎಸ್‌ಸಿಬಿಯ ಮಾಂಡೆಂಗ್ಬಾಮ್ ಸಿಂಗ್ 4-1ರಿಂದ ಚಂಡೀಗಢದ ಅನ್ಮುಲ್ ಪೂನಿಯಾ ಅವರನ್ನು ಸೋಲಿಸಿ ಚಿನ್ನಕ್ಕೆ ಮುತ್ತಿಟ್ಟರು.

ಕಾಮನ್‌ವೆಲ್ತ್ ಗೇಮ್ಸ್ ಕಂಚಿನ ಪದಕ ವಿಜೇತೆ ಜಾಸ್ಮಿನ್ ಲಂಬೋರಿಯಾ ಅವರು ಮಹಿಳೆಯರ 60 ಕೆಜಿ ವಿಭಾಗದಲ್ಲಿ ಪ್ರಾಬಲ್ಯ ಮೆರೆದರು. ಸರ್ವಿಸಸ್ ತಂಡವನ್ನು ಪ್ರತಿನಿಧಿಸುತ್ತಿರುವ ಅವರು ಫೈನಲ್ ಹಣಾಹಣಿಯಲ್ಲಿ 5-0ಯಿಂದ ವಿಶ್ವ ಚಾಂಪಿಯನ್‌ಷಿಪ್ ಕಂಚು ವಿಜೇತೆ ಮನೀಷಾ ಮೌನ್ (ಹರಿಯಾಣ) ಅವರನ್ನು ಸೋಲಿಸಿ ಚಿನ್ನ ಗೆದ್ದರು.

ಮಹಿಳೆಯರ ಬ್ಯಾಂಟಮ್‌ವೇಟ್ ವಿಭಾಗದಲ್ಲಿ ಮಧ್ಯಪ್ರದೇಶದ ದಿವ್ಯಾ ಪನ್ವಾರ್ 4-1 ಅಂತರರಿಂದ ಉತ್ತರ ಪ್ರದೇಶದ ಸೋನಿಯಾ ಲಾಥರ್ ವಿರುದ್ಧ ಗೆದ್ದು, ಚಿನ್ನದ ಪದಕವನ್ನು ಕೊರಳಿಗೇರಿಸಿಕೊಂಡರು. ಮಹಿಳೆಯರ ಫ್ಲೈವೇಟ್ (50 ಕೆಜಿ) ಸ್ಪರ್ಧೆಯಲ್ಲಿ ಸ್ಥಳೀಯ ಬಾಕ್ಸರ್ ನಿವೇದಿತಾ ಕಾರ್ಕಿ ಚಿನ್ನ ಗೆದ್ದರು. ಅವರು ಫೈನಲ್‌ನಲ್ಲಿ ಹರಿಯಾಣದ ಕಲ್ಪನಾ ವಿರುದ್ಧ ಜಯ ಸಾಧಿಸಿದರು.

ಮಾಜಿ ಯೂತ್ ವಿಶ್ವ ಚಾಂಪಿಯನ್ ಅಂಕುಶಿತಾ ಬೊರೊ (ಅಸ್ಸಾಂ) ಅವರು ಮಹಿಳೆಯರ ವೆಲ್ಟರ್‌ವೇಟ್ (66 ಕೆಜಿ) ಸ್ಪರ್ಧೆಯ ಫೈನಲ್‌ನಲ್ಲಿ ಉತ್ತರಾಖಂಡದ ಕಾಜಲ್ ಅವರನ್ನು ಸೋಲಿಸಿ, ಚಿನ್ನ ಗೆದ್ದರು.

ಹಾಕಿ ಹಿನ್ನಡೆ: ರೋಶ್ನಾಬಾದ್‌ನ ವಿ.ಕೆ. ಹಾಕಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಹಾಕಿ ಟೂರ್ನಿಯ ಮಹಿಳೆಯರ ವಿಭಾಗದ ಪಂದ್ಯದಲ್ಲಿ ಒಡಿಶಾ 4-1 ಗೋಲುಗಳಿಂದ ಕರ್ನಾಟಕ ತಂಡವನ್ನು ಸೋಲಿಸಿತು.





ಅಸ್ಸಾಂನ ಲವ್ಲಿನಾ ಬೊರ್ಗೊಹೈನ್ (ಎಡಚಿತ್ರ). ಶಿವ ಥಾಪಾ ಅವರನ್ನು ಸೋಲಿಸಿ ಚಿನ್ನ ಗೆದ್ದ ಸರ್ವಿಸಸ್ ಕ್ರೀಡಾ ನಿಯಂತ್ರಣ ಮಂಡಳಿಯ ವಾನ್‌ಶಾಜ್ –ಎಕ್ಸ್ ಚಿತ್ರ

ಆರ್ಚರಿಯಲ್ಲಿ ಹರಿಯಾಣಕ್ಕೆ 2 ಚಿನ್ನ

ಡೆಹ್ರಾಡೂನ್ (ಪಿಟಿಐ): ಹರಿಯಾಣ, ರಾಷ್ಟ್ರೀಯ ಕ್ರೀಡೆಗಳ ಪುರುಷರ ಮತ್ತು ಮಹಿಳೆಯರ ಆರ್ಚರಿ ಟೀಮ್ ಇಂಡಿಯನ್ ರೌಂಡ್ ತಂಡ ವಿಭಾಗದಲ್ಲಿ ಮೇಲುಗೈ ಸಾಧಿಸಿ ಶುಕ್ರವಾರ ಎರಡು ಚಿನ್ನಗಳನ್ನು ಗೆದ್ದುಕೊಂಡಿತು.

ಯಶು, ಆಶಿಷ್ ಮಲಿಕ್, ರಾಹುಲ್ ಮತ್ತು ರವಿ ಅವರನ್ನೊಳಗೊಂಡ ಹರಿಯಾಣ ಪುರುಷರ ತಂಡ ಚಿನ್ನ ಗೆದ್ದಿತು.

ಉತ್ತರ ಪ್ರದೇಶ ಮತ್ತು ಮಹಾರಾಷ್ಟ್ರ ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ತನ್ನದಾಗಿಸಿಕೊಂಡಿತು.

ಮಹಿಳೆಯರ ವಿಭಾಗದಲ್ಲೂ ಹರಿಯಾಣ (ನಿಕಿತಾ, ದಿವ್ಯಾ, ಮೋನಿಕಾ ಮತ್ತು ಕಾಜಲ್) ಚಿನ್ನ ಜಯಿಸಿತು. ಮಣಿಪುರ ಮತ್ತು ಛತ್ತೀಸಗಢ ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದುಕೊಂಡಿತು.

ಉತ್ತರ ಪ್ರದೇಶದ ಮನಿಷ್ ಅವರು ಪುರುಷರ ವೈಯಕ್ತಿಕ ಚಿನ್ನ ಗೆದ್ದರೆ, ಮಹಿಳೆಯರ ವಿಭಾಗದ ಸ್ವರ್ಣ ಪದಕ ಮಣಿಪುರದ ಲೈಫ್ರಾಕಮ್ ರೋಜಿನಾ ದೇವಿ ಪಾಲಾಯಿತು.

ನೆಟ್‌ಬಾಲ್: ಕರ್ನಾಟಕಕ್ಕೆ ಹಿನ್ನಡೆ

ಡೆಹ್ರಾಡೂನ್ (ಪಿಟಿಐ): ನೆಟ್‌ಬಾಲ್ ಮಹಿಳೆಯರ ವಿಭಾಗದ ಪಂದ್ಯದಲ್ಲಿ ಚಂಡೀಗಢ 54-40 ರಿಂದ ಕರ್ನಾಟಕ ತಂಡವನ್ನು ಮಣಿಸಿತು.

ಪುರುಷರ ವಿಭಾಗದಲ್ಲಿ ಕರ್ನಾಟಕ ಆಡಿದ ಎರಡೂ ಪಂದ್ಯಗಳಲ್ಲಿ ಸೋಲನುಭವಿಸಿತು. ದೆಹಲಿ 51-42 ರಿಂದ, ಉತ್ತರಾಖಂಡ 52-41 ರಿಂದ ಕರ್ನಾಟಕ ತಂಡವನ್ನು ಸೋಲಿಸಿತು.

ರಾಷ್ಟ್ರೀಯ ಕ್ರೀಡಾಕೂಟ: ಪದಕ ಪಟ್ಟಿ

	ತಂಡ	ಚಿನ್ನ	ಬೆಳ್ಳಿ	ಕಂಚು	ಒಟ್ಟು
1	ಸರ್ವಿಸಸ್	39	14	13	66
2	ಕರ್ನಾಟಕ	30	12	16	58
3	ಮಹಾರಾಷ್ಟ್ರ	23	39	45	107
4	ಮಧ್ಯಪ್ರದೇಶ	19	10	16	45
5	ಹರಿಯಾಣ	16	24	27	67
6	ತಮಿಳುನಾಡು	13	17	19	49
7	ಮಣಿಪುರ	12	11	13	36

ಟೆನಿಸ್: ಕರ್ನಾಟಕ ಪುರುಷರ ತಂಡಕ್ಕೆ ಬೆಳ್ಳಿ, ತಮಿಳುನಾಡಿಗೆ ಚಿನ್ನ

ಬೆಂಗಳೂರು: ಕಳೆದ ಬಾರಿಯ ಚಾಂಪಿಯನ್ ಕರ್ನಾಟಕ ಪುರುಷರ ತಂಡವು ಡೆಹ್ರಾಡೂನ್‌ನಲ್ಲಿ ನಡೆಯುತ್ತಿರುವ 38ನೇ ರಾಷ್ಟ್ರೀಯ ಕ್ರೀಡಾಕೂಟದ ಟೆನಿಸ್ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಜಯಿಸಿತು.

ಶುಕ್ರವಾರ ನಡೆದ ಫೈನಲ್ ಹಣಾಹಣಿಯಲ್ಲಿ ತಮಿಳುನಾಡು ತಂಡವು 2-0ಯಿಂದ ಕರ್ನಾಟಕವನ್ನು ಮಣಿಸಿ ಚಿನ್ನ ಗೆದ್ದುಕೊಂಡಿತು. ಕರ್ನಾಟಕ ತಂಡವು 2-1ರಿಂದ ಸರ್ವಿಸಸ್ ತಂಡವನ್ನು ಸೋಲಿಸಿ ಪ್ರಶಸ್ತಿ ಸುತ್ತು ಪ್ರವೇಶಿಸಿತ್ತು.

ಸಿಂಗಲ್ಸ್‌ನ ಮೊದಲ ಸ್ಪರ್ಧೆಯಲ್ಲಿ ಅಭಿನವ್ ಷಣ್ಮುಗಂ 3-6, 7-6 (8-6), 6-4ರಿಂದ ರಿಷಿ ರೆಡ್ಡಿ ವಿರುದ್ಧ ಗೆಲುವು ಸಾಧಿಸಿ, ತಮಿಳುನಾಡು ತಂಡಕ್ಕೆ ಮುನ್ನಡೆ ಒದಗಿಸಿದರು. ಮೊದಲ ಸೆಟ್‌ನಲ್ಲಿ ಪ್ರಾಬಲ್ಯ ಮೆರೆದಿದ್ದ ಅಭಿನವ್‌ಗೆ ಎರಡನೇ ಸೆಟ್‌ನಲ್ಲಿ ಕರ್ನಾಟಕ ಆಟಗಾರ ತಿರುಗೇಟು ನೀಡಿದರು. ಆದರೆ, ನಿರ್ಣಾಯಕ ಸೆಟ್‌ನಲ್ಲಿ ತಮಿಳುನಾಡಿನ ಆಟಗಾರ ಮತ್ತೆ ಹಿಡಿತ ಸಾಧಿಸಿದರು.

ಸೆಮಿಫೈನಲ್‌ನಲ್ಲಿ ಸಿಂಗಲ್ಸ್ ಮತ್ತು ಡಬಲ್ಸ್ ಪಂದ್ಯಗಳಲ್ಲಿ ಮಿಂಚು ಹರಿಸಿದ್ದ ಕರ್ನಾಟಕದ ಅಗ್ರ ಆಟಗಾರ ಎಸ್.ಡಿ.ಪ್ರಜ್ವಲ್ ದೇವ್ ಫೈನಲ್‌ನಲ್ಲಿ ನಿರಾಸೆ ಮೂಡಿಸಿದರು. ಎರಡನೇ ಸಿಂಗಲ್ಸ್ ಸ್ಪರ್ಧೆಯಲ್ಲಿ ಮನೀಶ್ ಸುರೇಶಕುಮಾರ್ 5-7, 6-4, 6-4ರಿಂದ ಮೈಸೂರಿನ ಪ್ರಜ್ವಲ್ ಅವರನ್ನು ಹಿಮ್ಮೆಟ್ಟಿಸಿದರು. ಚುರುಕಿನ ಆಟದ ಮೂಲಕ ಮೊದಲ ಸೆಟ್‌ನಲ್ಲಿ ಪಾರಮ್ಯ ಮೆರೆದಿದ್ದ ಕರ್ನಾಟಕದ ಆಟಗಾರ, ನಂತರ ಲಯ ಕಳೆದುಕೊಂಡರು.

ಮಹಿಳೆಯರ ಫೈನಲ್‌ನಲ್ಲಿ ಮಹಾರಾಷ್ಟ್ರ 2-1ರಿಂದ ಗುಜರಾತ್ ತಂಡವನ್ನು ಸೋಲಿಸಿ ಚಿನ್ನ ಗೆದ್ದಿತು.



ಬೆಳ್ಳಿ ಪದಕ ಗೆದ್ದ ಕರ್ನಾಟಕದ ಪುರುಷರ ಟೆನಿಸ್ ತಂಡ

ಎರಡನೇ ಟೆಸ್ಟ್: ಲಂಕಾ ವಿರುದ್ಧ ಆಸ್ಟ್ರೇಲಿಯಾ ಹಿಡಿತ

ಸ್ಮಿತ್, ಕ್ಯಾರಿ ಅಜೇಯ ಶತಕ

ಗಾಲೆ (ಎಎಫ್‌ಪಿ): ಅನುಭವಿ ಸ್ಟೀವ್ ಸ್ಮಿತ್ ಮತ್ತು ವಿಕೆಟ್ ಕೀಪರ್ ಅಲೆಕ್ಸ್ ಕ್ಯಾರಿ ಅವರ ಅಧಿಕಾರಯುತ ಶತಕಗಳ ನೆರವಿನಿಂದ ಪ್ರವಾಸಿ ಆಸ್ಟ್ರೇಲಿಯಾ ತಂಡ ಎರಡನೇ ಕ್ರಿಕೆಟ್ ಟೆಸ್ಟ್ ಪಂದ್ಯದ ಎರಡನೇ ದಿನ ಶ್ರೀಲಂಕಾ ವಿರುದ್ಧ ಬಲವಾದ ಹಿಡಿತ ಸಾಧಿಸಿತು.

ಶ್ರೀಲಂಕಾದ 257 ರನ್‌ಗಳಿಗೆ ಉತ್ತರವಾಗಿ ಶುಕ್ರವಾರ ಆಟ ಮುಗಿದಾಗ ಆಸ್ಟ್ರೇಲಿಯಾ 80 ಓವರುಗಳಲ್ಲಿ 3 ವಿಕೆಟ್‌ಗೆ 330 ರನ್‌ಗಳಿಸಿ 73 ರನ್‌ಗಳ ಮುನ್ನಡೆ ಪಡೆದಿದೆ. ಎಚ್ಚರಿಕೆಯ ಆಟವಾಡಿದ ಸ್ಮಿತ್ (ಔಟಾಗದೇ 120, 239ಎ) ಮತ್ತು ವೇಗವಾಗಿ ಆಡಿದ ಕ್ಯಾರಿ (ಔಟಾಗದೇ 139, 156ಎ, 4x13, 6x2) ಮುರಿಯದ ನಾಲ್ಕನೇ ವಿಕೆಟ್‌ಗೆ ಈಗಾಗಲೇ 259 ರನ್ ಸೇರಿಸಿದ್ದಾರೆ.

ಲಂಕಾದ ಸ್ಪಿನ್ನರ್‌ಗಳು ಆರಂಭದಲ್ಲಿ ಯಶಸ್ಸು ಗಳಿಸಿದರೂ, ನಂತರ ಎದುರಾಳಿಗಳನ್ನು ಕಟ್ಟಿಹಾಕಲು ಅವರಿಗೆ ಸಾಧ್ಯವಾಗಲಿಲ್ಲ. ಒಂದು ಹಂತದಲ್ಲಿ ಟ್ರಾವಿಸ್ ಹೆಡ್ (21), ಉಸ್ಮಾನ್ ಖ್ವಾಜಾ (36) ಮತ್ತು ಮಾರ್ನಸ್ ಲಾಬುಷೇನ್ (4) ಅವರು 91 ರನ್‌ಗಳಾಗುವಷ್ಟರಲ್ಲಿ ಪೆವಿಲಿಯನ್‌ಗೆ ಮರಳಿದ್ದರು. ಆಫ್ ಸ್ಪಿನ್ನರ್ ನಿಶಾನ್ ಪೆರಿಸ್ ಎರಡು ವಿಕೆಟ್ ಗಳಿಸಿದ್ದರು. ಆದರೆ ಸ್ಮಿತ್ ಬೇರೂರಿದರು. ಆಕರ್ಷಕ ಕವರ್‌ಡ್ರೈವ್, ಕರಾರುವಾಕ್ ಪುಲ್ ಹೊಡೆತಗಳೊಂದಿಗೆ ಒತ್ತಡ ಹೇರಿದರು. ಕಳೆದ ಐದು ಟೆಸ್ಟ್‌ಗಳಲ್ಲಿ ಇದು ಅವರ ನಾಲ್ಕನೇ ಶತಕವಾಗಿದೆ.

ಸಾಂದರ್ಭಿಕ ಸ್ಪಿನ್ನರ್ ಕಮಿಂದು ಮೆಂಡಿಸ್ ಬೌಲಿಂಗ್‌ನಲ್ಲಿ ಮಿಡ್ ವಿಕೆಟ್‌ಗೆ ಪುಲ್ ಮಾಡಿ ಬೌಂಡರಿ ಗಳಿಸುವ ಮೂಲಕ ಟೆಸ್ಟ್ ಪಂದ್ಯಗಳಲ್ಲಿ 36ನೇ ಶತಕ ಗಳಿಸಿದರು. ಈ ಮೂಲಕ ಭಾರತದ ರಾಹುಲ್ ದ್ರಾವಿಡ್ ಮತ್ತು ಇಂಗ್ಲೆಂಡ್‌ನ ಜೋ ರೂಟ್ ಅವರ ಶತಕಗಳ ದಾಖಲೆಯನ್ನು ಸರಿಗಟ್ಟಿದರು. ಜೋಶ್ ಇಂಗ್ಲಿಸ್ ಬದಲು ಐದನೇ ಕ್ರಮಾಂಕಕ್ಕೆ ಬಡ್ತಿಪಡೆದ ಕ್ಯಾರಿ ಈ ಅವಕಾಶವನ್ನು ಚೆನ್ನಾಗಿಯೇ ಬಳಸಿಕೊಂಡು 68 ಎಸೆತಗಳಲ್ಲಿ ಅರ್ಧ ಶತಕ ದಾಟಿದರು. ಸ್ವೀಪ್ ಬೌಂಡರಿ ಮೂಲಕ ಶತಕ ದಾಟಿದರು.

ಗುರುವಾರ 9 ವಿಕೆಟ್‌ಗೆ 229 ರನ್ ಗಳಿಸಿದ್ದ ಆಸ್ಟ್ರೇಲಿಯಾ ಶುಕ್ರವಾರ ಬೆಳಿಗ್ಗೆ 257 ರನ್‌ಗಳಿಗೆ ಮೊದಲ ಇನಿಂಗ್ಸ್ ಮುಗಿಸಿತು.

'ವಾರ್ನ್– ಮುರಳಿ ಟ್ರೋಫಿ'ಗಾಗಿ ಎರಡು ಟೆಸ್ಟ್‌ಗಳ ಸರಣಿಯಲ್ಲಿ ಆಸ್ಟ್ರೇಲಿಯಾ 1-0 ಮುನ್ನಡೆ ಪಡೆದಿದೆ. ಮೊದಲ ಟೆಸ್ಟ್‌ನಲ್ಲಿ ಅನುಭವಿಸಿದ ಇನಿಂಗ್ಸ್ ಮತ್ತು 242 ರನ್‌ಗಳ ಸೋಲು ಲಂಕಾ ಇದುವರೆಗೆ ಕಂಡ ಅತಿ ದೊಡ್ಡ ಸೋಲೆನಿಸಿದೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಶ್ರೀಲಂಕಾ: 257 (ಕಮಿಂದು ಮೆಂಡಿಸ್ ಔಟಾಗದೇ 85; ಮಿಚೆಲ್ ಸ್ಟಾರ್ಕ್ 37ಕ್ಕೆ3, ಮ್ಯಾಥ್ಯೂ ಕುನ್ಹೆಮನ್ 63ಕ್ಕೆ3, ನೇಥನ್ ಲಯನ್ 96ಕ್ಕೆ3); ಆಸ್ಟ್ರೇಲಿಯಾ: 80 ಓವರುಗಳಲ್ಲಿ 3 ವಿಕೆಟ್‌ಗೆ 330 (ಉಸ್ಮಾನ್ ಖ್ವಾಜಾ 36, ಸ್ಟೀವ್ ಸ್ಮಿತ್ ಔಟಾಗದೇ 120, ಅಲೆಕ್ಸ್ ಕ್ಯಾರಿ ಔಟಾಗದೇ 139; ನಿಶಾನ್ ಪೆರಿಸ್ 70ಕ್ಕೆ2).



ಶತಕ ವೀರರು... ಶ್ರೀಲಂಕಾ ವಿರುದ್ಧ ಎರಡನೇ ಟೆಸ್ಟ್ ಪಂದ್ಯದಲ್ಲಿ ಶುಕ್ರವಾರ ಅಜೇಯ ಶತಕ ಬಾರಿಸಿದ ಸ್ಟೀವ್ ಸ್ಮಿತ್ (ಎಡಗಡೆ) ಮತ್ತು ಅಲೆಕ್ಸ್ ಕ್ಯಾರಿ. ಎಎಫ್‌ಪಿ ಚಿತ್ರ

ಬ್ಯಾಸ್ಕೆಟ್‌ಬಾಲ್: 42 ಅಂಕ ಕಲೆಹಾಕಿದ ಜೇಮ್ಸ್ ಲೆಬ್ರಾನ್

ಲಾಸ್ ಏಂಜೆಲಿಸ್ (ಎಪಿ): ಬ್ಯಾಸ್ಕೆಟ್‌ಬಾಲ್ ತಾರೆ ಲೆಬ್ರಾನ್ ಜೇಮ್ಸ್ ಅವರಿಗೆ ವಯಸ್ಸು ಬರೇ ಎಣಿಕೆಗಷ್ಟೇ. ಆಟದ ಮಟ್ಟ ಸ್ವಲ್ಪವೂ ಮಾಸಿಲ್ಲ. ಗುರುವಾರ ರಾತ್ರಿ ಎನ್‌ಬಿಎ ಪಂದ್ಯದಲ್ಲಿ ಈ ಆಟಗಾರ 42 ಪಾಯಿಂಟ್ಸ್ ಕಲೆಹಾಕುವ ಮೂಲಕ ಲೀಗ್‌ನಲ್ಲಿ ಇಷ್ಟೊಂದು ಪಾಯಿಂಟ್ಸ್ ಗಳಿಸಿದ ಅತಿ ಹಿರಿಯ ಆಟಗಾರ ಎಂಬ ಹಿರಿಮೆಗೆ ಪಾತ್ರರಾದರು.

ಅವರ ಅಮೋಘ ಆಟದ ನೆರವಿನಿಂದ ಲಾಸ್ ಏಂಜಲಿಸ್ ಲೇಕರ್ಸ್ ತಂಡ 120-112 ಪಾಯಿಂಟ್‌ಗಳಿಂದ ಗೋಲ್ಡನ್ ಸ್ಟೇಟ್ ವಾರಿಯರ್ಸ್ ತಂಡವನ್ನು ಸೋಲಿಸಿತು. ಜೇಮ್ಸ್ ಅವರ ವಯಸ್ಸು 40 ವರ್ಷ 38 ದಿನ.

ಜೇಮ್ಸ್ ತಮ್ಮ ನೆಚ್ಚಿನ ತಾರೆ ಮೈಕೆಲ್ ಜೋರ್ಡಾನ್ ಅವರ ದಾಖಲೆಯನ್ನು ಮುರಿದರು. ವಾಷಿಂಗ್ಟನ್ ವಿಝರ್ಡ್ಸ್ ಪರ ಜೋರ್ಡಾನ್ ಅವರು 2003ರ ಫೆಬ್ರುವರಿಯಲ್ಲಿ ಈ ದಾಖಲೆ ಸ್ಥಾಪಿಸಿದ್ದಾಗ ಅವರ ವಯಸ್ಸು 40 ವರ್ಷ 4 ದಿನಗಳಾಗಿದ್ದವು.

'ನನಗೆ ಒಂದು ಗ್ಲಾಸ್ ವೈನ್ ಮತ್ತು ಸವಿ ನಿದ್ದೆಯಷ್ಟೇ ಸಾಕು' ಎಂದು ಈ ಸಾಧನೆಯ ನಂತರ ಜೇಮ್ಸ್ ಹೇಳಿದರು.



ಪಾಯಿಂಟ್ಸ್ ಗಳಿಸಲು ಯತ್ನಿಸುತ್ತಿರುವ ಲೆಬ್ರಾನ್ ಜೇಮ್ಸ್ –ಎಎಫ್‌ಪಿ ಚಿತ್ರ

ಪಂದ್ಯವೊಂದರಲ್ಲಿ 40 ಪಾಯಿಂಟ್ಸ್ ಗಳಿಸಿದ ಅತಿ ಕಿರಿಯ ಆಟಗಾರನೆಂಬ ದಾಖಲೆಯೂ ಜೇಮ್ಸ್ ಹೆಸರಿನಲ್ಲಿದೆ. ಕ್ಲೀವ್‌ಲ್ಯಾಂಡ್ ಕೆವಲಿಯರ್ಸ್ ಪರ ಅವರು 2004ರಲ್ಲಿ 40 ಪಾಯಿಂಟ್ಸ್ ಹಾಕಿದ್ದಾಗ ಅವರ ವಯಸ್ಸು 19 ವರ್ಷ 88 ದಿನ.

ಫೈನಲ್‌ಗೆ ಸಾಕೇತ್-ರಾಮಕುಮಾರ್

ಚೆನ್ನೈ (ಪಿಟಿಐ): ಹಾಲಿ ಚಾಂಪಿಯನ್ನರಾದ ರಾಮಕುಮಾರ್ ರಾಮನಾಥನ್ ಮತ್ತು ಸಾಕೇತ್ ಮೈನೇನಿ ಅವರು ಶುಕ್ರವಾರ ಚೆನ್ನೈ ಓಪನ್ ಎಟಿಪಿ ಚಾಲೆಂಜರ್ ಟೂರ್ನಿಯ ಡಬಲ್ಸ್ ಫೈನಲ್‌ನಲ್ಲಿ ಅಗ್ರ ಶ್ರೇಯಾಂಕದ ಎದುರಾಳಿಗಳ ವಿರುದ್ಧ ಪ್ರಯಾಸದ ಗೆಲುವಿನೊಡನೆ ಫೈನಲ್ ತಲುಪಿದಿರು.

ಮೂರನೇ ಶ್ರೇಯಾಂಕ ಪಡೆದಿರುವ ಭಾರತದ ಆಟಗಾರರು 7-6 (5), 7-6 (8) ರಿಂದ ರೇ ಹೋ (ತೈಪಿ) ಮತ್ತು ಕ್ರಿಸ್ಟೋಫರ್ ರೊಮಿಯೊಸ್ ವಿರುದ್ಧ ಜಯ ಗಳಿಸಿದರು.

ರಾಮಕುಮಾರ್ ಮತ್ತು ಸಾಕೇತ್ ಅವರು ಪ್ರಶಸ್ತಿ ನಿರ್ಧರಿಸುವ ಪಂದ್ಯದಲ್ಲಿ ಜಪಾನ್‌ನ ಶಿಂಟಾರೊ ಮೊಚಿಝುಕಿ– ಕೈಟೊ ಯುಸುಗಿ ವಿರುದ್ಧ ಆಡಲಿದ್ದಾರೆ. ಜಪಾನ್‌ನ ಆಟಗಾರರು 4-6, 6-4, 10-6 ರಿಂದ ಭಾರತದ ಜೀವನ್ ನೆಡುಂಚೆಳಿಯನ್– ವಿಜಯ್ ಸುಂದರ್ ಪ್ರಶಾಂತ್ ಜೋಡಿಯನ್ನು ಮಣಿಸಿದ್ದರು.

ಅಗ್ರ ಶ್ರೇಯಾಂಕದ ಬಿಲಿ ಹ್ಯಾರಿಸ್ (ಬ್ರಿಟನ್) ಶನಿವಾರ ಸಿಂಗಲ್ಸ್ ಫೈನಲ್‌ನಲ್ಲಿ ಸ್ವೀಡನ್‌ನ ಇಲಿಯಾಸ್ ಯಮರ್ ಅವರನ್ನು ಎದುರಿಸಲಿದ್ದಾರೆ

ಚಾಂಪಿಯನ್ಸ್ ಟ್ರೋಫಿಗೆ ಸೈಮ್ ಅಲಭ್ಯ



ಕರಾಚಿ (ಪಿಟಿಐ): ಪಾದದ ಮೂಳೆಮುರಿತದಿಂದ ಬಳಲುತ್ತಿರುವ ಪಾಕಿಸ್ತಾನದ ಆರಂಭಿಕ ಬ್ಯಾಟರ್ ಸೈಮ್ ಅಯೂಬ್ ಅವರಿಗೆ 10 ವಾರಗಳ ವಿಶ್ರಾಂತಿಗೆ ಸೂಚಿಸಲಾಗಿದ್ದು, ಇದೇ ತಿಂಗಳು ಆರಂಭವಾಗುವ ಐಸಿಸಿ ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಗೆ ಅಲಭ್ಯರಾಗಿದ್ದಾರೆ.

ಜನವರಿಯಲ್ಲಿ ದಕ್ಷಿಣ ಆಫ್ರಿಕಾ ಪ್ರವಾಸದ ವೇಳೆ 22 ವರ್ಷ ವಯಸ್ಸಿನ ಸೈಮ್ ಗಾಯಗೊಂಡಿದ್ದರು. ಎಂಆರ್‌ಐ ಸ್ಕ್ಯಾನಿಂಗ್, ಎಕ್ಸ್‌ರೇ ಮತ್ತು ವೈದ್ಯಕೀಯ ತಪಾಸಣೆ ನಡೆಸಿ ಗಾಯಗೊಂಡ ದಿನದಿಂದ ಕನಿಷ್ಠ 10 ವಾರಗಳ ವಿಶ್ರಾಂತಿಗೆ ಸೂಚಿಸಲಾಗಿದೆ. ಇಂಗ್ಲೆಂಡ್‌ನಲ್ಲಿ ಪುನಶ್ಚೇತನ ಶಿಬಿರ ಮುಂದುವರಿಸಲಿದ್ದಾರೆ ಎಂದು ಪಾಕಿಸ್ತಾನ ಕ್ರಿಕೆಟ್ ಮಂಡಳಿಯ (ಪಿಸಿಬಿ) ಪ್ರಕಟಣೆ ತಿಳಿಸಿದೆ.

ಕೇಪ್‌ಟೌನ್‌ನಲ್ಲಿ ನಡೆದಿದ್ದ ದಕ್ಷಿಣ ಆಫ್ರಿಕಾ ವಿರುದ್ಧದ ಎರಡನೇ ಟೆಸ್ಟ್‌ನ ಮೊದಲ ದಿನ ಫೀಲ್ಡಿಂಗ್ ಮಾಡುವಾಗ ಸೈಮ್ ಅವರ ಪಾದಕ್ಕೆ ಗಾಯವಾಗಿತ್ತು.

ಪಾಕಿಸ್ತಾನ ತಂಡವು ಐದು ಟಿ20, ಮೂರು ಏಕದಿನ ಪಂದ್ಯಗಳ ಸರಣಿಗಾಗಿ ಮಾರ್ಚ್ 16ರಿಂದ ನ್ಯೂಜಿಲೆಂಡ್ ಪ್ರವಾಸ ಕೈಗೊಳ್ಳಲಿದ್ದು, ಅದಕ್ಕೆ ಸೈಮ್ ಲಭ್ಯತೆಯು ಫಿಟ್‌ನೆಟ್ ಪರೀಕ್ಷೆಯನ್ನು ಅವಲಂಬಿಸಿದೆ.

ಪಾಕಿಸ್ತಾನ–ಕಿವೀಸ್ ಏಕದಿನ ಪಂದ್ಯ ಇಂದು

ಲಾಹೋರ್ (ಪಿಟಿಐ): ಚಾಂಪಿಯನ್ಸ್ ಟ್ರೋಫಿ ಟೂರ್ನಿಗಾಗಿ ನವೀಕರಣಗೊಂಡಿರುವ ಲಾಹೋರ್‌ನ ಗಡ್ಡಾಫಿ ಕ್ರೀಡಾಂಗಣದಲ್ಲಿ ಪಾಕಿಸ್ತಾನ ತಂಡ ಶನಿವಾರ ತ್ರಿಕೋನ ಸರಣಿಯ ಮೊದಲ ಪಂದ್ಯದಲ್ಲಿ ನ್ಯೂಜಿಲೆಂಡ್ ತಂಡವನ್ನು ಎದುರಿಸಲಿದೆ. ಎರಡೂ ತಂಡಗಳಿಗೆ ಚಾಂಪಿಯನ್ಸ್ ಟ್ರೋಫಿಗೆ ಅಂತಿಮ ಸಿದ್ಧತೆ ನಡೆಸಲು ಈ ಸರಣಿ ಅವಕಾಶ ಕಲ್ಪಿಸಿದೆ.

ಪ್ರಮುಖರಿಲ್ಲದೇ ಆಡುತ್ತಿರುವ ದಕ್ಷಿಣ ಆಫ್ರಿಕಾ ಈ ಸರಣಿಯಲ್ಲಿ ಪಾಲ್ಗೊಂಡಿರುವ ಮತ್ತೊಂದು ತಂಡವಾಗಿದೆ.

29 ವರ್ಷಗಳ ನಂತರ ಪಾಕಿಸ್ತಾನವು ಐಸಿಸಿಯ ಮೊದಲ ಪ್ರಮುಖ ಟೂರ್ನಿಗೆ ಆತಿಥ್ಯ ವಹಿಸಲು ತಯಾರಾಗುತ್ತಿದೆ. ಅದಕ್ಕಾಗಿ ಸಜ್ಜುಗೊಳಿಸಿರುವ ಮೂರು ಕ್ರೀಡಾಂಗಣಗಳಲ್ಲಿ, 35,000 ಪ್ರೇಕ್ಷಕರಿಗೆ ಸ್ಥಳಾವಕಾಶ ವಿರುವ ಲಾಹೋರ್‌ನ ಈ ಕ್ರೀಡಾಂಗಣ ಒಂದಾಗಿದೆ. ಕರಾಚಿಯ ನ್ಯಾಷನಲ್ ಸ್ಟೇಡಿಯಂ ಮತ್ತು ರಾವಲ್ಪಿಂಡಿಯ ಪಿಂಡಿ ಕ್ರೀಡಾಂಗಣ ಇನ್ನೆರಡು ಕ್ರೀಡಾಂಗಣಗಳಾಗಿವೆ. ಕರಾಚಿಯಲ್ಲಿ ತ್ರಿಕೋನ ಸರಣಿಯ ಎರಡು ಪಂದ್ಯಗಳು ನಡೆಯಲಿವೆ. ಫೆ. 14ರಂದು ನಡೆಯುವ ಫೈನಲ್ ಇದರಲ್ಲಿ ಒಳಗೊಂಡಿದೆ.

ಪಾಕ್‌ಆರಂಭಆಟಗಾರಸೈಮ್‌ಅಯೂಬ್‌ಗಾಯಾಳಾಗಿ ಈ ಸರಣಿಗೆ ಮತ್ತು ಚಾಂಪಿಯನ್ಸ್ ಟ್ರೋಫಿ ಟೂರ್ನಿಗೆ ಅಲಭ್ಯರಾಗಿದ್ದಾರೆ. ಶಾಹಿನ್ ಶಾ ಅಫ್ರಿದಿ ವೇಗದ ದಾಳಿಯ ಮುಂಚೂಣಿಯಲ್ಲಿದ್ದು, ನಸೀಮ್ ಶಾ, ಹ್ಯಾರಿಸ್ ರೌಫ್ ಮತ್ತು ಮೊಹಮದ್ ಹಸ್ನೇನ್ ಇತರ ವೇಗಿಗಳಾಗಿದ್ದಾರೆ.



ಶಾಹಿನ್ ಶಾ ಅಫ್ರಿದಿ

ಪಾಕ್ ವಿರುದ್ಧದ ಪಂದ್ಯ ತಮಗೆ ಸಿದ್ಧತೆ ನಡೆಸಲು ದೊರೆತ ಸದವಕಾಶ ಎಂದು ನ್ಯೂಜಿಲೆಂಡ್ ನಾಯಕ ಮಿಚೆಲ್ ಸ್ಯಾಂಟ್ನರ್ ಶುಕ್ರವಾರ ತಿಳಿಸಿದರು.

ವೇಗಿ ಲಾಕಿ ಫರ್ಗ್ಯೂಸನ್ ಅವರ ಫಿಟ್ನೆಸ್ ಬಗ್ಗೆ ಸಂದೇಹಗಳು ಎದ್ದಿರುವ ಕಾರಣ ಕಿವೀಸ್ ಪಡೆ, ಜೇಕಬ್ ಡಫಿ ಅವರನ್ನು ಕರೆಸಿಕೊಂಡಿದೆ.

ದಕ್ಷಿಣ ಆಫ್ರಿಕಾದ ಏಳು ಮಂದಿ ಅನುಭವಿ ಆಟಗಾರರು, ತ್ರಿಕೋನ ಸರಣಿ ನಂತರಷ್ಟೇ ತಂಡವನ್ನು ಕೂಡಿಕೊಳ್ಳಲಿದ್ದಾರೆ. ಮಾರ್ಕೊ ಯಾನ್ಸನ್, ರಸೀ ವಾನ್‌ಡೆರ್ ಡಸೆ, ಏಡನ್ ಮರ್ಕರಂ, ಡೇವಿಡ್ ಮಿಲ್ಲರ್, ಕಗಿಸೊ ರಬಾಡ, ರಯಾನ್ ರಿಕಲ್ಟನ್ ಮತ್ತು ಟ್ರಿಸ್ಟನ್ ಸ್ಟಬ್ಸ್ ಅವರು ತ್ರಿಕೋನ ಸರಣಿ ಆಡುತ್ತಿಲ್ಲ. ಹೀಗಾಗಿ ಹಲವು ಹೊಸಮುಖಗಳಿಗೆ ಅವಕಾಶ ಕಲ್ಪಿಸಲಾಗಿದೆ. ಕೇಶವ ಮಹಾರಾಜ್ ಮತ್ತು ಹೆನ್ರಿಚ್ ಕ್ಲಾಸೆನ್ ಫೆ. 12ರಂದು ತಂಡದ ಎರಡನೇ ಪಂದ್ಯದ ವೇಳೆಗೆ ಲಭ್ಯರಾಗಲಿದ್ದಾರೆ. ತೊಡೆಯ ನೋವಿನ ಕಾರಣ ಹರಿಣ ಪಡೆಯ ವೇಗದ ಬೌಲರ್ ಜೆರಾಲ್ಡ್ ಕೋಝಿ ಅವರು ತ್ರಿಕೋನ ಸರಣಿ ಮತ್ತು ಚಾಂಪಿಯನ್ಸ್ ಟ್ರೋಫಿಯಿಂದ ಹೊರಗುಳಿಯುವಂತಾಗಿದೆ.

ಮುಂಬೈಗೆ ಹರಿಯಾಣ ಸವಾಲು

ರಣಜಿ ಟ್ರೋಫಿ: ಕ್ವಾರ್ಟರ್‌ಫೈನಲ್ ಪಂದ್ಯಗಳು ಇಂದಿನಿಂದ

ಕೋಲ್ಕತ್ತ (ಪಿಟಿಐ): ಹಾಲಿ ಚಾಂಪಿಯನ್ ಮುಂಬೈ ತಂಡ, ಶನಿವಾರ ಇಲ್ಲಿ ಆರಂಭವಾಗುವ ರಣಜಿ ಟ್ರೋಫಿ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಸ್ಫೂರ್ತಿಯತ ಹರಿಯಾಣ ತಂಡವನ್ನು ಎದುರಿಸಲಿದ್ದು, ಫಾರ್ಮ್ ಮತ್ತು ಈ ಹಿಂದಿನ ಸಾಧನೆಯ ಆಧಾರದಲ್ಲಿ ಗೆಲ್ಲುವ ನೆಚ್ಚಿನ ತಂಡ ಎನಿಸಿದೆ.

ಲಾಹ್ಲಿಯ ಬನ್ಸಿಲಾಲ್ ಕ್ರೀಡಾಂಗಣದಲ್ಲಿ (ಹರಿಯಾಣದ ತವರು ತಾಣ) ನಡೆಯಬೇಕಾಗಿದ್ದ ಈ ಪಂದ್ಯವನ್ನು ಈಡನ್ ಗಾರ್ಡನ್‌ಗೆ ಸ್ಥಳಾಂತರಿಸಲಾಗಿದ್ದು, ಎರಡೂ ತಂಡಗಳ ಪ್ರಯಾಣ ಯೋಜನೆ ಮೇಲೆ ಪರಿಣಾಮ ಬೀರಿದೆ. ವಿಶೇಷವಾಗಿ ಹರಿಯಾಣಕ್ಕೆ ನಿರಾಸೆಯಾಗಿದ್ದು, ಬಿಸಿಸಿಐ ಈ ಸ್ಥಳಾಂತರಕ್ಕೆ ಕಾರಣವನ್ನೂ ನೀಡಿಲ್ಲ.

ಪಕ್ಕಾ ವೃತ್ತಿಪರ ಮುಂಬೈ ತಂಡ ದೇಶಿ ಕ್ರಿಕೆಟ್‌ನ ಸರ್ವೋಚ್ಚ ಟೂರ್ನಿಯಾದ ರಣಜಿ ಟ್ರೋಫಿಯಲ್ಲಿ ಅಭೂತಪೂರ್ವ 42 ಬಾರಿ ಚಾಂಪಿಯನ್ ಆಗಿ ಮೆರೆದಿದೆ.

ಆದರೆ ಬಲಾಢ್ಯ ಎದುರಾಳಿಯಾಗಿರುವ ಹರಿಯಾಣ ತಂಡವು ಎಂಟರ ಘಟ್ಟದ ಈ ಐದು ದಿನಗಳ ಪಂದ್ಯ ತಟಸ್ಥತಾಣಕ್ಕೆ ಸ್ಥಳಾಂತರವಾಗಿರುವ ವಿಷಯಕ್ಕಿಂತ ತನ್ನ ಮುಂದಿರುವ ಸವಾಲಿನ ಬಗ್ಗೆ ಗಮನ ಕೇಂದ್ರೀಕರಿಸಿದೆ.

ಅಜಿಂಕ್ಯ ರಹಾನೆ ನೇತೃತ್ವದ ತಂಡದಲ್ಲಿ ತಾರಾ ವರ್ಚಸ್ಸಿನ ಆಟಗಾರರಿದ್ದಾರೆ. ಬೀಸಾಟವಾಡುವ ಸೂರ್ಯಕುಮಾರ್ ಯಾದವ್, ಆಲ್‌ರೌಂಡರ್ ಶಿವಂ ದುಬೆ ಅವರು ಇಂಗ್ಲೆಂಡ್ ವಿರುದ್ಧ ಟಿ20 ಸರಣಿಯ ನಂತರ ತಂಡಕ್ಕೆ ಮರಳಿದ್ದಾರೆ. ಈ ಋತುವಿನಲ್ಲಿ ಇವರು ಮುಂಬೈ ಪರ ಒಂದೊಂದು ಪಂದ್ಯ ಆಡಿದ್ದಾರೆ. ಆದರೆ ಮುಂಬೈ ತಂಡದ ಪ್ರಮುಖ ಬ್ಯಾಟರ್‌ಗಳು ಕೈಕೊಟ್ಟಿದ್ದೇ ಹೆಚ್ಚು.

ಅಂಕಿತ್ ಕುಮಾರ್ ನೇತೃತ್ವದ ಹರಿಯಾಣ ತಂಡವು ನಿಶಾಂತ್ ಸಿಂಧು, ಹಿಮಾಂಶು ರಾಣಾ, ಯುವರಾಜ್ ಸಿಂಗ್ ಅವರನ್ನು ಬ್ಯಾಟಿಂಗ್‌ನಲ್ಲಿ ನೆಚ್ಚಿಕೊಂಡಿದೆ. ಬೌಲಿಂಗ್‌ನಲ್ಲಿ ಅನ್ಶುಲ್ ಕಾಂಬೋಜ್, ಅನುಜ್ ಟಕ್ರಾಲ್ ಮತ್ತು ಜಯಂತ್ ಯಾದವ್ ಈ ಋತುವಿನಲ್ಲಿ ಯಶಸ್ಸು ಕಂಡಿದ್ದಾರೆ.

ವಿಶ್ವಾಸದಲ್ಲಿ ವಿದರ್ಭ: ಏಳು ಪಂದ್ಯಗಳಲ್ಲಿ ಆರು ಗೆಲುವುಗಳೊಂದಿಗೆ ಲೀಗ್‌ನಲ್ಲಿ 40 ಪಾಯಿಂಟ್ಸ್ ಗಳಿಸಿ ಎಂಟರ ಘಟ್ಟ ತಲುಪಿರುವ ವಿದರ್ಭ ಈ ಬಾರಿ ಅತಿ ಹೆಚ್ಚು ಪಾಯಿಂಟ್ಸ್ ಕಲೆಹಾಕಿದ ತಂಡವೆನಿಸಿದೆ. ಹೀಗಾಗಿ ತವರು ನಾಗ್ಪುರದಲ್ಲಿ ತಮಿಳುನಾಡು ತಂಡದ ವಿರುದ್ಧ ಶನಿವಾರ ಆರಂಭವಾಗುವ ಇನ್ನೊಂದು ಕ್ವಾರ್ಟರ್‌ಫೈನಲ್‌ನಲ್ಲಿ ಅದು ಗೆಲ್ಲುವ ನೆಚ್ಚಿನ ತಂಡವೆನಿಸಿದೆ. ತಮಿಳುನಾಡು ಡಿ ಗುಂಪಿನಲ್ಲಿ ಮೂರು ಗೆಲುವು, ಮೂರು ಡ್ರಾಗಳೊಡನೆ ಅಗ್ರಸ್ಥಾನ ಪಡೆದಿತ್ತು.

ಕೇರಳಕ್ಕೆ ಸವಾಲು: ಜಮ್ಮು ಮತ್ತು ಕಾಶ್ಮೀರ ತಂಡ ಪುಣೆಯ ಎಂಸಿಎ ಕ್ರೀಡಾಂಗಣದಲ್ಲಿ ನಡೆಯುವ ಇನ್ನೊಂದು ಪಂದ್ಯದಲ್ಲಿ ಕೇರಳ ತಂಡವನ್ನು ಎದುರಿಸಲಿದೆ.



ಅಭ್ಯಾಸನಿರತ ಅಜಿಂಕ್ಯ ರಹಾನೆ

ಕ್ವಾರ್ಟರ್ ಫೈನಲ್ ಹಣಾಹಣಿ

ಮುಂಬೈ–ಹರಿಯಾಣ ಬೆಳಿಗ್ಗೆ 9ರಿಂದ, ಸ್ಥಳ: ಕೋಲ್ಕತ್ತ	ಜಮ್ಮು ಕಾಶ್ಮೀರ–ಕೇರಳ ಬೆಳಿಗ್ಗೆ 9.30ರಿಂದ, ಸ್ಥಳ: ಪುಣೆ
ಸೌರಾಷ್ಟ್ರ–ಗುಜರಾತ್ ಬೆಳಿಗ್ಗೆ 9.30, ಸ್ಥಳ: ರಾಜಕೋಟ್	ವಿದರ್ಭ–ತಮಿಳುನಾಡು ಬೆಳಿಗ್ಗೆ 9.30ರಿಂದ, ಸ್ಥಳ: ನಾಗ್ಪುರ

ಹೆಚ್ಚಿದ ಸೌರಾಷ್ಟ್ರ ಮನೋಬಲ: ಲೀಗ್ ಹಂತದಲ್ಲಿ ನಾಲ್ಕು ಪಂದ್ಯಗಳ ನಂತರ ಕೊನೆಯ ಸ್ಥಾನದಲ್ಲಿದ್ದ ಸೌರಾಷ್ಟ್ರ ನಂತರ ಸತತ ಮೂರು ಗೆಲುವು ಕಂಡು ಕ್ವಾರ್ಟರ್‌ಫೈನಲ್‌ಗೆ ಅರ್ಹತೆ ಪಡೆದಿತ್ತು. ಜಯದೇವ ಉನದ್ಕತ್ ನೇತೃತ್ವದ ಈ ತಂಡ ತವರು ರಾಜಕೋಟ್‌ನಲ್ಲಿ ನಡೆಯುವ ಪಂದ್ಯದಲ್ಲಿ ಗುಜರಾತ್ ತಂಡವನ್ನು ಎದುರಿಸಲಿದೆ.

ಐದು ವರ್ಷಗಳಲ್ಲಿ ಮೂರನೇ ಬಾರಿ ರಣಜಿ ಟ್ರೋಫಿ ಗೆಲ್ಲಲು ಸೌರಾಷ್ಟ್ರ ಅಭಿಯಾನ ನಡೆಸಿದೆ. ಆದರೆ ಈ ತಂಡವು ಲೀಗ್‌ನಲ್ಲಿ 32 ಪಾಯಿಂಟ್ಸ್ ಕಲೆಹಾಕಿದ್ದ ಗುಜರಾತ್ ತಂಡವನ್ನು ನಿರ್ಲಕ್ಷಿಸುವಂತಿಲ್ಲ.

'ಎರಡನೇ ಪಂದ್ಯಕ್ಕೆ ಕೊಹ್ಲಿ ಲಭ್ಯ'

ಕಟಕ್ (ಪಿಟಿಐ): ವಿರಾಟ್ ಕೊಹ್ಲಿ ಅವರ ಫಿಟ್ನೆಸ್ ಬಗ್ಗೆ ಇರುವ ಆತಂಕಕ್ಕೆ ಭಾರತ ತಂಡದ ಉಪನಾಯಕ ಶುಭಮನ್ ಗಿಲ್ ತೆರೆಯೆಳೆದಿದ್ದಾರೆ. ಕೊಹ್ಲಿ ಆರೋಗ್ಯದಿಂದಿದ್ದು, ಭಾನುವಾರ ಇಲ್ಲಿ ಇಂಗ್ಲೆಂಡ್ ವಿರುದ್ಧ ನಡೆಯಲಿರುವ ಎರಡನೇ ಏಕದಿನ ಪಂದ್ಯದ ವೇಳೆ ಫಿಟ್ ಆಗಲಿದ್ದಾರೆ ಎಂದು ಹೇಳಿದ್ದಾರೆ.

36 ವರ್ಷ ವಯಸ್ಸಿನ ಕೊಹ್ಲಿ, ಬಲಮೊಣಕಾಲಿನಲ್ಲಿ ಬಾವು ಕಾಣಿಸಿಕೊಂಡ ಕಾರಣ ನಾಗ್ಪುರದಲ್ಲಿ ನಡೆದ ಮೊದಲ ಏಕದಿನ ಪಂದ್ಯದಲ್ಲಿ ಆಡಿರಲಿಲ್ಲ. ಪಾಕಿಸ್ತಾನ ಮತ್ತು ದುಬೈನಲ್ಲಿ ಫೆ. 19ರಿಂದ ನಡೆಯಲಿರುವ ಐಸಿಸಿ ಚಾಂಪಿಯನ್ಸ್ ಟ್ರೋಫಿಗೆ ಕೆಲವೇ ದಿನಗಳು ಉಳಿದಿರುವಾಗ ಈ ವಿಷಯ ತಂಡದಲ್ಲಿ ಆತಂಕ ಮೂಡಿಸಿತ್ತು.

'ಅವರ ಮೊಣಕಾಲು ಸಮಸ್ಯೆ ಗಂಭೀರವಾದುದಲ್ಲ. ಅವರು ಚೆನ್ನಾಗಿಯೇ ಇದ್ದು ಬುಧವಾರ ಅಭ್ಯಾಸದಲ್ಲಿ ಭಾಗಿಯಾಗಿದ್ದರು. ಆದರೆ ಮರುದಿನ ಎದ್ದಾಗ ಊತ ಕಾಣಿಸಿಕೊಂಡಿತ್ತು. ಅವರು ಎರಡನೇ ಏಕದಿನ ಪಂದ್ಯಕ್ಕೆ ಖಂಡಿತ ಲಭ್ಯರಿರುತ್ತಾರೆ' ಎಂದು ಮೊದಲ ಪಂದ್ಯದಲ್ಲಿ 87 ರನ್ ಬಾರಿಸಿ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಗಿಲ್ ಹೇಳಿದರು. ಅವರು ಡಿಸ್ನಿ-ಹಾಟ್‌ಸ್ಟಾರ್‌ಗೆ ಮಾತನಾಡಿದರು.



ವಿರಾಟ್ ಕೊಹ್ಲಿ

ವೇಗದ ಬೌಲರ್ ಸಕಿಬ್ ಮಹಮೂದ್ ಎಸೆತದಲ್ಲಿ ಜೋಸ್ ಬಟ್ಲರ್ ಮಿಡ್‌ಆನ್‌ನಲ್ಲಿ ಹಿಡಿದ ಡೈವಿಂಗ್ ಕ್ಯಾಚಿಗೆ ಗಿಲ್ ಔಟ್ ಆಗಿದ್ದರು. ಅವರಿಗೆ 13 ರನ್‌ಗಳಿಂದ ಶತಕ ತಪ್ಪಿಹೋಗಿತ್ತು. ಆದರೆ ಆಗ ಭಾರತ (6 ವಿಕೆಟ್‌ಗೆ 235) ಗೆಲುವಿನ ಅಂಚಿನಲ್ಲಿತ್ತು.

'ನಾನು ಶತಕದ ಬಗ್ಗೆ ಯೋಚಿಸಿರಲಿಲ್ಲ. ಫೀಲ್ಡ್ ಪ್ಲೇಸ್‌ಮೆಂಟ್ ಬಗ್ಗೆ ನೋಡಿ ಅದಕ್ಕೆ ತಕ್ಕಂತೆ ಹೊಡೆತಗಳನ್ನು ಆಡುವ ಕಡೆಯತ್ತ ನನ್ನ ಗಮನವಿತ್ತು. ಬೌಲರ್‌ಗಳ ಮೇಲೆ ನಿಯಂತ್ರಣ ಸಾಧಿಸಲು ಹೋಗಿದ್ದೆ. ನಾನು 60ರನ್‌ಗಳ ಆಸುಪಾಸಿನಲ್ಲಿದ್ದರೂ ಹಾಗೇ ಆಡುತ್ತಿದ್ದೆ' ಎಂದರು.

ಮಾರ್ಚ್ 1ರಂದು ಬಿಸಿಸಿಐ ವಿಶೇಷ ಸಾಮಾನ್ಯಸಭೆ

ನವದೆಹಲಿ (ಪಿಟಿಐ): ದೇವಜಿತ್ ಸೈಕಿಯಾ ಅವರು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಕಾರ್ಯದರ್ಶಿ ಸ್ಥಾನ ವಹಿಸಿಕೊಂಡ ನಂತರ ಖಾಲಿ ಉಳಿದಿರುವ ಜಂಟಿ ಕಾರ್ಯದರ್ಶಿ ಸ್ಥಾನದ ನೇಮಕಕ್ಕೆ ಮಂಡಳಿಯು ಮಾರ್ಚ್ 1ರಂದು ವಿಶೇಷ ಸಾಮಾನ್ಯ ಸಭೆ ಕರೆದಿದೆ.

ಜಯ್ ಶಾ, ಡಿ.1ರಂದು ಐಸಿಸಿ ಅಧ್ಯಕ್ಷರಾಗಿ ನೇಮಕಗೊಂಡ ನಂತರ ಖಾಲಿಯುಳಿದಿದ್ದ ಬಿಸಿಸಿಐ ಕಾರ್ಯದರ್ಶಿ ಸ್ಥಾನಕ್ಕೆ, ಜಂಟಿ ಕಾರ್ಯದರ್ಶಿಯಾಗಿದ್ದ ಸೈಕಿಯಾ ಅವರು ಸರ್ವಾನುಮತದಿಂದ ಆಯ್ಕೆಯಾಗಿದ್ದರು. ಬಂಗಾಳ ಕ್ರಿಕೆಟ್ ಸಂಸ್ಥೆ ಮಾಜಿ ಅಧ್ಯಕ್ಷ ಅಭಿಷೇಕ್ ದಾಲ್ಮಿಯಾ (ಪೂರ್ವ ವಲಯ), ದೆಹಲಿ ಮತ್ತು ಜಿಲ್ಲಾ ಕ್ರಿಕೆಟ್ ಸಂಸ್ಥೆ ಮುಖ್ಯಸ್ಥ ರೋಹನ್ ಜೇಟ್ಲ (ಉತ್ತರ ವಲಯ), ಮುಂಬೈ ಕ್ರಿಕೆಟ್ ಸಂಸ್ಥೆಯ ಸಂಜಯ್ ನಾಯಕ್ (ಪಶ್ಚಿಮ ವಲಯ) ಅವರ ಹೆಸರುಗಳು ಜಂಟಿ ಕಾರ್ಯದರ್ಶಿ ಸ್ಥಾನಕ್ಕೆ ಕೇಳಿಬರುತ್ತಿವೆ.

ರಿಯಲ್ ಬೆಂಗಳೂರು ತಂಡಕ್ಕೆ ಜಯ

ಬೆಂಗಳೂರು: ಸಾಂಘಿಕ ಆಟ ಪ್ರದರ್ಶಿಸಿದ ಎಫ್‌ಸಿ ರಿಯಲ್ ಬೆಂಗಳೂರು ತಂಡವು ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 2-1 ಗೋಲುಗಳಿಂದ ಎಎಸ್‌ಸಿ ಅಂಡ್ ಸೆಂಟರ್ ಎಫ್‌ಸಿ ತಂಡವನ್ನು ಸೋಲಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಸಾಂಸ್ವಿಕಂಪವ್‌ಮೀ (7ನೇ ನಿಮಿಷ), ಸಾಹಿಲ್ ಸುರೇಶ್ ಲಮಾಣಿ (64ನೇ ನಿ) ಅವರು ರಿಯಲ್ ಬೆಂಗಳೂರು ಪರ ಗೋಲು ಗಳಿಸಿದರು. ತೊಂಗ್ಬ್ರಾಮ್ ಕೃಷ್ಣಕಾಂತ್ ಸಿಂಗ್ (66ನೇ ನಿ) ಎಎಸ್‌ಸಿ ಪರ ಏಕೈಕ ಗೋಲು ದಾಖಲಿಸಿದರು.

ದಿನದ ಮತ್ತೊಂದು ಪಂದ್ಯದಲ್ಲಿ ಕೊಡಗು ಎಫ್‌ಸಿ ತಂಡವು 3-0ಯಿಂದ ಬಿಯುಎಫ್‌ಸಿ ವಿರುದ್ಧ ಜಯಭೇರಿ ಬಾರಿಸಿತು. ಕೊಡಗು ಪರ ಆದಿತ್ಯ ಪ್ರತಾಪ್ ಸಿಂಗ್ ರಾಥೋಡ್ (44ನೇ ನಿ), ಓಯಿನಂ ಮಲೆಮಂಗಂಬ ಮೈತೇಯಿ (48ನೇ ನಿ) ಮತ್ತು ಟಗ್ರು ಜೇಮ್ಸ್ (71 ನೇ ನಿ) ತಲಾ ಒಂದೊಂದು ಗೋಲು ಗಳಿಸಿದರು.



ಎಫ್‌ಸಿ ರಿಯಲ್ ಬೆಂಗಳೂರು ತಂಡದ ಕಾರ್ತಿಕೇಯನ್ (ಎಡ) ಮತ್ತು ಎಎಸ್‌ಸಿ ತಂಡದ ಸಬೀರ್ ಖಾನ್ ಚೆಂಡಿಗಾಗಿ ಸೆಣಸಾಟ ನಡೆಸಿದರು ಪ್ರಜಾವಾಣಿ ಚಿತ್ರ: ಪುಷ್ಕರ್ ವಿ.

ರಾಷ್ಟ್ರೀಯ ಟಿಟಿ ಕರ್ನಾಟಕಕ್ಕೆ ಮೂರು ಪದಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಆಟಗಾರರು ಮಧ್ಯಪ್ರದೇಶದ ಇಂದೋರ್‌ನಲ್ಲಿ ಶುಕ್ರವಾರ ಮುಕ್ತಾಯಗೊಂಡ ಕೆಡೆಟ್ ಮತ್ತು ಸಬ್‌ಜೂನಿಯರ್ ರಾಷ್ಟ್ರೀಯ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಒಂದು ಬೆಳ್ಳಿ ಸೇರಿ ಮೂರು ಪದಕ ಜಯಿಸಿದ್ದಾರೆ.

ಕರ್ನಾಟಕದ ಸಿದ್ಧಾಂತ್ ಮಂಜುನಾಥ್ ಮತ್ತು ಸ್ವಸ್ತಿಕ್ ಮಂಜುನಾಥ್ ಜೋಡಿ 13 ವರ್ಷದೊಳಗಿನ ಬಾಲಕರ ಡಬಲ್ಸ್ ಫೈನಲ್‌ನಲ್ಲಿ 13-15, 11-9, 13-15, 5-11ರಿಂದ ಪಶ್ಚಿಮ ಬಂಗಾಳದ ಸೌಸ್ವರ್ಯ ಬ್ಯಾನರ್ಜಿ ಮತ್ತು ಬಿಷಲ್ ಮಂಡಲ್ ಅವರಿಗೆ ಸೋತು ಬೆಳ್ಳಿ ಪದಕ ಜಯಿಸಿತು. ಸೆಮಿ-ಫೈನಲ್‌ನಲ್ಲಿ ಅವರು 11-8, 11-7, 11-5ರಿಂದ ಪಾಂಡಿಚೇರಿಯ ಟ್ರೈಜಲ್ ವೊಹ್ರಾ ಮತ್ತು ಸಾತ್ವಿಕ್ ಶರ್ಮಾ ಅವರನ್ನು ಸೋಲಿಸಿದ್ದರು.

15 ವರ್ಷದೊಳಗಿನ ಬಾಲಕರ ಸಿಂಗಲ್ಸ್‌ನಲ್ಲಿ ಕರ್ನಾಟಕದ ಅಥರ್ವ ನವರಂಗ 9-11, 8-11, 9-11ರಿಂದ ರಿತ್ವಿಕ್ ಅವರಿಗೆ ಮಣಿದು ಕಂಚಿನ ಪದಕ ಗೆದ್ದರು. 15 ವರ್ಷಗೊಳಗಿನ ಬಾಲಕರ ತಂಡ ವಿಭಾಗದಲ್ಲಿ ಕರ್ನಾಟಕ ತಂಡ 1-3ರಿಂದ ಪಶ್ಚಿಮ ಬಂಗಾಳಕ್ಕೆ ಸೋತು ಮೂರನೇ ಸ್ಥಾನ ಪಡೆಯಿತು.



ಸಬ್ ಜೂನಿಯರ್ ರಾಷ್ಟ್ರೀಯ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಪದಕ ಗೆದ್ದವರು. (ಮುಂದಿನ ಸಾಲು) ಎಡದಿಂದ ಬಲಕ್ಕೆ; ಸಿದ್ಧಾಂತ್ ಮಂಜುನಾಥ್, ಸ್ವಸ್ತಿಕ್ ಮಂಜುನಾಥ್ (ಹಿಂದಿನ ಸಾಲು) ಸಿದ್ಧಾಂತ್ ಧರೀವಾಲ್, ಅಥರ್ವ ನವರಂಗ, ಅನಿರ್ಬನ್ ರಾಯ್ ಚೌಧರಿ (ಕೋಚ್), ಗೌರವ್ ಗೌಡ, ಅರ್ಣವ್ ಎನ್.

ಚೆನ್ನೈ ರೇಸ್

ಮಾಂಟೆವರ್ಡಿ ಗೆಲ್ಲುವ ನಿರೀಕ್ಷೆ

ಸೌತ್ ಇಂಡಿಯಾ ಸ್ಟೇಯರ್ಸ್ ಟ್ರಯಲ್ ಸ್ಟೇಕ್ಸ್ ಶನಿವಾರದ ಚೆನ್ನೈ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಮಾಂಟೆವರ್ಡಿ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:15ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಪ್ರಿನ್ಸೆಸ್ ಓ ಸ್ಟಾರ್ 9, ವೆಸ್ಟರ್ನ್ ಗರ್ಲ್ 2, ಅಲಸೆರೊ 1

2ನೇ ರೇಸ್: ಸಮ್ಮರ್ ಸಾಂಗ್ 4, ಮಲ್ಟಿವೇವ್ 2, ಫಸ್ಟ್ ಮಿಸೈಲ್ 6

3ನೇ ರೇಸ್: ಸ್ವೀಟ್ ಲೆಗಸಿ 8, ಅಂಗವಾಯ್ 1, ಗ್ರೀಲಿ 4,

4ನೇ ರೇಸ್: ಮದರ್ಸ್ ಗ್ರೇಸ್ 3, ಗೋಲ್ಡನ್ ಲೆಜೆಂಡ್ 10, ಶೀರ್ ಎಲಿಗೆನ್ಸ್ 8

5ನೇ ರೇಸ್: ಆಸ್ಟೋವಾಲ್ 2, ನ್ಯೂ ಡೈಮನ್ಷನ್ 7, ಆಲ್ಡ್‌ಗೇಟ್ 1

6ನೇ ರೇಸ್: ಮಾಂಟೆವರ್ಡಿ 1, ರೂಲಿಂಗ್ ಡೈನಾಸ್ಟಿ 3, ಡೆಸರ್ಟ್ ಹೀರೊ 7

7ನೇ ರೇಸ್: ಕಲ್ಲನಿಯಾ 2, ಫ್ಲೋರಿಶ್ 9, ಮೆಮೋರಿ ಲೇನ್ 4

ಉತ್ತಮ ಬೆಟ್: ಆಸ್ಟೋವಾಲ್

ಜಾಕ್‌ಪಾಟ್ 3,4,5,6,7 | ಟ್ರಿಬಲ್ 5,6,7